ಶನಿವಾರ, ಆಗಸ್ಟ್ 21, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 233 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಕೋವಿಡ್ ಶುರುವಾದ ಮೇಲೆ ಹದಿಹರೆಯದ ಮಕ್ಕಳಲ್ಲಿ ಹಲವು ರೀತಿಯ ಮಾನಸಿಕ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಇಂತಹ ಮಕ್ಕಳ ಮಾನಸಿಕ ಸಮಸ್ಯೆಗಳ ನಿವಾರಣೆಯಲ್ಲಿ ಪೋಷಕರ ಪಾತ್ರ ಹೇಗಿರಬೇಕು?



ಚರ್ಚೆ ದೇಶ ವಿಭಜನೆಯ ಕ್ರೌರ್ಯದ ನೆನಪಿನ ದಿನ ಆಚರಿಸುವ ಅಗತ್ಯ ಇದೆಯೇ? 7
'ಸಚಿವರು ಸರ್ಕಾರದ ಪ್ರತಿನಿಧಿಯಂತೆ ವರ್ತಿಸಲಿ' 9
ಸರ್ಕಾರಿ ಆಸ್ಪತ್ರೆ: ವೈದ್ಯರ ನಿಗಾಕ್ಕೆ ಕೋವಿಡ್ ಅಡ್ಡಿ ! 8

ಸೆನ್ಸೆಕ್ಸ್	ನಿಫ್ಟಿ	₹/$
55,329 ▼	16,450 ▼	74.39 ▼

ಪರ್ಯಾಯ–ಪಾರದರ್ಶಕ ವ್ಯವಸ್ಥೆ ರೂಪಿಸಲು ರಾಜ್ಯ ಸರ್ಕಾರದ ಚಿಂತನೆ

'ಭೂ ಪರಿವರ್ತನೆ' ವ್ಯವಸ್ಥೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂ ಪರಿವರ್ತನೆ ವ್ಯವಸ್ಥೆ ವ್ಯಾಪಕ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಟ್ಟಿದೆ ಎಂಬ ದೂರುಗಳು ಹೆಚ್ಚುತ್ತಿರುವ ಬೆನ್ನಲ್ಲೇ, ಈ ವ್ಯವಸ್ಥೆಯನ್ನೇ ರದ್ದುಗೊಳಿಸಲು ರಾಜ್ಯ ಸರ್ಕಾರ ಚಿಂತನೆ ನಡೆಸಿದೆ.

'ಪ್ರಜಾವಾಣಿ'ಯ ಫೋನ್ ಇನ್ ಕಾರ್ಯಕ್ರಮದಲ್ಲಿ ಶುಕ್ರವಾರ ಪಾಲ್ಗೊಂಡಿದ್ದ ಕಂದಾಯ ಸಚಿವ ಆರ್. ಅಶೋಕ, ಈ ಕುರಿತು ಕೈಗೊಳ್ಳುವ ಉಪಕ್ರಮಗಳ ಕುರಿತು ಮಾತನಾಡಿದರು.

ಕೃಷಿಯಲ್ಲಿ ಆಸಕ್ತಿ ಹೊಂದಿರುವವರು ಭೂಮಿ ಖರೀದಿಸಬೇಕೆಂದರೆ ಸಾಕಷ್ಟು ಅಡೆ–ತಡೆಗಳಿದ್ದವು. ಕಾನೂನುಬದ್ಧವಾಗಿ ಕೃಷಿ ಜಮೀನು ಖರೀದಿಸಲೂ ಲಂಚ ಕೊಡಬೇಕಾಗಿತ್ತು. ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961ರ ಕಲಂ 79ಎ, 79ಬಿ ರದ್ದುಪಡಿಸಿ, ಎಲ್ಲರೂ ಭೂಮಿ ಖರೀದಿಸಲು ಅವಕಾಶ ಮಾಡಿಕೊಡಲಾಯಿತು. ಜಮೀನು ಖರೀದಿ ವೇಳೆ ನಡೆಯುತ್ತಿದ್ದ ಭ್ರಷ್ಟಾಚಾರಕ್ಕೂ ಕಡಿವಾಣ ಹಾಕಲಾಯಿತು. ಭೂ ಪರಿವರ್ತನೆಗೆ ಸಂಬಂಧಿಸಿದಂತೆಯೂ ಇಂಥದ್ದೇ ಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಮುಂದಾಗಿದೆ.

'79ಎ, 79ಬಿ ಕಲಂ ರದ್ದುಪಡಿಸಲು ಮುಂದಾದಾಗ ಹಲವರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಆದರೆ, ಈ ಕ್ರಮದಿಂದ ಸರ್ಕಾರಕ್ಕೆ ₹400 ಕೋಟಿಗೂ ಹೆಚ್ಚು ಮುದ್ರಾಂಕ ಶುಲ್ಕ ಹರಿದು ಬಂದಿದೆ' ಎಂದರು.

ಹೇಗೆ ನಡೆಯುತ್ತದೆ ಭ್ರಷ್ಟಾಚಾರ?: ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕೆ ಅಂದರೆ, ವಸತಿ, ಕೈಗಾರಿಕೆ ಮತ್ತು ವಾಣಿಜ್ಯ ಚಟುವಟಿಕೆಗೆ ಬಳಸಿಕೊಳ್ಳಲು ಭೂಪರಿವರ್ತನೆ ಕೋರಿ ನಾಗರಿಕರು ಅರ್ಜಿ ಸಲ್ಲಿಸಬೇಕು. ಜತೆಗೆ, 30ಕ್ಕೂ ಹೆಚ್ಚು ದಾಖಲೆಗಳನ್ನು ಸಲ್ಲಿಸಬೇಕು. ಈಗ ಇದಕ್ಕೆ ಆನ್‌ಲೈನ್ ವ್ಯವಸ್ಥೆ ಇದ್ದರೂ, ಹಲವು 'ಕೊರತೆ'ಗಳ ನೆಪ ಒಡ್ಡಿ ಅರ್ಜಿ ವಿಲೇವಾರಿ ವಿಳಂಬ ಮಾಡಲಾಗುತ್ತದೆ.

ಭೂಪರಿವರ್ತನೆಯಾದರೆ ಅರ್ಜಿದಾರರಿಗೆ ಹೆಚ್ಚು 'ಲಾಭ' ಆಗುತ್ತದೆ ಎಂದು ಅರಿತಿರುವ ಅಧಿಕಾರಿಗಳು ಇಂತಹ ಅರ್ಜಿಗಳನ್ನು ತ್ವರಿತವಾಗಿ ಮಂಜೂರು ಮಾಡಲು 'ಕಮಿಷನ್'ಗೆ ಬೇಡಿಕೆ ಇಡುವುದು ಸಾಮಾನ್ಯ. ಗ್ರಾಮ ಲೆಕ್ಕಾಧಿಕಾರಿಯಿಂದ ಜಿಲ್ಲಾಧಿಕಾರಿಯವರೆಗೆ ಹಬ್ಬಿರುವ ಜಾಲವಿದು. 'ಭೂಪರಿವರ್ತನೆ' ಎನ್ನುವುದು ಈ ಎಲ್ಲ ಅಧಿಕಾರಿಗಳಿಗೆ ಭಾರಿ 'ಆದಾಯ' ತಂದುಕೊಡುವ ಕಾರ್ಯವೂ ಹೌದು.

ಕಾನೂನುಬದ್ಧ ದಾಖಲೆಗಳಿದ್ದರೂ, ಕಾರಣಗಳು ನೈಜವಾಗಿದ್ದರೂ ಲಂಚ ನೀಡದೆ ಇಂತಹ ಕಡತಗಳು ವಿಲೇವಾರಿ ಆಗುವುದೇ ಇಲ್ಲ. ಬ್ರಿಟಿಷರ ಕಾಲದ ಇಂತಹ ವ್ಯವಸ್ಥೆಯನ್ನು ರದ್ದುಗೊಳಿಸಿ, ಇದಕ್ಕೆ ಪರ್ಯಾಯ ಮತ್ತು ಪಾರದರ್ಶಕ ವ್ಯವಸ್ಥೆ ರೂಪಿಸುವ ಚಿಂತನೆಯನ್ನು ರಾಜ್ಯಸರ್ಕಾರ ಹೊಂದಿದೆ.

ಪ್ರಜಾವಾಣಿ ಫೋನ್–ಇನ್

ನೋಂದಣಿ ಸಮಸ್ಯೆ ನೀಗಿಸಲು 'ಬ್ಯಾಟರಿ'



'ಸರ್ವರ್ ಡೌನ್ ಸಮಸ್ಯೆಯಿಂದ ಆಸ್ತಿ ನೋಂದಣಿ ಪ್ರಕ್ರಿಯೆ ಸರಾಗವಾಗಿ ನಡೆಯುತ್ತಿಲ್ಲ. ಅಲ್ಲದೆ, ವಿದ್ಯುತ್ ವ್ಯತ್ಯಯವೂ ಸಾಕಷ್ಟು ಸಮಸ್ಯೆ ತಂದೊಡ್ಡುತ್ತಿದೆ. ಇದನ್ನು ಸರಿಪಡಿಸಲು ಉಪನೋಂದಣಾಧಿಕಾರಿಗಳ ಕಚೇರಿಗಳಲ್ಲಿ ಬ್ಯಾಟರಿ ವ್ಯವಸ್ಥೆ ಮಾಡಲಾಗುವುದು' ಎಂದು ಅಶೋಕ ಹೇಳಿದರು.

'₹12 ಕೋಟಿ ವೆಚ್ಚದಲ್ಲಿ ಬ್ಯಾಟರಿಗಳನ್ನು ಅಳವಡಿಸಲಾಗುವುದು. ಇನ್ನು, ಆಸ್ತಿ ನೋಂದಣಿಗೆ ಸಂಬಂಧಿಸಿದ ತಂತ್ರಾಂಶಗಳನ್ನು ನಾಲ್ಕೈದು ಇಲಾಖೆಗಳಿಗೂ ಜೋಡಿಸಿರುವುದರಿಂದ ತೊಂದರೆಯಾಗುತ್ತಿದೆ. ಹೊಸದಾಗಿ ಕಾವೇರಿ–2 ತಂತ್ರಾಂಶವನ್ನು ಅಭಿವೃದ್ಧಿ ಪಡಿಸುವ ಜವಾಬ್ದಾರಿಯನ್ನು ಸೆಂಟರ್ ಫಾರ್ ಸ್ಮಾರ್ಟ್ ಗವರ್ನೆನ್ಸ್ ಸಂಸ್ಥೆಗೆ ವಹಿಸಲಾಗಿದೆ. ಆರು ತಿಂಗಳಲ್ಲಿ ಹೊಸ ತಂತ್ರಾಂಶ ಅಳವಡಿಸಲಾಗುವುದು' ಎಂದರು.'ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ ಅಗತ್ಯವಿರುವ ಹಾರ್ಡ್‌ವೇರ್, ತಾಂತ್ರಿಕ ಸಿಬ್ಬಂದಿ ಹಾಗೂ ಕಂಪ್ಯೂಟರ್ ಆಪರೇಟರ್ ಮತ್ತು ಸ್ಟೇಷನರಿ ಸಾಮಗ್ರಿಗಳನ್ನು ಐದು ವರ್ಷಗಳ ಅವಧಿಗೆ ಸರಬರಾಜು ಮಾಡುವ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಲು ಕ್ರಮ ಕೈಗೊಳ್ಳಲಾಗುತ್ತಿದೆ' ಎಂದೂ ತಿಳಿಸಿದರು.

ವಿವರ 4

ಫ್ಲ್ಯಾಟ್: ಮುದ್ರಾಂಕ ಶುಲ್ಕ ಶೇ 2ರಷ್ಟು ಇಳಿಕೆ

'ಕೈಗೆಟಕುವ ದರದಲ್ಲಿನ ಮನೆಗಳ ಖರೀದಿಯನ್ನು ಪ್ರೋತ್ಸಾಹಿಸಲು ₹35 ಲಕ್ಷದಿಂದ ₹45 ಲಕ್ಷದವರೆಗಿನ ಫ್ಲ್ಯಾಟ್ ನೋಂದಣಿಗೆ ಮುದ್ರಾಂಕ ಶುಲ್ಕವನ್ನು ಶೇ 2ರಷ್ಟು ಕಡಿಮೆಗೊಳಿಸಲಾಗುವುದು' ಎಂದು ಅಶೋಕ ಹೇಳಿದರು.

'ಈ ಮೊತ್ತದ ಫ್ಲ್ಯಾಟ್‌ನ ಮೊದಲನೇ ನೋಂದಣಿಗೆ ಶೇ 5ರಷ್ಟು ಮುದ್ರಾಂಕ ಶುಲ್ಕವಿದೆ. ಇದನ್ನು ಶೇ 3ಕ್ಕೆ ಇಳಿಸಲಾಗುವುದು. ಒಂದು ವಾರದಲ್ಲಿ ಈ ಬಗ್ಗೆ ಆದೇಶ ಹೊರಡಿಸಲಾಗುವುದು' ಎಂದರು.



ಅಫ್ಗಾನಿಸ್ತಾನದ ಕಾಬೂಲ್ ವಿಮಾನ ನಿಲ್ದಾಣದ ಆವರಣ ಗೋಡೆಯ ಹೊರಗಿನಿಂದ ಅಫ್ಗನ್ ಜನರು ಮಗುವೊಂದನ್ನು ಅಮೆರಿಕ ಯೋಧರಿಗೆ ಹಸ್ತಾಂತರಿಸಿದರು –ರಾಯಿಟರ್ಸ್ ಚಿತ್ರ

ಸೇಡಿನ ಕ್ರಮಕ್ಕೆ ಮುಂದಾದ ತಾಲಿಬಾನ್

ಪತ್ರಕರ್ತನ ಸಂಬಂಧಿ ಹತ್ಯೆ

ಬರ್ಲಿನ್ (ಎಎಫ್‌ಪಿ/ರಾಯಿಟರ್ಸ್): ಅಫ್ಗಾನಿಸ್ತಾನದಲ್ಲಿ ಮನೆ–ಮನೆ ಹೊಕ್ಕು ಪತ್ರಕರ್ತರ ಶೋಧ ನಡೆಸುತ್ತಿರುವ ತಾಲಿಬಾನಿಗಳು, ಜರ್ಮನಿಯ ಡಿಡಬ್ಲ್ಯು ಸರ್ಕಾರಿ ಪ್ರಸಾರ ಸಂಸ್ಥೆಯ ಪತ್ರಕರ್ತರೊಬ್ಬರ ಸಂಬಂಧಿಯೊಬ್ಬನನ್ನು ಗುರುವಾರ ಗುಂಡಿಕ್ಕಿ ಕೊಂದಿದ್ದಾರೆ.

ಅವರ ಇನ್ನೊಬ್ಬ ಸಂಬಂಧಿ ಗಂಭೀರವಾಗಿ ಗಾಯಗೊಂಡಿದ್ದು, ಉಳಿದವರು ತಪ್ಪಿಸಿಕೊಂಡಿದ್ದಾರೆ. ತಾಲಿಬಾನಿಗಳ ಕೆಂಗಣ್ಣಿಗೆ ಗುರಿಯಾಗಿರುವ ಸಂಸ್ಥೆಯ ಪತ್ರಕರ್ತ, ಇದೀಗ ಜರ್ಮನಿಯಲ್ಲೇ ಕೆಲಸ ಮಾಡುತ್ತಿರುವುದಾಗಿ ಸಂಸ್ಥೆಯು ತಿಳಿಸಿದೆ.

ಪತ್ರಕರ್ತನ ಸಂಬಂಧಿಯ ಹತ್ಯೆಯನ್ನು ತೀವ್ರವಾಗಿ ಖಂಡಿಸಿರುವ ಡಿಡಬ್ಲ್ಯು ಮಹಾನಿರ್ದೇಶಕ ಪೀಟರ್ ಲಿಂಬರ್ಗ್, ಅಫ್ಗಾನಿಸ್ತಾನದಲ್ಲಿ ಕೆಲಸ ಮಾಡುತ್ತಿರುವ ಮಾಧ್ಯಮದವರು ಹಾಗೂ ಅವರ ಕುಟುಂಬದವರು ಎಷ್ಟು ಅಪಾಯದಲ್ಲಿದ್ದಾರೆ ಎಂಬುದು ಇದರಿಂದ ವೇದ್ಯವಾಗುತ್ತದೆ ಎಂದಿದ್ದಾರೆ.

'ಕಾಬೂಲ್ ಹಾಗೂ ಇತರ ಪ್ರಾಂತ್ಯದಲ್ಲಿ ತಾಲಿಬಾನಿಗಳು ಮಾಧ್ಯಮ ಪ್ರತಿನಿಧಿಗಳಿಗಾಗಿ ಹುಡುಕಾಟ ಶುರು ಮಾಡಿದ್ದಾರೆ' ಎಂದು ಪೀಟರ್ ಹೇಳಿದ್ದಾರೆ.

ಇನ್ನಷ್ಟು ಸುದ್ದಿಗಳು 9

ಭಾರತದ ಕಾನ್ಸಲೇಟ್ ಕಚೇರಿ ಶೋಧ

ನವದೆಹಲಿ: ಅಫ್ಗಾನಿಸ್ತಾನದಲ್ಲಿರುವ ಭಾರತದ ಎರಡು ಕಾನ್ಸಲೇಟ್ ಕಚೇರಿಗಳಿಗೆ ತಾಲಿಬಾನ್ ಉಗ್ರರು ನುಗ್ಗಿ, ಶೋಧ ನಡೆಸಿದ್ದಾರೆ ಎಂದು ಸರ್ಕಾರದ ಮೂಲಗಳು ಹೇಳಿವೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

'ಕಂದಹಾರ್ ಮತ್ತು ಹೆರಾತ್‌ನಲ್ಲಿರುವ ಭಾರತೀಯ ಕಾನ್ಸಲೇಟ್ ಕಚೇರಿಗಳಿಗೆ ಬುಧವಾರ ತಾಲಿಬಾನ್ ಉಗ್ರರು ನುಗ್ಗಿದ್ದರು. ಎರಡೂ ಕಚೇರಿಗಳು ಈಗ ಕಾರ್ಯನಿರ್ವಹಿಸುತ್ತಿಲ್ಲ. ಆದರೆ ಕಚೇರಿಯಲ್ಲಿ ವಿವಿಧ ದಾಖಲೆಗಳಿಗಾಗಿ ಉಗ್ರರು ಶೋಧ ನಡೆಸಿದ್ದಾರೆ. ಆನಂತರ ಕಚೇರಿ ಆವರಣದಲ್ಲಿ ನಿಲ್ಲಿಸಿದ್ದ ಕಾನ್ಸಲೇಟ್‌ಗಳಿಗೆ ಸೇರಿದ ಕಾರುಗಳನ್ನು ಒಯ್ದಿದ್ದಾರೆ ಎಂದು ಮೂಲಗಳು ಹೇಳಿವೆ' ಎಂದು ಎನ್‌ಡಿಟಿವಿ ವರದಿ ಮಾಡಿದೆ.


'ಭಾರತದ ರಾಯಭಾರ ಕಚೇರಿ, ಕಾನ್ಸಲೇಟ್ ಕಚೇರಿಗಳ ಸಿಬ್ಬಂದಿಗೆ ಯಾವುದೇ ತೊಂದರೆ ನೀಡುವುದಿಲ್ಲ' ಎಂದು ಭಾರತಕ್ಕೆ ತಾಲಿಬಾನ್ ಅಧಿಕೃತವಾಗಿ ಮಂಗಳವಾರ ಸಂದೇಶ ಕಳುಹಿಸಿತ್ತು. ಆದರೆ, ಅದರ ಮರುದಿನವೇ ಈ ದಾಳಿ ನಡೆದಿದೆ.



'ಹಿಂದುಳಿದವರ ಏಳ್ಗೆಗೆ 3 'ಇ' ಮಂತ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ವಲಯದಲ್ಲಿ ಅವಕಾಶಗಳು ಕಡಿಮೆ ಆಗುತ್ತಿರುವುದರಿಂದ ಪರಿಶಿಷ್ಟರು, ಹಿಂದುಳಿದ ಸಮುದಾಯಗಳಿಗೆ ಸೇರಿದ ಬಿಪಿಎಲ್ ವರ್ಗದವರಿಗೆ ಶಿಕ್ಷಣ, ಉದ್ಯೋಗ ಮತ್ತು ಉದ್ಯಮದಲ್ಲಿ ಹೆಚ್ಚಿನ ಅವಕಾಶ ಕಲ್ಪಿಸುವುದಕ್ಕೆ ಪೂರಕವಾಗಿ ಹೊಸ ಯೋಜನೆಗಳನ್ನು ರೂಪಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.



ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಶುಕ್ರವಾರ ದೇವರಾಜ ಅರಸು ಪ್ರಶಸ್ತಿ ಪ್ರದಾನ ಮಾಡಿದ ಅವರು, 'ಮೂರು 'ಇ'ಗಳು ಅಂದರೆ ಎಜುಕೇಷನ್, ಎಂಪ್ಲಾಯ್‌ಮೆಂಟ್ ಮತ್ತು ಎಂಟರ್‌ಪ್ರೆನ್ಯರ್‌ಶಿಪ್‌ಗೆ ಸರ್ಕಾರ ಒತ್ತು ಕೊಡಲಿದೆ' ಎಂದರು.

ಪರಿಶಿಷ್ಟ ಜಾತಿ, ವರ್ಗಗಳು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರಿಗೆ ನಿರ್ಮಿಸಿರುವ ವಸತಿ ಶಾಲೆಗಳನ್ನು ಗುಣಾತ್ಮಕವಾಗಿ ಉನ್ನತೀಕರಿಸಲಾಗುವುದು. ಆಧುನಿಕ ಉದ್ಯಮ ಮತ್ತು ಉದ್ಯೋಗಗಳಿಗೆ ತಕ್ಕಂತೆ ಶಿಕ್ಷಣದ ವ್ಯವಸ್ಥೆ ಮಾಡಲಾಗುವುದು. ಅಂತರರಾಷ್ಟ್ರೀಯ ಗುಣಮಟ್ಟದ ಉನ್ನತ ಶಿಕ್ಷಣ ನೀಡಲು ಉದ್ದೇಶಿಸಲಾಗಿದೆ ಎಂದರು.

ಸಿಇಟಿ ಮತ್ತು ನೀಟ್‌ನಂತಹ ಪರೀಕ್ಷೆಗಳನ್ನು ಆತ್ಮವಿಶ್ವಾಸದಿಂದ ಎದುರಿಸಲು ಅನುಕೂಲವಾಗುವಂತೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲಾಗುವುದು. ಇದಕ್ಕಾಗಿ ಗುಣಮಟ್ಟದ ಶಿಕ್ಷಣ ನೀತಿಯನ್ನು ರೂಪಿಸಲಾಗುವುದು ಎಂದರು.

ಅಲೆಮಾರಿ ಜನಾಂಗಕ್ಕೆ 3 ವಸತಿ ಶಾಲೆ: ಅಲೆಮಾರಿ ಜನಾಂಗದ ಮಕ್ಕಳಿಗೆ ಶಿಕ್ಷಣ ನೀಡಲು ಈ ವರ್ಷ ಮೂರು ಅಲೆಮಾರಿ ವಸತಿ ಶಾಲೆಗಳನ್ನು ಆರಂಭಿಸಲಾಗುವುದು. ಈಗಾಗಲೇ ನಾಲ್ಕು ವಸತಿ ಶಾಲೆಗಳಿವೆ. ಈ ಶಾಲೆಗಳಲ್ಲಿ ಎರಡು ಶಾಲೆಗಳಿಗೆ ಸ್ವಂತ ಕಟ್ಟಡಗಳಿವೆ. ಇನ್ನೆರಡು ಶಾಲೆಗಳಿಗೆ ಕಟ್ಟಡ ಹೊಂದಲು ತಲಾ ₹ 6 ಕೋಟಿ ನೀಡಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದರು.

ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸಪೂಜಾರಿ ಅವರು, ಭೂ ಸುಧಾರಣೆಗಾಗಿ ಕ್ರಾಂತಿಕಾರಕ ನಿರ್ಧಾರಗಳನ್ನು ಅರಸು ತೆಗೆದುಕೊಂಡರು. ಸಮಾಜ ಕಟ್ಟಕಡೆಯ ವ್ಯಕ್ತಿಯನ್ನು ಸಮಾಜದ ಮುಖ್ಯವಾಹಿನಿಗೆ ತರಲು ಶ್ರಮಿಸಿದರು ಎಂದರು.

ಪ್ರಶಸ್ತಿ ಪ್ರದಾನ: ಬಸವಪ್ರಭು ಲಖಮಗೌಡ ಪಾಟೀಲ, ಕೆ.ಭಾಸ್ಕರ್ ದಾಸ್ ಎಕ್ಕಾರು ಮತ್ತು ಎಸ್. ಜಿ.ಸುಶೀಲಮ್ಮ ಅವರಿಗೆ 'ದೇವರಾಜ ಅರಸು ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಆಯ್ಕೆ ಸಮಿತಿ ಅಧ್ಯಕ್ಷ ಪ್ರೊ. ದೊಡ್ಡರಂಗೇಗೌಡ ಮಾತನಾಡಿದರು.

ಅರಸು ಚಿಂತನೆಗಳು ಇಂದಿಗೂ ಪ್ರಸ್ತುತ: ಗುಲಾಮಗಿರಿಯಿಂದ ಹೊರ ಬರಲು ಹೊಸ ಆಯಾಮ ಕೊಟ್ಟ ಧೀಮಂತ ನಾಯಕ ದೇವರಾಜ ಅರಸು ಚಿಂತನೆಗಳು ಇಂದಿಗೂ ಪ್ರಸ್ತುತ ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

ಚಿತ್ರ 4

ರಾಜ್ಯ ಕೋವಿಡ್ ಅಂಕಿ–ಅಂಶ

29,36,077 ▲	ಒಟ್ಟು ಸೋಂಕಿತರು (29,34,624 ನಿನ್ನೆಯ ವಿವರ)
21,161 ▲	ಸಕ್ರಿಯ ಪ್ರಕರಣಗಳು
28,77,785 ▲	ಗುಣಮುಖರಾದವರು
37,105 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	1,453	▲
ಗುಣಮುಖ	1,408	▼
ಸಾವು	17	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಒಳ ಪುಟ
6 ಎಂಜಿನಿಯರಿಂಗ್ ಕಾಲೇಜುಗಳ ಮಾನ್ಯತೆ ರದ್ದು 4

ಚಿನಕುರಳಿ
ಪ್ರಕಾಶ್ ಶೆಟ್ಟಿ



'ನದಿ ಜೋಡಣೆ ಯೋಜನೆಗೆ ರಾಜ್ಯಗಳು ಮುಂದೆ ಬರಲಿ' 4
ಸಾಲ ಪಡೆಯಲು ಫೇಸ್‌ಬುಕ್ ನೆರವು 8

ಯಾದಗಿರಿ ಪ್ರಕರಣ: ಗೃಹ ಸಚಿವರ ಸಮರ್ಥನೆ

'ಖುಷಿಯಾದಾಗ ಗಾಳಿಯಲ್ಲಿ ಗುಂಡು'

ಪ್ರಜಾವಾಣಿ ವಾರ್ತೆ

ಮಂಗಳೂರು: 'ಮಲೆನಾಡು ಭಾಗದಲ್ಲಿ ತುಂಬಾ ಖುಷಿಯಾದಾಗ ಗಾಳಿಯಲ್ಲಿ ಗುಂಡು ಹಾರಿಸುತ್ತೇವೆ. ಯಾರಾದರೂ ತೀರಿ ಹೋದ ಸಂದರ್ಭದಲ್ಲೂ ಗಾಳಿಯಲ್ಲಿ ಗುಂಡು ಹಾರಿಸುತ್ತೇವೆ. ಕೊಡಗು– ಮಲೆನಾಡು ಭಾಗದಲ್ಲಿ ಇಂತಹ ಸಂಪ್ರದಾಯ ಇದೆ. ಇನ್ನೂ ಕೆಲವೆಡೆಯೂ ಇಂತಹ ಸಂಪ್ರದಾಯಗಳು ಇರಬಹುದು' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಹೇಳಿದರು.



ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕೇಂದ್ರ ಸಚಿವ ಭಗವಂತ ಖೂಬಾ ಯಾದಗಿರಿ ಜಿಲ್ಲೆಗೆ ಈಚೆಗೆ ಭೇಟಿ ನೀಡಿದಾಗ ಖುಷಿಯಿಂದ ಗಾಳಿಯಲ್ಲಿ ಗುಂಡು ಹಾರಿಸಿರಬಹುದು. ಆದರೆ ಸಾರ್ವಜನಿಕವಾಗಿ ಮಾಡಿದ್ದು ತಪ್ಪು' ಎಂದರು.

'ಕೆಲ ವರ್ಷಗಳಿಂದ ಕರಾವಳಿಯಲ್ಲಿ ಭಯೋತ್ಪಾದಕ ಚಟುವಟಿಕೆಗಳು ನಡೆಯುತ್ತಿದ್ದು, ಹೆಚ್ಚಿನ ನಿಗಾ ವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಎನ್‌ಐಎ ಕಚೇರಿ ಸ್ಥಾಪನೆ ಕುರಿತು ಕೇಂದ್ರದ ಜೊತೆಗೆ ಚರ್ಚಿಸುತ್ತೇವೆ' ಎಂದರು.

ಅಫ್ಗಾನಿಸ್ತಾನದಲ್ಲಿ ಅತಂತ್ರರಾಗಿರುವ ಭಾರತೀಯರ ಕರೆತರಲು ಐಪಿಎಸ್ ಅಧಿಕಾರಿ ಉಮೇಶ್ ಅವರನ್ನು ರಾಜ್ಯದಿಂದ ನೋಡಲ್ ಅಧಿಕಾರಿ ಯಾಗಿ ನೇಮಿಸಲಾಗಿದೆ. ಸಂಕಷ್ಟದಲ್ಲಿ ಇರುವವರು ಅವರನ್ನು ಸಂಪರ್ಕಿಸಬಹುದು' ಎಂದು ತಿಳಿಸಿದರು.

ವಯಸ್ಕರು, ಮಕ್ಕಳಲ್ಲಿ ತುರ್ತು ಸಂದರ್ಭದಲ್ಲಿ ಬಳಕೆ

ಝೈಕೋವ್‌-ಡಿ ಲಸಿಕೆಗೆ ಅನುಮತಿ

ನವದೆಹಲಿ (ಪಿಟಿಐ): 'ಭಾರತದ ಝೈಡಸ್ ಕ್ಯಾಡಿಲಾ ಕಂಪನಿ ಅಭಿವೃದ್ಧಿಪಡಿಸಿರುವ ಕೋವಿಡ್ ಲಸಿಕೆ 'ಝೈಕೋವ್‌-ಡಿ'ಯನ್ನು ವಯಸ್ಕರು ಮತ್ತು 12 ವರ್ಷ ಮೇಲ್ಪಟ್ಟ ಮಕ್ಕಳಲ್ಲಿ ತುರ್ತು ಸಂದರ್ಭದಲ್ಲಿ ಬಳಸಲು ಭಾರತೀಯ ಪ್ರಧಾನ ಔಷಧ ನಿಯಂತ್ರಕರು(ಡಿಜಿಸಿಐ) ಅನುಮತಿ ನೀಡಿದ್ದಾರೆ' ಎಂದು ಕೇಂದ್ರ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆಯು ಶುಕ್ರವಾರ ಹೇಳಿದೆ.

ದೇಶೀಯವಾಗಿ ಅಭಿವೃದ್ಧಿಪಡಿಸಿರುವ ಝೈಕೋವ್‌-ಡಿ ಡಿಎನ್‌ಎ ಆಧಾರಿತ ಲಸಿಕೆಯಾಗಿದೆ. ಮೂರು ಡೋಸ್‌ಗಳಲ್ಲಿ ಈ ಲಸಿಕೆಯನ್ನು ನೀಡಲಾಗುವುದು. ಈ ಲಸಿಕೆಯು ಮನುಷ್ಯನ ದೇಹದಲ್ಲಿ ಸಾರ್ಸ್ ಕೋವ್‌-2 ವೈರಾಣುವಿನ ಸ್ಪೈಕ್ ಪ್ರೊಟೀನ್ ಅನ್ನು ಉತ್ಪಾದಿಸುತ್ತದೆ. ಆ ಮೂಲಕ ಕೋವಿಡ್ ವಿರುದ್ಧ ಪ್ರತಿರೋಧಕ ಶಕ್ತಿಯನ್ನು ಸೃಷ್ಟಿಸುತ್ತದೆ. ಈ ಲಸಿಕೆಯು ಕೋವಿಡ್‌ನಿಂದಲೂ ರಕ್ಷಣೆ ನೀಡುತ್ತದೆ ಮತ್ತು ವೈರಾಣುಗಳನ್ನೂ ನಾಶ ಮಾಡುತ್ತದೆ ಎಂದು ಕಂಪನಿ ಹೇಳಿದೆ.

'ಇದು ಡಿಎನ್‌ಎ ಆಧಾರಿತ ಲಸಿಕೆಯಾಗಿರುವ ಕಾರಣ, ಕೊರೊನಾವೈರಸ್‌ನ ವಿವಿಧ ರೂಪಾಂತರ ತಳಿಗಳ ವಿರುದ್ಧ ಹೋರಾಡಲು ಮಾರ್ಪಾಡು ಮಾಡಬಹುದಾಗಿದೆ. ಇದು ಕೋವಿಡ್ ವಿರುದ್ಧದ ಹೋರಾಟದಲ್ಲಿ ಮಹತ್ವದ ಪಾತ್ರ ವಹಿಸಲಿದೆ' ಎಂದು ಜೈವಿಕ ತಂತ್ರಜ್ಞಾನ ಇಲಾಖೆಯು ಹೇಳಿದೆ.

'ಜೈವಿಕ ತಂತ್ರಜ್ಞಾನ ಇಲಾಖೆಯ ಕೋವಿಡ್ ಸುರಕ್ಷಾ ಕಾರ್ಯಕ್ರಮದ ಅಡಿ ಝೈಡಸ್ ಕ್ಯಾಡಿಲಾ ಕಂಪನಿ ಇದನ್ನು ಅಭಿವೃದ್ಧಿಪಡಿಸಿದೆ. ಈ ಲಸಿಕೆಯು ಕೋವಿಡ್ ವಿರುದ್ಧ ಶೇ 66.6ರಷ್ಟು ಪರಿಣಾಮವನ್ನು ಹೊಂದಿದೆ' ಎಂದು ಇಲಾಖೆಯು ತನ್ನ ಪ್ರಕಟಣೆಯಲ್ಲಿ ಹೇಳಿದೆ.

ಕಂಪನಿಯು ವಾರ್ಷಿಕ 10-12 ಕೋಟಿ ಡೋಸ್ ಲಸಿಕೆ ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ.

ಜಾನ್ಸನ್ ಅಂಡ್ ಜಾನ್ಸನ್ ಪತ್ರ

ಜಾನ್ಸನ್ ಅಂಡ್ ಜಾನ್ಸನ್ ಕಂಪನಿಯು ತನ್ನ ಕೋವಿಡ್ ಲಸಿಕೆಯನ್ನು 12-17 ವರ್ಷದ ಮಕ್ಕಳಿಗೆ ನೀಡಲು ಅನುಮತಿ ಕೋರಿ, ಭಾರತೀಯ ಪ್ರಧಾನ ಔಷಧ ನಿಯಂತ್ರಕರಿಗೆ ಪತ್ರ ಬರೆದಿದೆ. ಇದೇ ಸೋಮವಾರ ಪತ್ರ ಬರೆಯಲಾಗಿದೆ.

'ಮಕ್ಕಳಿಗೆ ಲಸಿಕೆ ಹಾಕಲು ಅನುಮತಿ ಕೋರಿದ್ದೇವೆ. ಕೋವಿಡ್ ವಿರುದ್ಧ ಸಮುದಾಯ ಪ್ರತಿರೋಧ ಶಕ್ತಿಯನ್ನು ಸೃಷ್ಟಿಸಲು ಮಕ್ಕಳಿಗೂ ಲಸಿಕೆ ನೀಡುವುದು ಅನಿವಾರ್ಯ. ವಿಶ್ವದ ಬಹುತೇಕ ದೇಶಗಳಲ್ಲಿ ಮಕ್ಕಳಿಗೆ ಕೋವಿಡ್ ಲಸಿಕೆ ಹಾಕಲಾಗುತ್ತಿಲ್ಲ. ಹೀಗಾಗಿ ಮಕ್ಕಳಿಗೆ ಲಸಿಕೆ ಹಾಕುವ ದಿಸೆಯಲ್ಲಿ ಸಂಶೋಧನೆಗಳು ನಡೆಯುತ್ತಿವೆ. ಮಕ್ಕಳಿಗೂ ಲಸಿಕೆ ಲಭ್ಯವಿರುವಂತೆ ನೋಡಿಕೊಳ್ಳಲು ನಾವು ಬದ್ಧರಾಗಿದ್ದೇವೆ' ಎಂದು ಜಾನ್ಸನ್ ಅಂಡ್ ಜಾನ್ಸನ್ ಹೇಳಿದೆ. ಭಾರತದಲ್ಲಿ 12 ವರ್ಷ ಮೇಲ್ಪಟ್ಟ ಮಕ್ಕಳಿಗೆ ತುರ್ತು ಸಂದರ್ಭದಲ್ಲಿ ನೀಡಲು ಝೈಡಸ್ ಕ್ಯಾಡಿಲಾ ಕಂಪನಿಯ ಲಸಿಕೆಗೆ ಶುಕ್ರವಾರವಷ್ಟೇ ಅನುಮತಿ ದೊರೆತಿದೆ. ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಲಸಿಕೆಗೆ ಈ ಅನುಮತಿ ದೊರೆತಿಲ್ಲ. ಭಾರತ್ ಬಯೊಟೆಕ್ ಕಂಪನಿಯು ತನ್ನ ಕೋವ್ಯಾಕ್ಸಿನ್ ಲಸಿಕೆಯನ್ನು 2-18 ವರ್ಷದ ಮಕ್ಕಳಿಗೆ ನೀಡುವ ಸಂಬಂಧ ಕ್ಲಿನಿಕಲ್ ಟ್ರಯಲ್ ನಡೆಸುತ್ತಿದೆ.

ಸೋಯಾ, ಸೂರ್ಯಕಾಂತಿ ಎಣ್ಣೆ ಮೇಲಿನ ತೆರಿಗೆ ಇಳಿಕೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಕಚ್ಚಾ ಸೋಯಾ ಎಣ್ಣೆ ಮತ್ತು ಕಚ್ಚಾ ಸೂರ್ಯಕಾಂತಿ ಎಣ್ಣೆ ಮೇಲಿನ ಮೂಲ ಸೀಮಾ ಸುಂಕವನ್ನು ಶೇಕಡ 7.5ಕ್ಕೆ ತಗ್ಗಿಸಿದೆ. ಇದುವರೆಗೆ ಇದು ಶೇ 15ರಷ್ಟು ಇತ್ತು. ದೇಶಿ ಮಾರುಕಟ್ಟೆಯಲ್ಲಿ ಇವುಗಳ ಬೆಲೆ ಕಡಿಮೆ ಮಾಡುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಈ ಕ್ರಮದ ಜೊತೆಯಲ್ಲೇ, ಪರೋಕ್ಷ ತೆರಿಗೆಗಳ ಕೇಂದ್ರೀಯ ಮಂಡಳಿಯು (ಸಿಬಿಐಸಿ) ರಿಫೈನ್ಡ್ ಸೋಯಾ ಎಣ್ಣೆ ಮತ್ತು ರಿಫೈನ್ಡ್ ಸೂರ್ಯಕಾಂತಿ ಎಣ್ಣೆ ಮೇಲಿನ ಮೂಲ ಆಮದು ಸುಂಕವನ್ನು ಶೇ 37.5ಕ್ಕೆ ತಗ್ಗಿಸಿದೆ. ಈವರೆಗೆ ಇದು ಶೇ 45ರಷ್ಟು ಇತ್ತು. ಹೊಸ ದರವು ಶುಕ್ರವಾರದಿಂದ ಜಾರಿಗೆ ಬಂದಿದೆ, ಸೆಪ್ಟೆಂಬರ್ 30ರವರೆಗೆ ಜಾರಿಯಲ್ಲಿ ಇರಲಿದೆ.

ಭಾರತವು ವಿದೇಶಗಳಿಂದ ಅತಿಹೆಚ್ಚು ಆಮದು ಮಾಡಿಕೊಳ್ಳುವ ವಸ್ತುಗಳ ಪಟ್ಟಿಯಲ್ಲಿ ಅಡುಗೆ ಎಣ್ಣೆಗಳಿಗೆ ಮೂರನೆಯ ಸ್ಥಾನ ಇದೆ.





ಹಬ್ಬ... ಸಂಜಯನಗರದ ಮನೆಯೊಂದರಲ್ಲಿ ಶುಕ್ರವಾರ ಮಹಿಳೆಯರು ವರಮಹಾಲಕ್ಷ್ಮಿ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು ಪ್ರಜಾವಾಣಿ ಚಿತ್ರ

ಅರಸು 106ನೇ ಜನ್ಮ ದಿನಾಚರಣೆಯಲ್ಲಿ ಬೊಮ್ಮಾಯಿ ಪ್ರತಿಪಾದನೆ

ಕರ್ತವ್ಯ ನೆನಪಿಸುವ ದಿನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವರಾಜ ಅರಸು ಅವರ ಜನ್ಮದಿನ ನಮ್ಮ ಕರ್ತವ್ಯಗಳನ್ನು ನೆನಪಿಸುವ ದಿನ. ಹಿಂದುಳಿದ ವರ್ಗಗಳ ಏಳಿಗೆಗಾಗಿ, ಸ್ವಾಭಿಮಾನದ ಬದುಕಿಗಾಗಿ ಸರ್ಕಾರ ಕೆಲಸ ಮಾಡಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ವಿಧಾನಸೌಧದ ಆವರಣದಲ್ಲಿ ದೇವರಾಜ ಅರಸು ಅವರ 106 ನೇ ಜನ್ಮ ದಿನಾಚರಣೆಯ ಅಂಗವಾಗಿ ಶುಕ್ರವಾರ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದರು.

ಯುವಕರಿಗೆ ಶಿಕ್ಷಣ ಮತ್ತು ಉದ್ಯೋಗಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಬೇಕು ಎನ್ನುವ ಸಂಕಲ್ಪ ಮಾಡುವ ದಿನವಿದು ಎಂದು ಹೇಳಿದರು.

ರಾಜ್ಯದಲ್ಲಿ ಅರಸು ಅವರು ಜಾರಿಗೆ ತಂದ ಕ್ರಾಂತಿಕಾರಿ ಭೂಸುಧಾರಣೆ ಕಾಯ್ದೆ, ನಮ್ಮೆಲ್ಲರಿಗೂ ಪ್ರೇರಣದಾಯಕ. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎನ್ನುವ ಘೋಷಣೆಯನ್ನು ಅಕ್ಷರಶಃ ಪಾಲಿಸಿದವರು ಎಂದು ಬೊಮ್ಮಾಯಿ ಹೇಳಿದರು.

ರಾಜಕಾರಣದಲ್ಲಿ ಹಲವು ನಾಯಕರನ್ನು ಬೆಳೆಸಿದರು. ಕರ್ನಾಟಕದ ರಾಜಕಾರಣದಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸಿದ್ದರು. ಅವರ ಹೆಜ್ಜೆ ಗುರುತುಗಳು ಕರ್ನಾಟಕದ ಭೂಮಿಯಲ್ಲಿ ಶಾಶ್ವತವಾಗಿದೆ. ಅವರ ವಿಚಾರಧಾರೆಗಳು ಪಕ್ಷಾತೀತವಾಗಿ, ಸರ್ವ ಸಮ್ಮತವಾಗಿ ಒಪ್ಪುವಂತಹ ನಾಯಕರು ಎಂದರು.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ದೇವರಾಜ ಅರಸು ಪ್ರತಿಮೆ ಬಳಿ ಮಾಲಾರ್ಪಣೆ ಮಾಡಿದರು. ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಸಂಸದ ಪಿ.ಸಿ.ಮೋಹನ್ ಇದ್ದರು.

‘ಕೋವಿಡ್: ನಿಯಮ ಪಾಲಿಸಿ’

ಕೋವಿಡ್ ನಿಯಂತ್ರಣಕ್ಕಾಗಿ ಕೋವಿಡ್ ನಿಯಮ ಮತ್ತು ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸುವಂತೆ ಬಸವರಾಜ ಬೊಮ್ಮಾಯಿ ಸಾರ್ವಜನಿಕರಿಗೆ ಮನವಿ ಮಾಡಿದ್ದಾರೆ.

ತಮ್ಮ ನಿವಾಸದ ಬಳಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಸಾರ್ವಜನಿಕ ಸ್ಥಳಗಳಲ್ಲಿ ಜನಸಂದಣಿಯಾಗದಂತೆ ಸ್ವಯಂ ಪ್ರೇರಿತವಾಗಿ ನಡೆದುಕೊಳ್ಳಬೇಕು. ಆರ್ಥಿಕ, ಶೈಕ್ಷಣಿಕ ಚಟುವಟಿಕೆಗಳ ದೃಷ್ಟಿಯಿಂದ ನಿರ್ಬಂಧಗಳು ಮುಂದುವರೆಯುತ್ತವೆ. ಜನರು ಎಚ್ಚರಿಕೆಯಿಂದ ನಡೆದುಕೊಳ್ಳಬೇಕು ಎಂದಿದ್ದಾರೆ.

ಜಾತಿ ಗಣತಿ ವರದಿ ಬಹಿರಂಗಪಡಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ಸಲ್ಲಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಜಾತಿ ಗಣತಿ ವರದಿಯನ್ನು ರಾಜ್ಯ ಸರ್ಕಾರ ಕೂಡಲೇ ಬಹಿರಂಗಪಡಿಸಬೇಕು. ಇದನ್ನು ಜಾರಿಗೊಳಿಸುವ ಮೂಲಕ ಹಿಂದುಳಿದ ವರ್ಗಕ್ಕೆ ಸಾಮಾಜಿಕ ನ್ಯಾಯ ಒದಗಿಸಲು ಮುಂದಾಗಬೇಕು’ ಎಂದು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಅಠವಳೆ) ರಾಜ್ಯ ಘಟಕದ ಅಧ್ಯಕ್ಷ ಎಂ.ವೆಂಕಟಸ್ವಾಮಿ ಆಗ್ರಹಿಸಿದ್ದಾರೆ.

ಪಕ್ಷದ ವತಿಯಿಂದ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ಡಿ.ದೇವರಾಜ ಅರಸು ಅವರ 106ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಪರಿಶಿಷ್ಟ ಜಾತಿ ಮತ್ತು ಪಂಗಡದವರ ಭೂಮಿ ಪರಭಾರೆ ತಡೆಯಲು ಎಸ್‌ಸಿ/ಎಸ್‌ಟಿ ಭೂ ಪರಭಾರೆ ನಿಷೇಧ ಕಾಯ್ದೆ (ಪಿಟಿಸಿಎಲ್) ಜಾರಿಗೆ ತರಲಾಗಿದೆ. ಇದಕ್ಕೆ ಸಮಗ್ರ ತಿದ್ದುಪಡಿ ತರುವ ಮಸೂದೆ ಅಂಗೀಕರಿಸಿ ಅರಸು ಮತ್ತು ಬಿ.ಬಸವಲಿಂಗಪ್ಪ ಅವರ ಕಾರ್ಯವನ್ನು ಗೌರವಿಸಬೇಕು. ಪ್ರಬಲ ಜಾತಿಗಳ ಒತ್ತಡಕ್ಕೆ ಮಣಿದು ಅಭಿವೃದ್ಧಿ ನಿಗಮಗಳನ್ನು ಸ್ಥಾಪಿಸಿರುವ ರಾಜ್ಯ ಸರ್ಕಾರ, ಅಲೆಮಾರಿ ಜನಾಂಗಗಳ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು’ ಎಂದು ಒತ್ತಾಯಿಸಿದರು.



ಎಂ. ವೆಂಕಟಸ್ವಾಮಿ

‘ಅರಸು ಅವರು ವಾಸವಿದ್ದ ಸದಾಶಿವನಗರದ ಮನೆಯನ್ನು ಸ್ಮಾರಕವಾಗಿಸಬೇಕು. ಅಲ್ಲಿ ವಿದ್ಯಾರ್ಥಿನಿ ನಿಲಯವನ್ನೂ ಸ್ಥಾಪಿಸಬೇಕು. ಅರಸು ಹುಟ್ಟೂರಾದ ಕಲ್ಲಹಳ್ಳಿಯ ಸರ್ವಾಂಗೀಣ ಅಭಿವೃದ್ಧಿ ಮರೀಚಿಕೆಯಾಗಿದೆ. ಅರಸು ಅವರ ಮನೆ ಹಾಗೂ ಆವರಣವನ್ನು ವಸ್ತು ಸಂಗ್ರಹಾಲಯವನ್ನಾಗಿಸುವ ಕಾಮಗಾರಿಗಳನ್ನು ತ್ವರಿತಗೊಳಿಸಬೇಕು’ ಎಂದು ತಿಳಿಸಿದ್ದಾರೆ.

ಪ್ರಾಧ್ಯಾಪಕ ಪ್ರೊ.ಬಿ.ಕೆ.ರವಿ, ಆರ್‌.ಪಿ.ಐ. ರಾಜ್ಯ ಉಪಾಧ್ಯಕ್ಷ ಪಿ.ಪಿಳ್ಳರಾಜು ಬೋಸಪ್ಪ ಇದ್ದರು.

ಚುನಾವಣೆ: ಬಿಜೆಪಿ ಉಸ್ತುವಾರಿ ನೇಮಕ

ಬೆಂಗಳೂರು: ರಾಜ್ಯ ಬಿಜೆಪಿ ಮುಂಬರುವ ನಗರಪಾಲಿಕೆ ಚುನಾವಣೆ ಉಸ್ತುವಾರಿಗಳ ನೇಮಕ ಮಾಡಿದ್ದು, ಈ ಚುನಾವಣೆಗಳ ರಾಜ್ಯ ಉಸ್ತುವಾರಿಯನ್ನಾಗಿ ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನಾ ಅವರನ್ನು ನೇಮಿಸಲಾಗಿದೆ.

ಹುಬ್ಬಳ್ಳಿ–ಧಾರವಾಡ– ಶಂಕರ್ ಪಾಟೀಲ ಮುನೇನಕೊಪ್ಪ, ಲಕ್ಷಣ ಸವದಿ ಮತ್ತು ಮಹೇಶ್ ಟೆಂಗಿನಕಾಯಿ. ಬೆಳಗಾವಿ– ಗೋವಿಂದ ಕಾರಜೋಳ, ಸತೀಶ್ ರೆಡ್ಡಿ, ಅಭಯ್ ಪಾಟೀಲ. ಕಲಬುರ್ಗಿ– ಮುರುಗೇಶ್ ನಿರಾಣಿ, ಎನ್‌.ರವಿಕುಮಾರ್, ದತ್ತಾತ್ರೇಯ ಪಾಟೀಲ ರೇವೂರು ಅವರನ್ನು ನೇಮಕ ಮಾಡಲಾಗಿದೆ.

ಕುಮಾರಸ್ವಾಮಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಘಟನೆ

ವೃದ್ಧ ದಂಪತಿ ಕತ್ತು ಕೊಯ್ದು ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಮಾರಸ್ವಾಮಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಶಾಂತರಾಜು (65) ಹಾಗೂ ಅವರ ಪತ್ನಿ ಪ್ರೇಮಲತಾ (61) ಅವರನ್ನು ಕತ್ತು ಕೊಯ್ದು ಕೊಲೆ ಮಾಡಲಾಗಿದ್ದು, ಪರಿಚಯಸ್ಥರೇ ಕೃತ್ಯ ಎಸಗಿರುವ ಶಂಕೆ ವ್ಯಕ್ತವಾಗಿದೆ.

‘ಸ್ಥಳೀಯ ಕಾಶಿನಗರ ನಿವಾಸಿ ಶಾಂತರಾಜು, ಬಿಎಂಟಿಸಿ ನಿವೃತ್ತ ನೌಕರ. ಪತ್ನಿ ಜೊತೆ ವಾಸವಿದ್ದರು. ದಂಪತಿಗೆ ಮಕ್ಕಳು ಇರಲಿಲ್ಲ. ಪರಿಚಯಸ್ಥರೇ ಕೃತ್ಯ ಎಸಗಿರುವ ಅನುಮಾನವಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘20 ವರ್ಷಗಳಿಂದ ಕಾಶಿನಗರದಲ್ಲಿ ನೆಲೆಸಿದ್ದ ದಂಪತಿ, ತಮ್ಮ ಹೆಸರಿನಲ್ಲಿದ್ದ ಎರಡು ಮನೆಗಳನ್ನು ಬಾಡಿಗೆಗೆ ನೀಡಿದ್ದರು. ಅಕ್ಕ–ಪಕ್ಕದ ಮನೆಯವರ ಜೊತೆ ಶುಕ್ರವಾರ ಬೆಳಿಗ್ಗೆ ಮಾತನಾಡಿದ್ದ ದಂಪತಿ, ನಂತರ ಮನೆಯೊಳಗೆ ಹೋಗಿದ್ದರು. ಅದೇ ಸಮಯದಲ್ಲೇ ಮನೆಯೊಳಗೆ ನುಗ್ಗಿ ದುಷ್ಕರ್ಮಿಗಳು ಕೃತ್ಯ ಎಸಗಿದ್ದಾರೆ’ ಎಂದೂ ತಿಳಿಸಿದರು.



ಶಾಂತರಾಜು ಹಾಗೂ ಪ್ರೇಮಲತಾ

ಪ್ರತ್ಯೇಕ ಕೊಠಡಿಯಲ್ಲಿ ಮೃತದೇಹ: ‘ಬಾಡಿಗೆ ಮನೆಯಲ್ಲಿ ವಾಸವಿದ್ದ ದಂಪತಿ, ನಸುಕಿನಲ್ಲಿ ಕೆಲಸಕ್ಕೆ ಹೋಗುವಾಗ ಶಾಂತರಾಜು ಬಳಿ ಕೀ ಕೊಟ್ಟು ಹೋಗಿದ್ದರು. ಮಧ್ಯಾಹ್ನ 3 ಗಂಟೆ ಸುಮಾರಿಗೆ ಕೆಲಸ ಮುಗಿಸಿಕೊಂಡು ಮನೆಗೆ ಬಂದಿದ್ದ ದಂಪತಿ, ಕೀ ಪಡೆಯಲು ಶಾಂತರಾಜು ಮನೆಯೊಳಗೆ ಹೋಗಿದ್ದರು. ಅವಾಗಲೇ ಮೃತದೇಹ ಕಂಡು ಠಾಣೆಗೆ ಮಾಹಿತಿ ನೀಡಿದ್ದರು’ ಎಂದೂ ಪೊಲೀಸರು ಹೇಳಿದರು.

‘ಮಧ್ಯಾಹ್ನ ಮನೆಗೆ ನುಗ್ಗಿದ್ದ ದುಷ್ಕರ್ಮಿಗಳು, ದಂಪತಿ ಮೇಲೆ ಏಕಾಏಕಿ ದಾಳಿ ಮಾಡಿದ್ದಾರೆ. ಅವರಿಂದ ತಪ್ಪಿಸಿಕೊಳ್ಳಲು ಶಾಂತರಾಜು ಹಾಗೂ ಪ್ರೇಮಲತಾ ಬೇರೆ ಬೇರೆ ಕೊಠಡಿಗೆ ಓಡಿ ಹೋಗಿದ್ದಾರೆ. ಕೊಠಡಿಗಳಿಗೆ ನುಗ್ಗಿದ್ದ ದುಷ್ಕರ್ಮಿಗಳು, ಚಾಕುವಿನಿಂದ ಕತ್ತು ಕೊಯ್ದು ಕೊಲೆ ಮಾಡಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ’ ಎಂದೂ ತಿಳಿಸಿದರು.

‘ರಕ್ತಸಿಕ್ತ ಸ್ಥಿತಿಯಲ್ಲಿ ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ.’ ಎಂದೂ ಹೇಳಿದರು.

‘ಮನೆಯಲ್ಲಿದ್ದ ಚಿನ್ನಾಭರಣ ಹಾಗೂ ನಗದು ದೋಚಲು ಆರೋಪಿಗಳು ಕೃತ್ಯ ಎಸಗಿರುವ ಶಂಕೆ ಇದೆ. ಏನೆಲ್ಲ ಕಳುವಾಗಿವೆ ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ. ಆರೋಪಿಗಳಿಗಾಗಿ ಶೋಧ ನಡೆದಿದ್ದು, ಅವರ ಬಂಧನದ ಬಳಿಕವೇ ಮತ್ತಷ್ಟು ಮಾಹಿತಿ ತಿಳಿಯಲಿದೆ’ ಎಂದೂ ವಿವರಿಸಿದರು.

ಹೆಚ್ಚುವರಿ ಪೊಲೀಸ್ ಕಮಿಷನರ್ ಸೌಮೇಂದು ಮುಖರ್ಜಿ ಹಾಗೂ ದಕ್ಷಿಣ ವಿಭಾಗದ ಡಿಸಿಪಿ ಹರೀಶ್ ಪಾಂಡೆ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಆರೋಪಿಗಳ ಪತ್ತೆಗೆ ಪೊಲೀಸರ ವಿಶೇಷ ತಂಡಗಳನ್ನೂ ರಚಿಸಲಾಗಿದೆ.

‘ಮೂರು ಟೀ ಲೋಟ’

‘ಮನೆಗೆ ಬಂದವರಿಗೆ ಪ್ರೇಮಲತಾ ಅವರು ಟೀ ಮಾಡಿಕೊಟ್ಟಿರುವುದು ಗೊತ್ತಾಗುತ್ತಿದೆ. ಮನೆಯ ಮೇಜಿನ ಮೇಲೆ ಮೂರು ಟೀ ಲೋಟಗಳು ಇದ್ದು, ಪರಿಚಯಸ್ಥರೇ ಕೃತ್ಯ ಎಸಗಿರುವ ಅನುಮಾನ ದಟ್ಟವಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದಂಪತಿಗೆ ಸಾಕು ಮಗಳಿರುವ ಮಾಹಿತಿ ಇದ್ದು, ಅವರನ್ನು ಪತ್ತೆ ಮಾಡಲಾಗುತ್ತಿದೆ. ದಂಪತಿ ಮನೆಗೆ ನಿತ್ಯವೂ ಕೆಲ ಸಂಬಂಧಿಕರು ಬಂದು ಹೋಗುತ್ತಿದ್ದ ಬಗ್ಗೆ ಸ್ಥಳೀಯರು ಹೇಳಿದ್ದಾರೆ. ಮನೆ ಸುತ್ತಮುತ್ತ ಇರುವ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ’ ಎಂದೂ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ತೇಜಸ್ ಯುದ್ಧ ವಿಮಾನ ದೇಶದ ಹೆಮ್ಮೆ: ವೆಂಕಯ್ಯ ನಾಯ್ಡು

ಬೆಂಗಳೂರು: ಉಪರಾಷ್ಟ್ರಪತಿ ವೆಂಕಯ್ಯನಾಯ್ಡು ಅವರು ಎಚ್‌ಎಎಲ್‌ಗೆ ಶುಕ್ರವಾರ ಭೇಟಿ ನೀಡಿ ವೈಮಾನಿಕ ಮತ್ತು ರಕ್ಷಣಾ ಸೌಲಭ್ಯಗಳನ್ನು ವೀಕ್ಷಿಸಿ, ಬಳಿಕ ‘ತೇಜಸ್’ ಯುದ್ಧ ವಿಮಾನದ ಕಾಕ್‌ಪಿಟ್‌ನಲ್ಲಿ ಕುಳಿತು ಅದರ ಮಾಹಿತಿ ಪಡೆದರು.

ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಇಲ್ಲಿನ ವೈಮಾನಿಕ ಮತ್ತು ರಕ್ಷಣಾ ವ್ಯವಸ್ಥೆಯ ಮೂಲಸೌಕರ್ಯಗಳನ್ನು ನೋಡಿದ ಬಳಿಕ ದೇಶದ ಸುರಕ್ಷತೆ ಮತ್ತು ಭದ್ರತೆಯ ಖಾತರಿಯಾಗಿದೆ ಎಂದರು.

’ಎಚ್‌ಎಎಲ್‌ನ ಹಲವು ಯೋಜನೆಗಳು ಖಾಸಗಿ ಸಹಭಾಗಿತ್ವದಲ್ಲಿ ನಡೆಯುತ್ತಿದ್ದು, ದೇಶಿಯವಾಗಿ ಅತ್ಯಾಧುನಿಕ ಜಾಗತಿಕ ಮಟ್ಟದ ತಂತ್ರಜ್ಞಾನ ಅಭಿವೃದ್ಧಿ ಆಗುತ್ತದೆ ಎಂಬ ವಿಶ್ವಾಸವಿದೆ. ಇದರಿಂದ ನಮ್ಮ ದೇಶದ ಸೇನಾ ವ್ಯವಸ್ಥೆಗೆ ಹೆಚ್ಚಿನ ಬಲ ಬರುತ್ತದೆ’ ಎಂದು ವೆಂಕಯ್ಯನಾಯ್ಡು ಹೇಳಿದರು.

ಎಚ್‌ಎಎಲ್ ಜಾಗತಿಕ ಮಟ್ಟದ ನಾಯಕನಾಗಿ ಬೆಳೆದಿದೆ. ವೈಮಾನಿಕ ಮತ್ತು ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬಿಯಾಗಬೇಕು ಎಂಬ ಭಾರತದ ಕನಸು ನನಸಾಗುವಲ್ಲಿ ಎಚ್‌ಎಎಲ್ ಪ್ರಧಾನ ಪಾತ್ರವಹಿಸಲಿದೆ. ಕಳೆದ 80 ವರ್ಷಗಳಲ್ಲಿ ಸಂಸ್ಥೆಯ ಪಾತ್ರ ಮಹತ್ವವಾದುದು. ದೇಶೀಯವಾಗಿ ತಯಾರಿಸಿರುವ ತೇಜಸ್ ಯುದ್ಧ ವಿಮಾನ ನಮ್ಮೆಲ್ಲರ ಹೆಮ್ಮೆ ಎಂದರು.

ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಹಾಜರಿದ್ದರು.

ಪಾದಚಾರಿ ಮಾರ್ಗ ಒತ್ತುವರಿ ತೆರವುಗೊಳಿಸಿದ ಬಿಬಿಎಂಪಿ



ಬೆಂಗಳೂರು: ಮಹದೇವಪುರ ವಲಯದ ವಿವಿಧ ವಾರ್ಡ್‌ಗಳಲ್ಲಿ ಪಾದಚಾರಿ ಮಾರ್ಗಗಳ ಒತ್ತುವರಿಯನ್ನು ಬಿಬಿಎಂಪಿ ತೆರವುಗೊಳಿಸಿದೆ.

ಹೂಡಿ ಉಪ ವಿಭಾಗದಲ್ಲಿ (4.1ಕಿ.ಮೀ) 52 ಕಡೆ, ವೈಟ್‌ಫೀಲ್ಡ್ ಉಪ ವಿಭಾಗ ವ್ಯಾಪ್ತಿಯಲ್ಲಿ (3.5ಕಿ.ಮೀ) 27 ಕಡೆ, ಮಾರತ್ತಹಳ್ಳಿ ಉಪ ವಿಭಾಗದಲ್ಲಿ (2 ಕಿ.ಮೀ) 32 ಕಡೆ ಮತ್ತು ಎಚ್‌ಎಎಲ್ ಉಪ ವಿಭಾಗದಲ್ಲಿ(3.1 ಕಿ.ಮೀ) 16 ಜಾಗದಲ್ಲಿ ಸೇರಿ ಒಟ್ಟು 127 ಕಡೆ ಒತ್ತುವರಿಗಳನ್ನು ತೆರವುಗೊಳಿಸಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.

ಮುಂದಿನ ದಿನಗಳಲ್ಲಿ ಇಂತಹ ಒತ್ತುವರಿ ಕಂಡುಬಂದಲ್ಲಿ ನಿರ್ದಾಕ್ಷಿಣ್ಯವಾಗಿ ತೆಗೆದು ಹಾಕಿ ಸಂಬಂಧಪಟ್ಟವರ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುವುದು. ಎಚ್ಚರಿಕೆ ನೀಡುವ ನಿಟ್ಟಿನಲ್ಲಿ ಅಲ್ಲಲ್ಲಿ ಸೂಚನಾ ಫಲಕ ಅಳವಡಿಸಲಾಗುವುದು ಎಂದು ಮಹದೇವಪುರ ವಲಯದ ಮುಖ್ಯ ಎಂಜಿನಿಯರ್ ಆರ್‌.ಎಲ್‌.ಪರಮೇಶ್ವರಯ್ಯ ತಿಳಿಸಿದ್ದಾರೆ.

ಸ್ಮಾರ್ಟ್ ಸಿಟಿ: ಅಧಿಕಾರ ಹಸ್ತಾಂತರಕ್ಕೆ ಹಿಂದೇಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ಮುಖ್ಯ ಎಂಜಿನಿಯರ್ ಹುದ್ದೆಯನ್ನು ಬಿಟ್ಟುಕೊಡಲು ಬಿ.ಎಸ್. ಪ್ರಹ್ಲಾದ್ ಹಿಂದೇಟು ಹಾಕಿರುವುದು ಅಧಿಕಾರಿಗಳ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಬಿಬಿಎಂಪಿಯ ರಾಜಕಾಲುವೆ ವಿಭಾಗ, ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಆಗಿರುವ ಪ್ರಹ್ಲಾದ್ ಅವರಿಗೆ ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ಮುಖ್ಯ ಎಂಜಿನಿಯರ್ ಹೊಣೆಯನ್ನು ಜೂನ್‌ನಲ್ಲಿ ವಹಿಸಲಾಗಿತ್ತು. ಸ್ಥಳ ನಿರೀಕ್ಷಣೆಯಲ್ಲಿದ್ದ ವಿನಾಯಕ ಜಿ.ಸುಗೂರ್ ಅವರನ್ನು ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ಮುಖ್ಯ ಎಂಜಿನಿಯರ್ ಹುದ್ದೆಗೆ ವರ್ಗಾಯಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿ ಮೂರು ದಿನಗಳು ಕಳೆದಿವೆ. ಆದರೆ, ಪ್ರಹ್ಲಾದ್ ಅವರು ಅಧಿಕಾರ ಹಸ್ತಾಂತರಕ್ಕೆ ಹಿಂದೇಟು ಹಾಕುತ್ತಿದ್ದಾರೆ ಎಂದು ಅಧಿಕಾರಿಯೊಬ್ಬರು ದೂರಿದರು.

'ಅಧಿಕಾರ ವಹಿಸಿಕೊಳ್ಳಲು ಸುಗೂರು ಅವರು ಎರಡು ಸಲ ಕಚೇರಿಗೆ ಹೋಗಿದ್ದರು. ಅಧಿಕಾರ ವಹಿಸಿಕೊಳ್ಳುವಂತೆ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್ ಸಹ ಸೂಚಿಸಿದ್ದರು. ಆದರೆ, ಪ್ರಹ್ಲಾದ್ ಅವರು ಮೂರು ದಿನ ಬಿಟ್ಟು ಅಧಿಕಾರ ಹಸ್ತಾಂತರಿಸುವುದಾಗಿ ಮೌಖಿಕವಾಗಿ ಹೇಳಿದ್ದಾರೆ. ವರ್ಗಾವಣೆ ರದ್ದುಪಡಿಸಲು ಈ ರೀತಿ ಮಾಡುತ್ತಿದ್ದಾರೆ' ಎಂದು ಮೂಲಗಳು ಹೇಳಿವೆ.

'ಸ್ಮಾರ್ಟ್ ಸಿಟಿ ಯೋಜನೆಗೆ ಲೋಕೋಪಯೋಗಿ ಇಲಾಖೆಯ ಎಂಜಿನಿಯರ್‌ಗಳನ್ನೇ ನೇಮಕ ಮಾಡಲಾಗುತ್ತಿದೆ. ಕೆಸಿಆರ್ ನಿಯಮದಲ್ಲೂ ಈ ಬಗ್ಗೆ ಉಲ್ಲೇಖ ಇದೆ. ಈ ನಿಯಮ ಉಲ್ಲಂಘಿಸಿ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಪತ್ರದ ಆಧಾರದಲ್ಲಿ ಪ್ರಹ್ಲಾದ್ ಅವರನ್ನು ನೇಮಿಸಲಾಗಿತ್ತು. ಈ ಬಗ್ಗೆ ಆಕ್ಷೇಪವೂ ವ್ಯಕ್ತವಾಗಿತ್ತು. ಒಬ್ಬರೇ ಅಧಿಕಾರಿಗೆ ಮೂರು ಹುದ್ದೆಗಳನ್ನು ನೀಡುವುದು ಎಷ್ಟರ ಮಟ್ಟಿಗೆ ಸರಿ' ಎಂದು ಮುಖ್ಯ ಎಂಜಿನಿಯರ್ ಒಬ್ಬರು ಪ್ರಶ್ನಿಸಿದರು. ಈ ಬಗ್ಗೆ ಪ್ರತಿಕ್ರಿಯೆಗೆ ಪ್ರಹ್ಲಾದ್ ಲಭ್ಯರಾಗಲಿಲ್ಲ.

ಪರಿಷತ್ ಸಚಿವಾಲಯ 30 ಅಧಿಕಾರಿಗಳ ಎತ್ತಂಗಡಿ

ಬೆಂಗಳೂರು: ಕಳೆದ ಹಲವು ವರ್ಷಗಳಿಂದ ಒಂದೇ ಸ್ಥಳದಲ್ಲಿ ಬೇರೂರಿದ್ದ ವಿಧಾನಪರಿಷತ್ ಸಚಿವಾಲಯದ 30 ಕ್ಕೂ ಹೆಚ್ಚು ಅಧಿಕಾರಿಗಳನ್ನು ಎತ್ತಂಗಡಿ ಮಾಡಲಾಗಿದೆ.

'ಆಯಕಟ್ಟಿನ ಸ್ಥಳಗಳಲ್ಲಿ ಕಳೆದ ಹಲವು ವರ್ಷಗಳಿಂದ ಕೆಲಸ ಮಾಡುತ್ತಾ ಸಚಿವಾಲಯದ ಮೇಲೆ ಈ ಅಧಿಕಾರಿಗಳು ಹಿಡಿತ ಸಾಧಿಸಿದ್ದರು. ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಈ ಮೂಲಕ ಆಡಳಿತ ಯಂತ್ರಕ್ಕೆ ಚುರುಕು ಮುಟ್ಟಿಸುವ ಕ್ರಮ ಕೈಗೊಂಡಿದ್ದಾರೆ' ಎಂದು ಮೂಲಗಳು ಹೇಳಿವೆ.

'ವರ್ಗಾವಣೆ ಸಂಬಂಧ ಗುರುವಾರ ಅಧಿಸೂಚನೆ ಹೊರಡಿಸಿದ್ದು, ಉಪಕಾರ್ಯದರ್ಶಿ, ಅಧೀನ ಕಾರ್ಯದರ್ಶಿ, ಶಾಖಾಧಿಕಾರಿಗಳು, ಹಿರಿಯ ಸಹಾಯಕರು, ಸಹಾಯಕರು ಮತ್ತು ಕಿರಿಯ ಸಹಾಯಕರನ್ನು ಒಳಗೊಂಡಂತೆ 30 ಮಂದಿಯನ್ನು ಬೇರೆ ವಿಭಾಗಗಳಿಗೆ ವರ್ಗಾಯಿಸಲಾಗಿದೆ. ಪ್ರಭಾವಿಗಳ ಮೂಲಕ ಒತ್ತಡ ತಂದು ಆಯಕಟ್ಟಿನ ಸ್ಥಳಗಳಲ್ಲೇ ಬಹಳ ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದರು. ಈ ಸಿಬ್ಬಂದಿ ಬಗ್ಗೆ ಹಲವು ದೂರುಗಳೂ ಕೇಳಿ ಬಂದಿದ್ದವು' ಎಂದು ಮೂಲಗಳು ತಿಳಿಸಿವೆ.

'ಸಚಿವಾಲಯದಲ್ಲಿ ಹಣ ಮತ್ತು ಅಧಿಕಾರ ದುರುಪಯೋಗ ಕುರಿತ ದೂರುಗಳಿಗೆ ಸಂಬಂಧಿಸಿದಂತೆ ಸಮಗ್ರ ತನಿಖೆಗೆ ಸರ್ಕಾರದ ಹಿರಿಯ ಅಧಿಕಾರಿಗಳಿಗೆ ಆದೇಶ ನೀಡಿದ್ದಾರೆ. ಸಚಿವಾಲಯದಲ್ಲಿ ಇರುವ ಭ್ರಷ್ಟಾಚಾರ, ಸ್ವಜನ ಪಕ್ಷಪಾತದಂತಹ ಆರೋಪಗಳಿಗೆ ಪರಿಹಾರ ಕಂಡು ಹಿಡಿಯುವಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದಾರೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ಜಿಆರ್‌ಟಿ ಜ್ಯುವೆಲರ್ಸ್‌ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ಲಾಟಿನಂ ಗಿಲ್ಡ್ ಇಂಟರ್‌ನ್ಯಾಷನಲ್ ಸಂಸ್ಥೆಯು 2020ರ ಅಕ್ಟೋಬರ್ 16ರಿಂದ ನವೆಂಬರ್ 15ರವರೆಗೆ ದೇಶದಾದ್ಯಂತ ಆಯೋಜಿಸಿದ್ದ 'ಪ್ಲಾಟಿನಂ ಸೀಸನ್ ಆಫ್ ಹೋಪ್'ನಲ್ಲಿ ಜಿಆರ್‌ಟಿ ಜ್ಯುವೆಲರ್ಸ್ ಕಂಪನಿಯ ಕೋಟ್ಸ್ ರೋಡ್ ಮಳಿಗೆಯು ರಾಷ್ಟ್ರಮಟ್ಟದಲ್ಲಿ ವಿಜಯಿಯಾಗಿದೆ.

ಉಸ್ಮಾನ್ ರೋಡ್ ಮಳಿಗೆಯು ದಕ್ಷಿಣ ವಲಯದಲ್ಲಿ ವಿಜಯಿ ಆಗಿದೆ ಎಂದು ಪ್ರಕಟಣೆ ತಿಳಿಸಿದೆ.

ರಾಷ್ಟ್ರಮಟ್ಟದಲ್ಲಿ ಅತ್ಯುತ್ತಮ ಸೇಲ್ಸ್ ಮ್ಯಾನೇಜರ್ ಮೊದಲ ರನ್ನರ್ ಅಪ್ ಪ್ರಶಸ್ತಿ ಹಾಗೂ ದಕ್ಷಿಣ ವಲಯದ ಅತ್ಯುತ್ತಮ ಸೇಲ್ಸ್ ಮ್ಯಾನೇಜರ್ ಪ್ರಶಸ್ತಿಗೆ ಜಿಆರ್‌ಟಿ ಕಂಪನಿಯವರನ್ನು ಆಯ್ಕೆ ಮಾಡಲಾಗಿದೆ. ಜಿಆರ್‌ಟಿ ಕಂಪನಿಯು ರಾಷ್ಟ್ರಮಟ್ಟ ಹಾಗೂ ದಕ್ಷಿಣ ವಲಯ ಮಟ್ಟದಲ್ಲಿ ಸತತ ನಾಲ್ಕನೆಯ ವರ್ಷವೂ ಪ್ರಶಸ್ತಿ ಗೆದ್ದುಕೊಂಡಿದೆ.

'ಈ ಪ್ರಶಸ್ತಿಗಳು ನಮ್ಮ ತಂಡಕ್ಕೆ ಸ್ಫೂರ್ತಿ ನೀಡುತ್ತವೆ' ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ರಾಧಾಕೃಷ್ಣನ್ ಹೇಳಿದ್ದಾರೆ.

ಸೆ.1ರಿಂದ ಎನ್‌ಎಚ್–75 ಪ್ರಯಾಣ ದುಬಾರಿ

ಬೆಂಗಳೂರು: ಬೆಂಗಳೂರು–ಹಾಸನ ರಾಷ್ಟ್ರೀಯ ಹೆದ್ದಾರಿಯ (ಎನ್‌ಎಚ್–75) ಪ್ರಯಾಣವು ಸೆಪ್ಟೆಂಬರ್ 1ರಿಂದ ದುಬಾರಿಯಾಗಲಿದ್ದು, ಬಳಕೆದಾರರ ಮೇಲೆ ಹೊರೆ ಹೆಚ್ಚಲಿದೆ.

ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (ಎನ್‌ಎಚ್‌ಎಐ) ಹೆದ್ದಾರಿ ಶುಲ್ಕವನ್ನು ಪರಿಷ್ಕರಿಸಿದ್ದು, ಇದಕ್ಕೆ ಅಧಿಕೃತ ಮುದ್ರೆಯೂ ಬಿದ್ದಿದೆ. ಇದರಿಂದ ನಿತ್ಯ ಪ್ರಯಾಣಿಸುವವರು ಹೆಚ್ಚು ಶುಲ್ಕ ಪಾವತಿಸಬೇಕಾಗುತ್ತದೆ.

ಬೆಂಗಳೂರು–ತುಮಕೂರು–ಹಾಸನ–ಶಿವಮೊಗ್ಗದ ನಡುವೆ ಪ್ರಯಾಣಿಸುವವರು ನೆಲಮಂಗಲ ಹಾಗೂ ಕಬ್ಬೈಲು (ಬೆಳ್ಳೂರು ಕ್ರಾಸ್) ಟೋಲ್ ಸಂಗ್ರಹ ಕೇಂದ್ರಗಳ ಮೂಲಕ ಹಾದು ಹೋಗಬೇಕಾಗುತ್ತದೆ.

ಟೋಲ್ ಮೂಲಕ ಸಾಗಿ ಮತ್ತೆ ಹಿಂದಕ್ಕೆ ಬರುವ ಕಾರುಗಳು ನೆಲಮಂಗಲ ಟೋಲ್‌ನಲ್ಲಿ ಇನ್ನು ಮುಂದೆ ₹65ರ ಬದಲು ₹70 ಪಾವತಿಸಬೇಕಾಗುತ್ತದೆ. ಒಂದೇ ಬಾರಿ ಟೋಲ್ ಸಂಗ್ರಹ ಕೇಂದ್ರದ ಮೂಲಕ ಹಾದು ಹೋಗುವ ಕಾರುಗಳು ಮೊದಲಿನಂತೆ ₹45 ಶುಲ್ಕವನ್ನಷ್ಟೇ ಪಾವತಿಸಬೇಕು. ಮಾಸಿಕ ಪಾಸ್ ದರವನ್ನು ₹40 ಹೆಚ್ಚಳ (₹1,390) ಮಾಡಲಾಗಿದೆ.

ಬಸ್ ಮತ್ತು ಟ್ರಕ್‌ಗಳು ಒಮ್ಮೆ ಹಾದು ಹೋಗುವ ಶುಲ್ಕವನ್ನು ಕ್ರಮವಾಗಿ ₹5 ಮತ್ತು ₹10ರಷ್ಟು ಏರಿಸಲಾಗಿದೆ. ಮಾಸಿಕ ಪಾಸ್ ದರವನ್ನು ₹140 ರಷ್ಟು ಹೆಚ್ಚಿಸಲಾಗಿದೆ. ಇನ್ನು ಮುಂದೆ ಇವರು ತಿಂಗಳಿಗೆ ₹4,865 ಮೊತ್ತ ಪಾವತಿಸಬೇಕು. ಲಘು ವಾಣಿಜ್ಯ ವಾಹನಗಳ ಮಾಸಿಕ ಪಾಸ್ ದರವನ್ನು ₹75ರಷ್ಟು ಏರಿಸಲಾಗಿದೆ. ತಾವು ಬೆಳೆದ ತರಕಾರಿಗಳನ್ನು ನಿತ್ಯ ಮಾರುಕಟ್ಟೆಗೆ ಸಾಗಿಸುವ ರೈತರ ಮೇಲೆ ಇದರಿಂದ ಹೊರೆ ಹೆಚ್ಚಬಹುದು ಎಂದು ಹೇಳಲಾಗಿದೆ.

'ಕೋವಿಡ್‌ನಿಂದಾಗಿ ಜನರ ಬದುಕು ತತ್ತರಿಸಿದೆ. ಹೀಗಾಗಿ ಸರ್ಕಾರವು ಕೂಡಲೇ ಹೆದ್ದಾರಿ ಶುಲ್ಕ ಪರಿಷ್ಕರಣೆ ನಿರ್ಧಾರ ಕೈಬಿಡಬೇಕು. ಅಥವಾ ಇನ್ನು ಎರಡು ವರ್ಷ ಇದನ್ನು ಮುಂದೂಡಬೇಕು. ಟ್ಯಾಕ್ಸಿ, ಲಾರಿ ಹಾಗೂ ಟ್ರಕ್‌ಗಳು ಒಂದೆಡೆಯಿಂದ ಮತ್ತೊಂದೆಡೆಗೆ ಸರಕು ಸಾಗಾಣೆ ಮಾಡುವುದರಿಂದ ಸರ್ಕಾರದ ಬೊಕ್ಕಸಕ್ಕೆ ಆದಾಯ ಹರಿದುಬರುತ್ತಿದೆ. ಕೋವಿಡ್‌ನಿಂದಾಗಿ ಟ್ರಾವೆಲ್ಸ್ ಮಾಲೀಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಬಹುತೇಕರು ಲಾರಿ, ಟ್ರಕ್‌ಗಳನ್ನು ರಸ್ತೆಗಿಳಿಸಲೂ ಹಿಂದೇಟು ಹಾಕುತ್ತಿದ್ದಾರೆ. ಹೀಗಾಗಿ ಸರ್ಕಾರ ತನ್ನ ನಿರ್ಧಾರದಲ್ಲಿ ಬದಲಾವಣೆ ಮಾಡಿಕೊಳ್ಳಬೇಕು' ಎಂದು ರಾಜ್ಯ ಟ್ರಾವೆಲ್ಸ್ ಮಾಲೀಕರ ಸಂಘದ ಅಧ್ಯಕ್ಷ ರಾಧಾಕೃಷ್ಣ ಹೊಳ್ಳ ಒತ್ತಾಯಿಸಿದ್ದಾರೆ.

ರಾಜೀವ್ ಗಾಂಧಿ, ಅರಸು ಜನ್ಮದಿನಾಚರಣೆ ಕಾರ್ಯಕ್ರಮ: ವಿಧಾನಸಭೆ ವಿಪಕ್ಷ ನಾಯಕ ಸಿದ್ದರಾಮಯ್ಯ ಟೀಕೆ

‘ಬಿಜೆಪಿಯವರು ಮೀಸಲಾತಿ ವಿರೋಧಿಗಳು’

ಪ್ರಜಾವಾಣಿ ವಾರ್ತೆ



ಬೆಂಗಳೂರಿನ ರೇಸ್ ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ಶುಕ್ರವಾರ ನಡೆದ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಮತ್ತು ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಜನ್ಮದಿನಾಚರಣೆ ಸಮಾರಂಭದಲ್ಲಿ ಶಾಸಕ ದಿನೇಶ್ ಗುಂಡೂರಾವ್, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಹಿರಿಯ ಮುಖಂಡ ಕೆ. ರೆಹಮಾನ್ ಖಾನ್, ಶಾಸಕ ಕೆ.ಜೆ. ಜಾರ್ಜ್ ಪಾಲ್ಗೊಂಡಿದ್ದರು

ಬೆಂಗಳೂರು: ‘ಬಿಜೆಪಿಯವರು ಮಹಾ ಮೋಸಗಾರರು ಮತ್ತು ಸುಳ್ಳುಗಾರರು. ಇತಿಹಾಸ ತಿರುಚುವುದು, ಜನರನ್ನು ದಾರಿ ತಪ್ಪಿಸುವುದು ಮತ್ತು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದರು.

ರೇಸ್ ಕೋರ್ಸ್ ರಸ್ತೆಯ ಕಾಂಗ್ರೆಸ್ ಭವನದಲ್ಲಿ ಕೆಪಿಸಿಸಿ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಮತ್ತು ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ ಜನ್ಮದಿನಾಚರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕೊಟ್ಟಿದ್ದೇ ಬಿಜೆಪಿಯವರು ಎಂಬಂತೆ ಮಾತನಾಡುತ್ತಾರೆ. ಆದರೆ, ವಾಸ್ತವದಲ್ಲಿ ಬಿಜೆಪಿಯವರು ಮೀಸಲಾತಿ ವಿರೋಧಿಗಳು. ಈ ಬಗ್ಗೆ ಎಚ್ಚರದಿಂದ ಇರಬೇಕು ಎಂದು ಹೇಳಿದರು.

‘ರಾಜೀವ್ ಗಾಂಧಿ ಮತ್ತು ದೇವರಾಜ ಅರಸು ಅವರು ಮಹಾನ್ ನಾಯಕರು. ಈ ಇಬ್ಬರ ಜತೆ ನೇರವಾಗಿ ಕೆಲಸ ಮಾಡುವ ಅವಕಾಶ ನನಗೆ ದೊರಯಲಿಲ್ಲ. ರಾಜೀವ್ ಗಾಂಧಿಯವರು ಯುವ ಜನರನ್ನು ರಾಜಕಾರಣಕ್ಕೆ ತರುವಲ್ಲಿ ಮತ್ತು ದೇಶವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯುವಲ್ಲಿ ಮಹತ್ವದ ಪಾತ್ರ ನಿರ್ವಹಿಸಿದರು. ಅರಸು ಅವರು ದುರ್ಬಲ ವರ್ಗಗಳಿಗೆ ರಾಜಕೀಯ ಪ್ರಾತಿನಿಧ್ಯ ನೀಡುವ ಮೂಲಕ ಧ್ವನಿಯಾಗಿ ಕೆಲಸ ಮಾಡಿದರು’ ಎಂದು ಸಿದ್ದರಾಮಯ್ಯ ಸ್ಮರಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾ ರೆಡ್ಡಿ, ಸಲೀಂ ಅಹ್ಮದ್, ರಾಜ್ಯಸಭೆ ಸದಸ್ಯ ಡಾ.ಎಲ್. ಹನುಮಂತಯ್ಯ, ಪಕ್ಷದ ಹಿರಿಯ ಮುಖಂಡರಾದ ಕೆ.ಎಚ್. ಮುನಿಯಪ್ಪ, ಕೆ. ರೆಹಮಾನ್ ಖಾನ್, ಶಾಸಕ ದಿನೇಶ್ ಗುಂಡೂರಾವ್, ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ನಾರಾಯಣಸ್ವಾಮಿ, ಪ್ರದೇಶ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷೆ ಪುಷ್ಪಾ ಅಮರನಾಥ್, ಕೆಪಿಸಿಸಿ ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷ ಎಂ.ಡಿ. ಲಕ್ಷ್ಮೀನಾರಾಯಣ ಉಪಸ್ಥಿತರಿದ್ದರು.

ಬಿಜೆಪಿಗೆ ಮಾರ್ಗಸೂಚಿ ಅನ್ವಯವಾಗದೆ: ಡಿಕೆಶಿ ಪ್ರಶ್ನೆ

ಬೆಂಗಳೂರು: ಕಾಂಗ್ರೆಸ್ ಮತ್ತು ಇತರ ರಾಜಕೀಯ ಪಕ್ಷಗಳಿಗೆ ಅನ್ವಯವಾಗುವ ಕೋವಿಡ್ ನಿಯಂತ್ರಣ ಮಾರ್ಗಸೂಚಿ ಬಿಜೆಪಿಗೆ ಅನ್ವಯಿಸುವುದಿಲ್ಲವೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಮಾಜಿ ಪ್ರಧಾನಿ ರಾಜೀವ್ ಗಾಂಧಿ ಮತ್ತು ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಜನ್ಮದಿನಾಚರಣೆಯಲ್ಲಿ ಮಾತನಾಡಿದ ಅವರು, ‘ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಸಮಾರಂಭ ಆಯೋಜಿಸಲು ಯೋಚಿಸಿದ್ದೆವು. ಆದರೆ, ಕೋವಿಡ್ ನಿಯಂತ್ರಣ ಮಾರ್ಗಸೂಚಿ ಹೆಸರಿನಲ್ಲಿ ಅಧಿಕಾರಿಗಳು ಅನುಮತಿ ನೀಡಲಿಲ್ಲ. ಕೇಂದ್ರ ಸಚಿವರು ಬಿಜೆಪಿಯ ಜನಾಶೀರ್ವಾದ ಯಾತ್ರೆ ನಡೆಸುತ್ತಿದ್ದಾರೆ. ಅದಕ್ಕೆ ಯಾವ ನಿರ್ಬಂಧವೂ ಇಲ್ಲ’ ಎಂದರು.

ರಾಜಕೀಯ ಸಭೆ, ಸಮಾರಂಭ ಬೇಡ ಎಂಬ ಸಾಮಾನ್ಯ ನಿಯಮ ಪಾಲಿಸಲು ಕಾಂಗ್ರೆಸ್ ಪಕ್ಷ ಸಿದ್ಧವಿದೆ. ಆದರೆ, ಬಿಜೆಪಿಗೆ ಒಂದು ನಿಯಮ, ಇತರ ಪಕ್ಷಗಳಿಗೆ ಒಂದು ನಿಯಮ ಇದೆಯೆ? ಕೇಂದ್ರ ಸಚಿವರ ಪ್ರವಾಸದ ವೇಳೆ ಗಾಳಿಯಲ್ಲಿ ಗುಂಡು ಹಾರಿಸಲಾಗುತ್ತಿದೆ. ಮುಖ್ಯಮಂತ್ರಿವರು ಪೊಲೀಸ್ ಕಾನ್‌ಸ್ಟೆಬಲ್‌ಗಳನ್ನು ಅಮಾನತು ಮಾಡಿದ್ದಾರೆ. ಇದಕ್ಕಾಗಿ ಅವರಿಗೆ ಅಭಿನಂದನೆ ಸಲ್ಲಿಸಬೇಕು ಎಂದು ಟೀಕಿಸಿದರು.

‘ನನ್ನ ವಿರುದ್ಧ ಕೆಲವರು ರಾಜೀವ್ ಗಾಂಧಿ ಅವರಿಗೆ ದೂರು ನೀಡಿದ್ದರು. ವಿವಾದಾತ್ಮಕ ನಾಯಕರಿಂದ ಅನುಕೂಲವಾಗುತ್ತದೆ ಮತ್ತು ಅವರು ಯಶಸ್ವಿಯಾಗುತ್ತಾರೆ ಎಂದು ಅವರು ಆಗಲೇ ಬೆಂಬಲಿಸಿದ್ದರು’ ಎಂದು ಶಿವಕುಮಾರ್ ನೆನಪಿಸಿಕೊಂಡರು.

‘ಜನರನ್ನು ಸಂಕಷ್ಟಕ್ಕೆ ನೂಕುತ್ತಿರುವ ಮೋದಿ ಸರ್ಕಾರ’



ಆಮ್ ಆದ್ಮಿ ಪಕ್ಷದ ಕಾರ್ಯಕರ್ತರು ಸಿಲಿಂಡರ್‌ನ ಅಣಕು ಶವ ಸಂಸ್ಕಾರ ನೆರವೇರಿಸಿ ಕೇಂದ್ರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಎಎಪಿ ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ.ಸದಂ, ವಿ.ಜೋತೀಶ್ ಕುಮಾರ್, ಗೋಪಿನಾಥ್, ಪುಷ್ಪಾ ಕೇಶವ್, ಉಮರ್ ಷರೀಫ್, ಉಸ್ಮಾನ್, ವೀಣಾ ಸೆರ್ರಾವ್ ಇದ್ದರು ಪ್ರಜಾವಾಣಿ ಚಿತ್ರ

ಬೆಂಗಳೂರು: ‘ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ದಿನೇ ದಿನೇ ಅಗತ್ಯ ವಸ್ತುಗಳ ಬೆಲೆ ಏರಿಸುತ್ತಲೇ ಇದ್ದು, ಆ ಮೂಲಕ ಜನರನ್ನು ಸಂಕಷ್ಟಕ್ಕೆ ನೂಕುತ್ತಿದೆ’ ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಮಾಧ್ಯಮ ಸಂಚಾಲಕ ಜಗದೀಶ್ ವಿ.ಸದಂ ಟೀಕಿಸಿದರು.

ಅಡುಗೆ ಅನಿಲ ದರ ಏರಿಕೆ ಖಂಡಿಸಿ ಪಕ್ಷವು ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಅವರು ಕೇಂದ್ರದ ವಿರುದ್ಧ ಶುಕ್ರವಾರ ಆಕ್ರೋಶ ವ್ಯಕ್ತಪಡಿಸಿದರು.

‘ಮೋದಿ ಸರ್ಕಾರ ಅಧಿಕಾರಕ್ಕೆ ಬರುವ ಮುನ್ನ ಶೇ.50ರಷ್ಟು ಸಬ್ಸಿಡಿಯೊಂದಿಗೆ ₹400ಕ್ಕೆ ಅಡುಗೆ ಅನಿಲದ ಸಿಲಿಂಡರ್ ಸಿಗುತ್ತಿತ್ತು. ಸಬ್ಸಿಡಿ ಮೊತ್ತವನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ಹಾಕುವುದಾಗಿ ಹೇಳಿ ಮೋದಿ ಸರ್ಕಾರವು ಜನರನ್ನು ಮೂರ್ಖರನ್ನಾಗಿಸಿತು. ಈಗ ಪದೇ ಪದೇ ದರ ಏರಿಕೆ ಮಾಡುವ ಮೂಲಕ ಅವರ ಬದುಕನ್ನು ದುಸ್ತರಗೊಳಿಸುತ್ತಿದೆ’ ಎಂದು ದೂರಿದರು.

‘ದೇಶದಲ್ಲಿ ಶ್ರೀಮಂತರನ್ನಷ್ಟೇ ಉಳಿಸಿಕೊಂಡು ಭಾರತವನ್ನು ವಿಶ್ವಗುರು ಮಾಡಲು ಬಿಜೆಪಿ ಹೊರಟಿರುವಂತಿದೆ.’ ಎಂದರು.

‘ಉಜ್ವಲ ಯೋಜನೆಯ ಹೆಸರಿನಲ್ಲಿ ಜನರಿಗೆ ಅಡುಗೆ ಅನಿಲ ಸಂಪರ್ಕವನ್ನು ಉಚಿತವಾಗಿ ಕಲ್ಪಿಸಿಕೊಟ್ಟ ಕೇಂದ್ರ ಸರ್ಕಾರವು ಹೀಗೆ ಬೆಲೆ ಹೆಚ್ಚಿಸುತ್ತಾ ಹೋದರೆ ಸಾಮಾನ್ಯ ಜನ ಬದುಕುವುದಾದರೂ ಹೇಗೆ.’ ಎಂದು ಪ್ರಶ್ನಿಸಿದರು.



ಶುಕ್ರವಾರ ಕಾಂಗ್ರೆಸ್ ಸೇರಿದ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಡಾ.ಸಿ.ಎಸ್. ದ್ವಾರಕಾನಾಥ್ ಅವರನ್ನು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪಕ್ಷದ ಬಾವುಟ ನೀಡುವ ಮೂಲಕ ಸ್ವಾಗತಿಸಿದರು

ಸಿ.ಎಸ್. ದ್ವಾರಕಾನಾಥ್ ಕಾಂಗ್ರೆಸ್ ಸೇರ್ಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ, ವಕೀಲ ಡಾ.ಸಿ.ಎಸ್. ದ್ವಾರಕಾನಾಥ್ ಅವರು ಶುಕ್ರವಾರ ಕಾಂಗ್ರೆಸ್ ಪಕ್ಷ ಸೇರ್ಪಡೆಯಾದರು.

ರೇಸ್ ಕೋರ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಭವನದಲ್ಲಿ ನಡೆದ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಮತ್ತು ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಜನ್ಮದಿನಾಚರಣೆ ಸಮಾರಂಭದಲ್ಲೇ ದ್ವಾರಕಾನಾಥ್ ಅವರು ಪಕ್ಷ ಸೇರಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಬಾವುಟ ನೀಡುವ ಮೂಲಕ ಪಕ್ಷಕ್ಕೆ ಅವರನ್ನು ಬರಮಾಡಿಕೊಂಡರು.

ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಜೆಡಿಎಸ್– ಬಿಜೆಪಿ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ದ್ವಾರಕಾನಾಥ್ ಅವರು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದರು. 2019ರ ಲೋಕಸಭಾ ಚುನಾವಣೆಯಲ್ಲಿ ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ಬಹುಜನ ಸಮಾಜ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು.

ಕಾಂಗ್ರೆಸ್ ಸೇರಿದ ಬಳಿಕ ಪ್ರತಿಕ್ರಿಯಿಸಿದ ಅವರು, ‘ಯುಪಿಎ ಸರ್ಕಾರದಲ್ಲಿ ಪ್ರಧಾನಿಯಾಗಿದ್ದ ಡಾ. ಮನಮೋಹನ್ ಸಿಂಗ್ ಅವರು ಅತ್ಯಂತ ದುರ್ಬಲ ಸಮುದಾಯಗಳನ್ನು ಗುರುತಿಸಿ, ಅವಕಾಶಗಳನ್ನು ಕಲ್ಪಿಸಿದ್ದರು. ಧ್ವನಿ ಇಲ್ಲದ ಸಮುದಾಯಗಳನ್ನು ಮುಖ್ಯವಾಹಿನಿಗೆ ತರುವ ಕೆಲಸವನ್ನು ನಾನು ಮಾಡುವೆ’ ಎಂದರು.

ಕೋವಿಡ್: 29.36 ಲಕ್ಷಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 1,453 ಮಂದಿ ಕೊರೊನಾ ಸೋಂಕಿತರಾಗಿರುವುದು ಶುಕ್ರವಾರ ದೃಢಪಟ್ಟಿದೆ. ಈವರೆಗೆ ವರದಿಯಾದ ಕೋವಿಡ್ ಪ್ರಕರಣಗಳ ಒಟ್ಟು ಸಂಖ್ಯೆ 29.36 ಲಕ್ಷ ದಾಟಿದೆ.

ಒಂದು ದಿನದಲ್ಲಿ 1.73 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣ ಶೇ 0.83ರಷ್ಟು ವರದಿಯಾಗಿದೆ. 10 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 15 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಚಾಮರಾಜನಗರದಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 341, ಕೊಡಗಿನಲ್ಲಿ 95 ಹಾಗೂ ಮೈಸೂರಿನಲ್ಲಿ 87 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 352, ಉಡುಪಿಯಲ್ಲಿ 176 ಹಾಗೂ ಹಾಸನದಲ್ಲಿ 101 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ಇವೆ.

ಸೋಂಕಿತರಲ್ಲಿ 1,408 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 28.77 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 21,161ಕ್ಕೆ ಏರಿಕೆಯಾಗಿದೆ.

ಕೋವಿಡ್ ಪೀಡಿತರಲ್ಲಿ 17 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 10 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ದಕ್ಷಿಣ ಕನ್ನಡದಲ್ಲಿ 6, ಉತ್ತರ ಕನ್ನಡ ಹಾಗೂ ಮೈಸೂರಿನಲ್ಲಿ ತಲಾ ಇಬ್ಬರು ಸಾವಿಗೀಡಾಗಿದ್ದಾರೆ.

ಬೆಂಗಳೂರು ಸೇರಿದಂತೆ ಏಳು ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮರಣ ಪ್ರಮಾಣ ದರವು ಶೇ 1.16 ರಷ್ಟು ವರದಿಯಾಗಿದೆ. ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 37,105ಕ್ಕೆ ತಲುಪಿದೆ.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	21.12 ಕೋಟಿ ▲	3.23 ಕೋಟಿ
ಸಕ್ರಿಯ ಪ್ರಕರಣ	1.77 ಕೋಟಿ ▲	3.55 ಲಕ್ಷ ▼
ಗುಣಮುಖ	18.91 ಕೋಟಿ ▲	3.15 ಕೋಟಿ
ಸಾವು	44.23ಲಕ್ಷ ▲	4.33 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	7.26 ಲಕ್ಷ ▼	34,288 ▼
ಗುಣಮುಖ	5.41 ಲಕ್ಷ ▼	36,248 ▼
ಸಾವು	10,950 ▲	376 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 1.54 ಲಕ್ಷ ▼ ಅಮೆರಿಕ; 36,463 ಬ್ರಿಟನ್; 35,991 ▼ ಬ್ರೆಜಿಲ್


ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 71.98 ▲ ಅಮೆರಿಕ; 13.04 ▲ ಬ್ರಿಟನ್; 5.28 ▲ ಬ್ರೆಜಿಲ್

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು): 1.35 ಲಕ್ಷ ▲ ಮಹಾರಾಷ್ಟ್ರ; 34,663 ▲ ತಮಿಳುನಾಡು; 25,079 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 64.15 ಮಹಾರಾಷ್ಟ್ರ ▼; 37.86 ಕೇರಳ; 25.97 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್



ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,34,509 ▲ ಒಟ್ಟು ಸೋಂಕಿತರು

7,912 ▲	12,10,640 ▲	15,956 ▲
ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	352 ▼
ಗುಣಮುಖ	381 ▲
ಸಾವು	1 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

‘ಶಾಲಾ–ಕಾಲೇಜು ಸದ್ಯ ಆರಂಭ ಬೇಡ’

ಪ್ರಜಾವಾಣಿ ವಾರ್ತೆ



ಗಿರೀಶ್ ನಾಶಿ

ಬೆಂಗಳೂರು: ‘ಕೊರೊನಾ ಮೂರನೇ ಅಲೆಯು ಮಕ್ಕಳ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುವ ಸಾಧ್ಯತೆ ಇದ್ದು, ಸದ್ಯ ಶಾಲಾ–ಕಾಲೇಜುಗಳನ್ನು ಪುನರಾರಂಭಿಸುವುದು ಬೇಡ’ ಎಂದು ಜೆಡಿಎಸ್ ಮುಖಂಡ ಡಾ. ಗಿರೀಶ್ ಕೆ. ನಾಶೀ ಒತ್ತಾಯಿಸಿದ್ದಾರೆ.

‘ಸರ್ಕಾರವು ಎಲ್ಲ ಮಕ್ಕಳಿಗೂ ಲಸಿಕೆ ಹಾಕಿದ ನಂತರ ಶಾಲೆಯನ್ನು ತೆರೆಯಬೇಕು’ ಎಂದೂ ಅವರು ಆಗ್ರಹಿಸಿದ್ದಾರೆ.

‘ಮಕ್ಕಳ ಆರೋಗ್ಯ ತುಂಬಾ ಸೂಕ್ಷ್ಮವಾದದ್ದು. ಅವರ ಜೀವ ಮುಖ್ಯವಾದದ್ದು. ಈ ಶೈಕ್ಷಣಿಕ ವರ್ಷವನ್ನು ಆನ್‌ಲೈನ್ ತರಗತಿಗಳ ಮೂಲಕವೇ ಪೂರ್ಣಗೊಳಿಸಬೇಕು. ಶಾಲೆ ಆರಂಭಿಸಿ, ಮಕ್ಕಳಿಗೆ ತೊಂದರೆಯಾದರೆ, ಮುಂದಿನ ಅನಾಹುತಕ್ಕೆ ಸರ್ಕಾರವೇ ನೇರ ಹೊಣೆಯಾಗಬೇಕಾಗುತ್ತದೆ’ ಎಂದು ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಕುಡಿದ ಮತ್ತಿನಲ್ಲಿ ಜಗಳ: ಸ್ನೇಹಿತನನ್ನೇ ಕೊಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವರ ಜೀವನಹಳ್ಳಿ (ಡಿ.ಜೆ. ಹಳ್ಳಿ) ಠಾಣೆಯ ವ್ಯಾಪ್ತಿಯಲ್ಲಿ ನಿತೇಶ್ (30) ಎಂಬುವರ ಕೊಲೆ ಆಗಿದ್ದು, ಈ ಪ್ರಕರಣ ಸಂಬಂಧ ಅವರ ಸ್ನೇಹಿತ ಪ್ರಶಾಂತ್‌ನನ್ನು ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ಶ್ರೀನಿವಾಸನಗರದ ನಿವಾಸಿ ನಿತೇಶ್, ಕಾರ್ಮಿಕರಾಗಿದ್ದರು. ಆರೋಪಿ ಪ್ರಶಾಂತ್, ಪೇಂಟರ್ ಆಗಿದ್ದ. ಇವರಿಬ್ಬರು ಹಲವು ವರ್ಷಗಳಿಂದ ಸ್ನೇಹಿತರು. ಕುಡಿದ ಮತ್ತಿನಲ್ಲಿ ಅವರಿಬ್ಬರ ನಡುವೆ ಗಲಾಟೆ ಶುರುವಾಗಿ, ಕೊಲೆಯಲ್ಲಿ ಅಂತ್ಯವಾಗಿದೆ’ ಎಂದು ಪೊಲೀಸರು ಹೇಳಿದರು.

ಹೊದಿಕೆ ಮಾರಾಟಕ್ಕಿಟ್ಟು ₹2.64 ಲಕ್ಷ ಕಳೆದುಕೊಂಡರು

ಬೆಂಗಳೂರು: ಬಳಕೆ ಮಾಡಿದ್ದ ಬೆಡ್ ಹಾಗೂ ಹೊದಿಕೆ ಮಾರಾಟಕ್ಕಿಟ್ಟಿದ್ದ ನಗರದ ಮಹಿಳೆಯೊಬ್ಬರು, ಸೈಬರ್ ವಂಚಕರ ಜಾಲದಲ್ಲಿ ಸಿಲುಕಿ ₹ 2.64 ಲಕ್ಷ ಕಳೆದುಕೊಂಡಿದ್ದಾರೆ.

‘ಬೆಡ್ ಹಾಗೂ ಹೊದಿಕೆ ಖರೀದಿಸುವ ಸೋಗಿನಲ್ಲಿ ನನ್ನನ್ನು ಸಂಪರ್ಕಿಸಿದ್ದ ರಾಹುಲ್ ಎಂಬಾತ ಲಿಂಕೊಂದನ್ನು ಕಳುಹಿಸಿ ಖಾತೆಯಿಂದ ಹಣ ವರ್ಗಾಯಿಸಿಕೊಂಡು ವಂಚಿಸಿದ್ದಾನೆ’ ಎಂದು ಆರೋಪಿಸಿ ಮಲ್ಲಸಂದ್ರದ 43 ವರ್ಷದ ಮಹಿಳೆ ದೂರು ನೀಡಿದ್ದಾರೆ. ಅದರನ್ವಯ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಮನೆಯಲ್ಲಿ ಉಪಯೋಗಿಸದ ಬೆಡ್ ಹಾಗೂ ಹೊದಿಕೆ ಮಾರಲು ಇಚ್ಛಿಸಿದ್ದೆ. ಓಎಲ್‌ಎಕ್ಸ್ ಜಾಲತಾಣದಲ್ಲಿ ಫೋಟೊ ಸಮೇತ ಜಾಹೀರಾತು ನೀಡಿದ್ದೆ. ಅದನ್ನು ನೋಡಿ ಮೊಬೈಲ್‌ಗೆ ಕರೆ ಮಾಡಿದ್ದ ಆರೋಪಿ, ಬೆಡ್ ಹಾಗೂ ಹೊದಿಕೆ ಬೇಕೆಂದು ಹೇಳಿದ್ದ. ಮುಂಗಡವಾಗಿ ಹಣ ನೀಡುವುದಾಗಿ ಹೇಳಿ ಲಿಂಕೊಂದನ್ನು ಕಳುಹಿಸಿದ್ದ’ ಎಂದೂ ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ.

‘ಆರೋಪಿ ಕಳುಹಿಸಿದ್ದ ಲಿಂಕ್ ತೆರೆದಿದ್ದೆ. ಅದಾಗಿ ಕೆಲ ನಿಮಿಷಗಳಲ್ಲೇ ನನ್ನ ಬ್ಯಾಂಕ್ ಖಾತೆಯಿಂದ ಹಂತ ಹಂತವಾಗಿ ₹ 2.64 ಲಕ್ಷ ಕಡಿತವಾಗಿದೆ. ಆರೋಪಿ ಹಣ ವರ್ಗಾವಣೆ ಮಾಡಿಕೊಂಡು ವಂಚಿಸಿದ್ದಾನೆ. ಆತನ ವಿರುದ್ಧ ಕ್ರಮ ಕೈಗೊಳ್ಳಿ’ ಎಂದೂ ದೂರಿನಲ್ಲಿ ಹೇಳಿದ್ದಾರೆ.

ನಗರದಲ್ಲಿ ಇಂದು

ಛಾಯಾಚಿತ್ರ ಪ್ರದರ್ಶನ: ಅಖಿಲ ಭಾರತ 39ನೇ ಫೋಟೋಗ್ರಫಿ ಸಲಾನ್ ಸ್ಪರ್ಧೆಯ ಪ್ರದರ್ಶನ ಹಾಗೂ ಬಹುಮಾನ ವಿತರಣೆ, ಮುಖ್ಯ ಅತಿಥಿ: ಶಿವಕುಮಾರ್ ಬೇಗಾರ್, ಆಯೋಜನೆ: ಯೂತ್ ಫೋಟೋಗ್ರಾಫಿಕ್ ಸೊಸೈಟಿ, ಸ್ಥಳ: ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10

ಪುಸ್ತಕ ಬಿಡುಗಡೆ: ಆರ್. ಲಕ್ಷ್ಮೀನಾರಾಯಣ ಅವರ ಕಾದಂಬರಿ ‘ಮುಗಿಯದ ಮಾಯೆ’ ಮತ್ತು ಅನುವಾದಿತ ಕಥೆಗಳ ಸಂಕಲನ ‘ಹಲವು ಭೂಮಿ ಹಲವು ಬಣ್ಣ’, ಬಿಡುಗಡೆ: ಬರಗೂರು ರಾಮಚಂದ್ರಪ್ಪ, ಕೃತಿ ಕುರಿತು ಮಾತನಾಡುವವರು: ಎಚ್. ದಂಡಪ್ಪ, ಕಂನಾಡಿಗಾ ನಾರಾಯಣ, ಅಧ್ಯಕ್ಷತೆ: ಪಿ.ವಿ. ನಾರಾಯಣ, ಆಯೋಜನೆ: ವಸಂತ ಪ್ರಕಾಶನ ಮತ್ತು ಸಿವಿಜಿ ಪಬ್ಲಿಕೇಷನ್ಸ್, ಸ್ಥಳ: ಬಿ.ಎಂ.ಶ್ರೀ. ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30



ಬರಗೂರು ರಾಮಚಂದ್ರಪ್ಪ

ನಿಧನ ವಾರ್ತೆ

ಲಕ್ಷ್ಮೀನಾರಾಯಣ



ಬೆಂಗಳೂರು: ‘ಪ್ರಜಾವಾಣಿ’ ನಿವೃತ್ತ ನೌಕರ ವಿ. ಲಕ್ಷ್ಮೀನಾರಾಯಣ (70) ಅವರು ಇತ್ತೀಚೆಗೆ ನಿಧನರಾದರು. ಅವರಿಗೆ ಪತ್ನಿ, ಪುತ್ರ ಹಾಗೂ ಮೂವರು ಪುತ್ರಿಯರು ಇದ್ದಾರೆ.

ಕನ್ನಡ ಭಾಷಾ ಕಲಿಕಾ ಅಧಿನಿಯಮ-2015 ಅನುಷ್ಠಾನಕ್ಕೆ ಮನವಿ

‘ಖಾಸಗಿ ಶಿಕ್ಷಣ ಸಂಸ್ಥೆ: ಕನ್ನಡ ಭಾಷೆ ಕಡೆಗಣನೆ’

ಪ್ರಜಾವಾಣಿ ವಾರ್ತೆ



ಬಿ.ಸಿ. ನಾಗೇಶ್ ಅವರಿಗೆ ‘ಕನ್ನಡ ಭಾಷಾ ಕಲಿಕಾ ಕಾಯ್ದೆ–2015’ರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಟಿ.ಎಸ್. ನಾಗಾಭರಣ ಅವರು ಮನವಿ ಸಲ್ಲಿಸಿದರು.

ಬೆಂಗಳೂರು: ‘ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳು 2015ರ ಕನ್ನಡ ಭಾಷಾ ಕಲಿಕಾ ಕಾಯ್ದೆಯನ್ನು ಉಲ್ಲಂಘಿಸುತ್ತಿರುವ ಬಗ್ಗೆ ನಿರಂತರವಾಗಿ ದೂರುಗಳು ಸಲ್ಲಿಕೆಯಾಗುತ್ತಿವೆ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ತಿಳಿಸಿದ್ದಾರೆ.

ಈ ಕಾಯ್ದೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರನ್ನು ಶುಕ್ರವಾರ ಭೇಟಿ ಮಾಡಿ, ಮನವಿ ಸಲ್ಲಿಸಿದರು. ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್.ಆರ್. ಉಮಾಶಂಕರ್ ಹಾಗೂ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ ಇದ್ದರು.

‘ಕನ್ನಡ ಭಾಷಾ ಕಲಿಕಾ ಕಾಯ್ದೆ –2015ರ ಅನ್ವಯ 2017-18ನೇ ಸಾಲಿನಿಂದ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಕಲಿಸುವುದು ಎಲ್ಲ ಶಿಕ್ಷಣ ಸಂಸ್ಥೆಗಳಿಗೆ ಕಡ್ಡಾಯಗೊಳಿಸಲಾಗಿದೆ. ಕರ್ನಾಟಕ ರಾಜ್ಯ ಪಠ್ಯಪುಸ್ತಕ ಸಂಘದ ಮಾಹಿತಿ ಪ್ರಕಾರ 2021–22ನೇ ಶೈಕ್ಷಣಿಕ ವರ್ಷಕ್ಕೆ ರಾಜ್ಯದ 823 ಶಾಲೆಗಳು ಸರ್ಕಾರ ನಿಗದಿಪಡಿಸಿರುವ ಕನ್ನಡ ಪಠ್ಯಪುಸ್ತಕಗಳನ್ನು ಖರೀದಿಸಲು ಅಧಿಕೃತ ಪಟ್ಟಿ ಸಲ್ಲಿಸಿಲ್ಲ’ ಎಂದು ಮನವಿ ಪತ್ರದಲ್ಲಿ ಬೇಸರ ವ್ಯಕ್ತಪಡಿಸಿದ್ದಾರೆ.

‘ಕನ್ನಡ ಭಾಷಾ ಕಲಿಕಾ ಅಧಿನಿಯಮ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಶಿಕ್ಷಣ ಇಲಾಖೆಯಲ್ಲಿನ ಎಲ್ಲ ಶೈಕ್ಷಣಿಕ ಜಿಲ್ಲೆಗಳ ಉಪ ನಿರ್ದೇಶಕರಿಗೆ ಪತ್ರ ಬರೆದಿದ್ದೇನೆ. 4ನೇ ತರಗತಿವರೆಗೆ ಕನ್ನಡವನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಕಲಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಬೇಕಿದೆ. ತರಗತಿಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಪಠ್ಯಪುಸ್ತಕಗಳನ್ನು ಸಕ್ಷಮ ಪ್ರಾಧಿಕಾರದಿಂದ ಖರೀದಿಸಲಾಗಿದೆಯೇ ಎಂಬ ಬಗ್ಗೆ ದಾಖಲಾತಿ ಸಂಗ್ರಹಿಸಬೇಕು’ ಎಂದಿದ್ದಾರೆ.

‘ಕನ್ನಡ ವಿಷಯಕ್ಕೆ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಅರ್ಹ ಶಿಕ್ಷಕರನ್ನು ನೇಮಕ ಮಾಡಿರುವ ಬಗ್ಗೆ, ಶಿಕ್ಷಕರಿಗೆ ನಿಯಮಾನುಸಾರ ತರಗತಿ ಹಂಚಿಕೆ ಮಾಡಿರುವ ಬಗ್ಗೆ ಪರಿಶೀಲಿಸಬೇಕು. ವಿದ್ಯಾರ್ಥಿಗಳಿಗೆ ಕನ್ನಡ ಪರೀಕ್ಷೆ ನಡೆಸಿ, ಅಂಕಪಟ್ಟಿಯನ್ನು ವಿತರಿಸಿರುವ ಬಗ್ಗೆ ಕೂಡ ದಾಖಲೆಗಳನ್ನು ಸಂಗ್ರಹಿಸಬೇಕು. ಈ ಬಗ್ಗೆ 15 ದಿನಗಳೊಳಗೆ ಪ್ರಾಧಿಕಾರಕ್ಕೆ ವಿಸ್ತೃತ ವರದಿ ಹಾಗೂ ಅಗತ್ಯ ದಾಖಲೆಗಳನ್ನು ಸಲ್ಲಿಸಬೇಕು’ ಎಂದು ಉಪ ನಿರ್ದೇಶಕರಿಗೆ ನಾಗಾಭರಣ ಅವರು ಸೂಚಿಸಿದ್ದಾರೆ.

ಸುದ್ದಿ 2 ನಿಮಿಷ

ರಕ್ತದ ಆಕರಕೋಶ ದಾನಕ್ಕೆ ಮನವಿ

ಬೆಂಗಳೂರು: ‘ರಕ್ತದ ಆಕರ ಕೋಶಕ್ಕಾಗಿ (ಬ್ಲಡ್ ಸ್ಟೆಮ್ ಸೆಲ್) ದೇಶದಲ್ಲಿ ಲಕ್ಷಕ್ಕೂ ಅಧಿಕ ಮಂದಿ ಎದುರು ನೋಡುತ್ತಿದ್ದಾರೆ. ಆರೋಗ್ಯವಂತ ವ್ಯಕ್ತಿಗಳು ರಕ್ತದ ಆಕರಕೋಶ ದಾನ ಮಾಡುವ ಮೂಲಕ ಅಂತಹವರಿಗೆ ನೆರವಾಗಬೇಕು’ ಎಂದು ಡಿಕೆಎಂಎಸ್–ಬಿಎಂಎಸ್‌ಟಿ ಫೌಂಡೇಷನ್ ಮನವಿ ಮಾಡಿಕೊಂಡಿದೆ.

‘ರಕ್ತ ಕ್ಯಾನ್ಸರ್‌ನಿಂದ ಬಳಲುತ್ತಿರುವ ರೋಗಿಗಳನ್ನು ಕಾಪಾಡಲು ರಕ್ತದ ಆಕರ ಕೋಶ ಸಹಾಯಕ. ದಾನಿಗಳ ರಕ್ತದಿಂದ ಆಕರ ಕೋಶಗಳನ್ನು ಪಡೆದು, ಅಸ್ಥಿಮಜ್ಜೆ ಹಾಳಾಗಿರುವಂತಹ ರೋಗಿಗಳಿಗೆ ಕಸಿ ಮಾಡಲಾಗುತ್ತದೆ. ಇದು ಅಗತ್ಯವಿರುವಂತಹ ರೋಗಿಗಳ ಕುಟುಂಬದಲ್ಲಿ ಹೊಂದಾಣಿಕೆಯಾಗಬಲ್ಲ ದಾನಿಗಳು ಸಿಗುವುದು ಶೇ 30ರಷ್ಟು ಮಾತ್ರ. ಉಳಿದವರು ಸಂಬಂಧಿಗಳಲ್ಲದ ದಾನಿಗಳ ಮೇಲೆ ಅವಲಂಬಿತರಾಗಬೇಕಾಗುತ್ತದೆ’ ಎಂದು ರಕ್ತದ ಆಕರ ಕೋಶಗಳ ನೋಂದಣಿ ಸೇವಾ ಸಂಸ್ಥೆ ತಿಳಿಸಿದೆ.

ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ಯಾಟ್ರಿಕ್ ಪೌಲ್, ‘ದೇಶದಲ್ಲಿ ಕ್ಯಾನ್ಸರ್ ಪ್ರಕರಣಗಳು ಹೆಚ್ಚುತ್ತಿದ್ದು, ಬಹುತೇಕ ರೋಗಿಗಳಿಗೆ ರಕ್ತದ ಆಕರ ಕೋಶ ಕಸಿ ಮಾಡಲಾಗುತ್ತಿದೆ. ಆದರೆ, ದಾನಿಗಳ ಕೊರತೆಯಿಂದಾಗಿ ಹಲವು ಮಂದಿ ಕಸಿಗೆ ಎದುರು ನೋಡುತ್ತಿದ್ದಾರೆ. ಕ್ಯಾನ್ಸರ್‌ಗಳಿಗೆ ರಕ್ತದ ಆಕರಕೋಶ ಕಸಿ ಪರಿಹಾರವಾಗಿದೆ’ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಸ್ವಯಂಪ್ರೇರಿತ ರಕ್ತದಾನ ಶಿಬಿರ



ಯಲಹಂಕ: ರೋಟರಿ ಕ್ಲಬ್ ವಿದ್ಯಾರಣ್ಯಪುರ ಮತ್ತು ಕೆಬಿಜಿ ಸ್ವಯಂಸೇವಕರ ಸಂಘ ಹಾಗೂ ಸಂಜಯ್ ಗಾಂಧಿ ಆಸ್ಪತ್ರೆಯ ಸಹಯೋಗದೊಂದಿಗೆ ದೊಡ್ಡಬೊಮ್ಮಸಂದ್ರದ ಸೇಂಟ್ ಫಿಲೋಮಿನಾ ಶಾಲೆಯಲ್ಲಿ ಸ್ವಯಂಪ್ರೇರಿತ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿತ್ತು.

ಶಿಬಿರ ಉದ್ಘಾಟಿಸಿದ ಕಾಂಗ್ರೆಸ್ ಮುಖಂಡ ಆರ್.ಎಂ.ಶ್ರೀನಿವಾಸ್, ’ಕೊರೊನಾ ಸೋಂಕು ಹರಡಿರುವ ಈ ಸಂದರ್ಭದಲ್ಲಿ ರಕ್ತಭಂಡಾರಗಳಲ್ಲಿ ರಕ್ತದ ಕೊರತೆಯಿರುವುದರಿಂದ ಹಲವು ಕಾಯಿಲೆಗಳಿಂದ ಬಳಲುತ್ತಿರುವ ಮತ್ತು ಅಪಘಾತ ಸಂದರ್ಭಗಳಲ್ಲಿ ರೋಗಿಗಳಿಗೆ ತುರ್ತಾಗಿ ರಕ್ತ ಒದಗಿಸಲು ಸಾಧ್ಯವಾಗುತ್ತಿಲ್ಲ. ಜನರು ಮಾನವೀಯ ದೃಷ್ಟಿಯಿಂದ ರಕ್ತದಾನ ಮಾಡಲು ಮುಂದಾಗಬೇಕು‘ ಎಂದು ತಿಳಿಸಿದರು.

ವಿದ್ಯಾರಣ್ಯಪುರ ರೋಟರಿ ಕ್ಲಬ್ ಅಧ್ಯಕ್ಷ ಬಾಲಾಜಿ ನಾನಬಾಲ, ಪದಾಧಿಕಾರಿಗಳಾದ ಈಶ್ವರಿ ಎನ್., ನವನೀತ್ ಜೋಶಿ, ಮುಖಂಡರಾದ ಬಿ.ಎಸ್.ಗೋಪಾಲಕೃಷ್ಣ, ಸುರೇಶ್, ಕೆ.ರಾಮು, ಪಟೇಲ್ ರಮೇಶ್, ಜನಾರ್ದನ್ ಮತ್ತಿತರರು ಉಪಸ್ಥಿತರಿದ್ದರು. ಶಿಬಿರದಲ್ಲಿ 80 ಯುನಿಟ್ ರಕ್ತ ಸಂಗ್ರಹಿಸಲಾಯಿತು.



ಹನುಮಂತರಾವ್ ಹಾಗೂ ಗಾಯತ್ರಿ ಅವರು ಶಾಸಕ ರವಿಸುಬ್ರಹ್ಮಣ್ಯ ಅವರಿಗೆ ಚೆಕ್ ಹಸ್ತಾಂತರಿಸಿದರು

ತವರಿನ ಜನರ ಕಷ್ಟಕ್ಕೆ ಮಿಡಿದ ವಿಭಾ

ಬೆಂಗಳೂರು: ಅಮೆರಿಕದ ದಕ್ಷಿಣ ಕ್ಯಾಲಿಫೋರ್ನಿಯಾದ ಏಷ್ಯನ್-ಅಮೆರಿಕನ್ ಪ್ರೌಢಶಾಲೆಯಲ್ಲಿ ಓದುತ್ತಿರುವ ಬೆಂಗಳೂರಿನ ವಿಭಾ ಅನಿಲ್ ಅವರು ಕೋವಿಡ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ತವರೂರಿನ ಜನರಿಗೆ ಸಹಾಯಹಸ್ತ ಚಾಚಿದ್ದಾರೆ.

ಗೆಳತಿಯರಾದ ಕಲ್ಯಾ ಟುರಾಲಕಿ ಮತ್ತು ಕ್ಯಾಂಡೈಸ್ ಬಾಕ್ ಅವರ ಜೊತೆ ಸೇರಿ ವಿಭಾ ಒಟ್ಟು ₹1.80 ಲಕ್ಷ ದೇಣಿಗೆ ಸಂಗ್ರಹಿಸಿದ್ದಾರೆ.

ಇದನ್ನು ಗಿರಿನಗರದಲ್ಲಿ ವಾಸವಿರುವ ತಮ್ಮ ಅಜ್ಜ ಹನುಮಂತರಾವ್ ಹಾಗೂ ಅಜ್ಜಿ ಗಾಯತ್ರಿ ರಾವ್ ಅವರಿಗೆ ಕಳುಹಿಸಿರುವ ಅವರು ಆ ಮೊತ್ತವನ್ನು ಬಸವನಗುಡಿ ಶಾಸಕ ಎಲ್.ಎ.ರವಿಸುಬ್ರಹ್ಮಣ್ಯ ಅಧ್ಯಕ್ಷರಾಗಿರುವ ಸಂಕಲ್ಪ ಸೇವಾ ಟ್ರಸ್ಟ್‌ಗೆ ನೀಡುವಂತೆ ಸೂಚಿಸಿದ್ದಾರೆ. ಈ ಮೊತ್ತದಲ್ಲಿ ಪಲ್ಸ್ ಆಕ್ಸಿಮೀಟರ್ ಸೇರಿದಂತೆ ಕೋವಿಡ್ ಪೀಡಿತರಿಗೆ ಅಗತ್ಯವಿರುವ ವೈದ್ಯಕೀಯ ಸಲಕರಣೆಗಳನ್ನು ಖರೀದಿಸಿ ವಿತರಿಸುವಂತೆ ತಿಳಿಸಿದ್ದಾರೆ.

ವಿಭಾ ಅವರ ಕಾರ್ಯಕ್ಕೆ ರವಿಸುಬ್ರಹ್ಮಣ್ಯ ಸೇರಿದಂತೆ ಅನೇಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



ಮೊಹರಂ ಹಬ್ಬದ ಪ್ರಯುಕ್ತ ಮುಸ್ಲಿಮರು ನಗರದಲ್ಲಿ ಶುಕ್ರವಾರ ಪ್ರಾರ್ಥನೆ ಸಲ್ಲಿಸಿದರು – ಪ್ರಜಾವಾಣಿ ಚಿತ್ರ

‘ಭವಿಷ್ಯದಲ್ಲಿ ನೀರಿನ ಸಮಸ್ಯೆ ತೀವ್ರ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮಳೆಯ ಪ್ರಮಾಣದಲ್ಲಿ ಏರುಪೇರು
- ಕ್ಷೀಣಿಸಲಿದೆ ಕಾವೇರಿ ನದಿ ಜಲಾನಯನ ಪ್ರದೇಶದ ನೀರಿನ ಲಭ್ಯತೆ

ಬೆಂಗಳೂರು: ‘ಮುಂದಿನ ದಿನಗಳಲ್ಲಿ ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಲಿದೆ’ ಎಂದು ಐಎಸ್ಇಸಿಯ ಸೆಂಟರ್ ಆಫ್ ಎಕನಾಮಿಕ್ ಸ್ಟಡೀಸ್ ಆ್ಯಂಡ್ ಪಾಲಿಸಿಯ ಪ್ರಾಧ್ಯಾಪಕ ಕೃಷ್ಣರಾಜ್ ಎಚ್ಚರಿಸಿದರು.

ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆ (ಐಸೆಕ್) ‘ವರ್ಸನಿಂಗ್ ಕ್ಲೈಮೇಟ್ ಚೇಂಜ್: ವಾಟ್ ಶುಡ್ ಕರ್ನಾಟಕ ಆ್ಯಂಡ್ ಇಂಡಿಯಾ ಡೂ?’ ಎಂಬ ಸಂಶೋಧನಾ ವರದಿ ಸಿದ್ಧಪಡಿಸಿದ್ದು, ಈ ಕುರಿತು ಚರ್ಚಿಸುವ ಸಲುವಾಗಿ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ವೆಬಿನಾರ್‌ನಲ್ಲಿ ಅವರು ಮಾತನಾಡಿದರು.

‘ಮಳೆಯ ಪ್ರಮಾಣದಲ್ಲಿ ಏರುಪೇರು ಉಂಟಾಗುವುದರಿಂದ ಕಾವೇರಿ ನದಿ ಜಲಾನಯನ ಪ್ರದೇಶದಲ್ಲಿ ನೀರಿನ ಲಭ್ಯತೆ ಕ್ಷೀಣಿಸಲಿದೆ. ಹವಾಮಾನ ವೈಪರೀತ್ಯದಿಂದಾಗಿ ಭಾರತದ ಕೃಷಿ ವಲಯ ಮತ್ತು ಜಲಮೂಲಗಳ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಲಿದೆ. 2040ರ ವೇಳೆಗೆ ಜಾಗತಿಕ ತಾಪಮಾನ 1.5 ಡಿಗ್ರಿ ಸೆಲ್ಸಿಯಸ್‌ಗೆ ಏರಿಕೆ ಆಗಲಿದ್ದು, ಮಹಾ ದುರಂತವೊಂದಕ್ಕೆ ದಾರಿ ಮಾಡಿಕೊಟ್ಟಂತಾಗುತ್ತದೆ. ಇದರಿಂದ ದೇಶದ ಆರ್ಥಿಕತೆಗೂ ದೊಡ್ಡ ಪೆಟ್ಟು ಬೀಳಲಿದೆ’ ಎಂದರು.

ಐಎಸ್ಇಸಿಯ ಸೆಂಟರ್ ಫಾರ್ ಇಕಲಾಜಿಕಲ್ ಎಕನಾಮಿಕ್ಸ್ ಆ್ಯಂಡ್ ನ್ಯಾಚುರಲ್ ರೀಸೋರ್ಸಸ್‌ನ ಸಹಾಯಕ ಪ್ರಾಧ್ಯಾಪಕ ಡಾ.ಬಾಲಸುಬ್ರಹ್ಮಣ್ಯಂ ‘ಹವಾಮಾನ ವೈಪರೀತ್ಯ ನಿಯಂತ್ರಿಸಲು ತುರ್ತು ಕ್ರಮಗಳನ್ನು ಕೈಗೊಳ್ಳಬೇಕು. ಬದಲಾವಣೆಗೆ ಒಗ್ಗಿಕೊಳ್ಳುವ ಮನೋಭಾವವನ್ನೂ ಮೈಗೂಡಿಸಿಕೊಳ್ಳಬೇಕು. ಹಾಗಾದಾಗ ಮಾತ್ರ ಕರ್ನಾಟಕದ ಜನ ಮುಂದೆ ಎದುರಾಗಬಹುದಾದ ಅಪಾಯದಿಂದ ಪಾರಾಗಲು ಸಾಧ್ಯ’ ಎಂದು ಸಲಹೆ ನೀಡಿದರು.

ಈಗಾಗಲೇ ಭೂಮಿಯ ಉಷ್ಣಾಂಶ 1.2 ಡಿಗ್ರಿ ಸೆಲ್ಸಿಯಸ್ ಮೀರಿದೆ. ಮುಂದಿನ ಕೆಲ ವರ್ಷಗಳಲ್ಲಿ ಪರಿಸರಕ್ಕೆ ಇಂಗಾಲದ ಹೊರಸೂಸುವಿಕೆ ಪ್ರಮಾಣ ಸಂಪೂರ್ಣವಾಗಿ ತಗ್ಗಿಸುವ ಮೂಲಕ ಜಾಗತಿಕ ತಾಪಮಾನವು 2 ಡಿಗ್ರಿ ಸೆಲ್ಸಿಯಸ್ ಮೀರದಂತೆ ತಡೆಯಬೇಕು ಎಂದು ಇಂಟರ್ ಗವರ್ನ್‌ಮೆಂಟಲ್ ಪ್ಯಾನಲ್ ಆನ್ ಕ್ಲೈಮೇಟ್ ಚೇಂಜ್ (ಐಪಿಸಿಸಿ) ತನ್ನ ವರದಿಯಲ್ಲಿ ತಿಳಿಸಿದೆ. ಈ ಕುರಿತೂ ವೆಬಿನಾರ್‌ನಲ್ಲಿ ಚರ್ಚಿಸಲಾಯಿತು. ಐಎಸ್ಇಸಿಯ ಪ್ರಭಾರ ನಿರ್ದೇಶಕ ಡಾ.ರಾಜಶೇಖರ್, ಉತ್ತರ ಪ್ರದೇಶ ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಪ್ರೊ.ಕೆ.ವಿ.ರಾಜು ಇದ್ದರು.

‘ಸಣ್ಣ–ಮಧ್ಯಮ ರೈತರಿಂದ ಲಾಭದಾಯಕ ಕೃಷಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಣ್ಣ ಮತ್ತು ಮಧ್ಯಮ ರೈತರನ್ನು ಒಗ್ಗೂಡಿಸಿ ಕೃಷಿ ಕ್ಷೇತ್ರವನ್ನು ಲಾಭದಾಯಕ ಕ್ಷೇತ್ರವಾಗಿ ಮಾರ್ಪಡಿಸಲು ಕೇಂದ್ರ ಸರ್ಕಾರ ಶ್ರಮಿಸುತ್ತಿದೆ’ ಎಂದು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೇಳಿದ್ದಾರೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದೇಶದ ಶೇ 70ರಷ್ಟು ಜನ ಕೃಷಿಕರು. ಇವರಲ್ಲಿ ಶೇ 80ರಷ್ಟು ಕೃಷಿಕರು ಸಣ್ಣ, ಮಧ್ಯಮ ಹಿಡುವಳಿದಾರರು. ಇವರು ಲಾಭದಾಯಕವಲ್ಲ ಎಂದು ಕೃಷಿ ಮಾಡುತ್ತಿಲ್ಲ. ಉದ್ಯೋಗ ಅರಸಿ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಇವರನ್ನು ಒಗ್ಗೂಡಿಸಿ ಕೃಷಿಯನ್ನು ಲಾಭದಾಯಕಗೊಳಿಸುವುದು ಉದ್ದೇಶ’ ಎಂದು ಹೇಳಿದರು.

ಕಾಂಗ್ರೆಸ್ ಆಡಳಿತದಲ್ಲಿ ಅಕ್ಕಿ, ಗೋಧಿಗಾಗಿ ಬೇರೆ ದೇಶಗಳತ್ತ ನೋಡುತ್ತಿದ್ದ ದೇಶ ಈಗ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬಿ ಆಗಿದೆ. ಇದು ಪ್ರಧಾನಿಯವರ ದೂರದೃಷ್ಟಿಯ ಯೋಜನೆಗಳ ಫಲ. ಈ ಬಾರಿ 3.05 ಕೋಟಿ ಮೆಟ್ರಿಕ್ ಟನ್ ಆಹಾರ ಉತ್ಪಾದನೆ ಮತ್ತು 3.26 ಕೋಟಿ ಮೆಟ್ರಿಕ್ ಟನ್ ತೋಟಗಾರಿಕೆ ಬೆಳೆ ಉತ್ಪಾದನೆ ಆಗಿದೆ ಎಂದರು.

‘ಆಹಾರ ಪದಾರ್ಥ ರಫ್ತಿನಲ್ಲೂ ನಾವೀಗ 9 ನೇ ಸ್ಥಾನದಲ್ಲಿದ್ದೇವೆ. ಕಾಂಗ್ರೆಸ್ ಆಡಳಿತದಲ್ಲಿ ಕೃಷಿ ಮೂಲದ ಜಿಡಿಪಿ ಕೇವಲ ಶೇ 13 ರಿಂದ 14 ಇತ್ತು. ಬಿಜೆಪಿಯ ಆಡಳಿತ ಅವಧಿಯಲ್ಲಿ ಅದು ಶೇ 20.22 ಕ್ಕೆ ಏರಿದೆ’ ಎಂದರು.

‘ಕೇಂದ್ರದ ನೀತಿಯಿಂದಾಗಿ ನಿರುದ್ಯೋಗ ಹೆಚ್ಚಳ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರದ ಆರ್ಥಿಕ ನೀತಿಗಳಿಂದಾಗಿ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಹೆಚ್ಚುತ್ತಿದೆ. ಉದ್ಯೋಗ ಸೃಷ್ಟಿಸಿ ಜನರ ಬದುಕು ಹಸನಾಗಿಸಬೇಕಿದ್ದ ಸರ್ಕಾರ ಅವರನ್ನು ಕಷ್ಟದ ಕೂಪಕ್ಕೆ ದೂಡುತ್ತಿದೆ’ ಎಂದು ಗಾಂಧಿನಗರದ ಕಾಂಗ್ರೆಸ್ ಶಾಸಕ ದಿನೇಶ್ ಗುಂಡೂರಾವ್ ಆರೋಪಿಸಿದರು.

ಚನ್ನಮ್ಮನಕೆರೆ ಅಚ್ಚುಕಟ್ಟು ಪ್ರದೇಶದ ಆಟದ ಮೈದಾನದಲ್ಲಿ ಪಕ್ಷದ ವತಿಯಿಂದ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಆಟೊ ಚಾಲಕರಿಗೆ ಆಹಾರದ ಕಿಟ್ ವಿತರಿಸಿ ಮಾತನಾಡಿದರು.

‘ಮೋದಿ ಸರ್ಕಾರದ ವೈಫಲ್ಯಗಳಿಂದಾಗಿ ಆರ್ಥಿಕತೆ ಪಾತಾಳಕ್ಕೆ ಕುಸಿದಿದೆ. ಕೋವಿಡ್ ಬಳಿಕ ಜನಸಾಮಾನ್ಯರ ಬದುಕು ದುಸ್ತರವಾಗಿದೆ. ಕೋವಿಡ್ ನಿಯಂತ್ರಿಸುವ ಸಲುವಾಗಿ ಲಾಕ್‌ಡೌನ್ ಹೇರಿದ್ದರಿಂದ ಜನ ಇದ್ದ ಕೆಲಸವನ್ನೂ ಕಳೆದುಕೊಂಡಿದ್ದಾರೆ. ಹೀಗಾಗಿ ಅವರ ಜೀವನ ನಿರ್ವಹಣೆ ಕಷ್ಟವಾಗಿದೆ. ಹೀಗಿದ್ದರೂ ಸರ್ಕಾರ ಅವರ ನೆರವಿಗೆ ಧಾವಿಸಲಿಲ್ಲ. ಕೋವಿಡ್ ಎರಡನೇ ಅಲೆ ನಿಯಂತ್ರಿಸುವಲ್ಲಿ ಸರ್ಕಾರ ಸಂಪೂರ್ಣ ವಿಫಲವಾಯಿತು. ಒಳ್ಳೆಯ ದಿನಗಳು ಬರುತ್ತವೆ ಎಂದು ಹೇಳುತ್ತಲೇ ತೈಲ ಹಾಗೂ ಅಡುಗೆ ಅನಿಲ ದರ ಏರಿಕೆ ಮಾಡಲಾಗುತ್ತಿದೆ. ಆ ಮೂಲಕ ಗಾಯದ ಮೇಲೆ ಬರೆ ಎಳೆಯಲಾಗುತ್ತಿದೆ’ ಎಂದು ಅವರು ದೂರಿದರು.

ವಿಧಾನಪರಿಷತ್ ಸದಸ್ಯ ಯು.ಬಿ.ವೆಂಕಟೇಶ್, ‘ಕೋವಿಡ್‌ನಿಂದಾಗಿ ಜನ ಸಾಕಷ್ಟು ಕಷ್ಟ ಅನುಭವಿಸುತ್ತಿದ್ದಾರೆ. ಅವರಿಗೆ ನೆರವಾಗುವುದು ನನ್ನ ಧರ್ಮ. ಪಕ್ಷವು ಪುಣ್ಯದ ಕೆಲಸ ಮಾಡಲು ಅನುವು ಮಾಡಿಕೊಟ್ಟಿದೆ. ಬಸವನಗುಡಿ ಕ್ಷೇತ್ರದಲ್ಲಿ ನಾಲ್ಕು ತಿಂಗಳಿಂದ ಹಲವು ಮಾನವೀಯ ಕಾರ್ಯಗಳನ್ನು ಮಾಡಿಕೊಂಡು ಬಂದಿದ್ದೇವೆ. ಬಡವರು, ಕೂಲಿಕಾರ್ಮಿಕರಿಗೆ ನೆರವಿನ ಹಸ್ತ ಚಾಚಿದ್ದೇವೆ. ಬಿಜೆಪಿ ಸರ್ಕಾರ ಬಡವರಿಗೆ ನೆರವಾಗುವ ಬದಲು ಅಗತ್ಯ ವಸ್ತುಗಳ ಬೆಲೆ ಏರಿಸಿ ಅವರನ್ನು ಸಂಕಷ್ಟಕ್ಕೆ ದೂಡುತ್ತಿದೆ’ ಎಂದು ಹೇಳಿದರು.



ಶಾಸಕ ದಿನೇಶ್ ಗುಂಡೂರಾವ್ ಹಾಗೂ ಕಾಂಗ್ರೆಸ್ ಮುಖಂಡ ಕೆ.ಎಂ.ನಾಗರಾಜ್ ಅವರು ಆಟೊ ಚಾಲಕರೊಬ್ಬರಿಗೆ ಆಹಾರದ ಕಿಟ್ ವಿತರಿಸಿದರು. ವಿಧಾನಪರಿಷತ್ ಸದಸ್ಯ ಯು.ಬಿ.ವೆಂಕಟೇಶ್ ಮತ್ತು ಕಾತ್ಯಾಯಿನಿ ಇದ್ದರು

ಗುರುಲಿಂಗಸ್ವಾಮಿ ಸಿ.ಎಂ ಮಾಧ್ಯಮ ಸಂಯೋಜಕ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮಾಧ್ಯಮ ಸಂಯೋಜಕರಾಗಿ ಎಚ್.ಬಿ. ಗುರುಲಿಂಗಸ್ವಾಮಿ ಅವರನ್ನು ನೇಮಿಸಿ ಆದೇಶ ಹೊರಡಿಸಲಾಗಿದೆ.

ಇವರು ನಾಡಿನ ಹಲವು ಪತ್ರಿಕೆಗಳು ಮತ್ತು ಸುದ್ದಿವಾಹಿನಿಗಳಲ್ಲಿ ಪತ್ರಕರ್ತರಾಗಿ ಕಾರ್ಯನಿರ್ವಹಿಸಿದ್ದಾರೆ. ಬೊಮ್ಮಾಯಿ ಗೃಹ ಸಚಿವರಾಗಿದ್ದಾಗ ಅವರ ಮಾಧ್ಯಮ ವಿಭಾಗದ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು.

ಸಿದ್ದರಾಮಯ್ಯ ಇಂದು ಪ್ರಕೃತಿ ಚಿಕಿತ್ಸೆಗೆ ದಾಖಲು

ಬೆಂಗಳೂರು: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ನಗರದ ಜಿಂದಾಲ್ ಪ್ರಕೃತಿ ಚಿಕಿತ್ಸಾ ಕೇಂದ್ರಕ್ಕೆ ಶನಿವಾರ ದಾಖಲಾಗಲಿದ್ದಾರೆ. ಹತ್ತು ದಿನಗಳ ಕಾಲ ಅವರು ಅಲ್ಲಿ ಚಿಕಿತ್ಸೆ ಪಡೆಯಲಿದ್ದಾರೆ.

‘ಸಿದ್ದರಾಮಯ್ಯ ಅವರು, ಆಗಸ್ಟ್ 31ರ ಸಂಜೆ ಅಲ್ಲಿಂದ ವಾಪಸಾಗಲಿದ್ದಾರೆ’ ಎಂದು ಅವರ ಕಚೇರಿಯ ಪ್ರಕಟಣೆ ತಿಳಿಸಿದೆ.

ಹೈದರಾಬಾದ್ ರೇಸ್

ಮಿರಾಕಲ್ ಗೆಲ್ಲುವ ನಿರೀಕ್ಷೆ

ಡೆಕ್ಕನ್ ಫಿಲ್ಲೀಸ್ ಚಾಂಪಿಯನ್‌ಷಿಪ್ ಹೈದರಾಬಾದ್ ಮಾನ್ಸೂನ್ ಋತುವಿನ ಮೊದಲನೇ ಕ್ಲಾಸಿಕ್ ರೇಸ್ ಆಗಿದ್ದು, ಮಿರಾಕಲ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಶನಿವಾರ ಮಧ್ಯಾಹ್ನ 1.00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಮೈಂಡ್ ರೀಡರ್ 2, ಮ್ಯಾಕ್ಸ್ 1, ಕಾಲ್ ಆಫ್ ದಿ ಬ್ಲೂ 3
2ನೇ ರೇಸ್: ಗಾಲ್ವಾನ್ 7, ಥ್ಯಾಂಕ್ಸ್ 12, ಒನ್ ಮೋರ್ ಟೈಮ್ 3
3ನೇ ರೇಸ್: ಆಲ್ ಟೈಮ್ ಲೆಜೆಂಡ್ 1, ವಿಸ್ಕಿ ಮಾರ್ಟಿನಿ 6, ಸ್ಟಾರ್ ಡ್ಯಾನ್ಸರ್ 7
4ನೇ ರೇಸ್: ಫಾಲ್ಕನ್ ಎಡ್ಜ್ 3, ಪೀಕಿ ಬ್ಲೈಂಡರ್ಸ್ 1, ಫ್ರಾನ್ಸಿಸ್ ಬೇಕನ್ 7
5ನೇ ರೇಸ್: ಅಶ್ವ ಯಶೋಬಾಲಿ 5, ಬ್ರಿಟಿಷ್ ಎಂಪ್ರೆಸ್ 6, ಹ್ಯಾವಲಾಕ್ ಕ್ರ್ಯೂ 1
6ನೇ ರೇಸ್: ಅಪೆಂಜೆಲ್ 3, ಕ್ಯಾಸ್ಲ್‌ರಾಕ್ 1, ಬ್ಲಿಸ್‌ಫುಲ್ 5
7ನೇ ರೇಸ್: ಮಿರಾಕಲ್ 4, ಅಲಿಸಿಯಾ 1, ಸಿಂಟಿಲೇಟಿಂಗ್ ಲಾಸ್ 8
8ನೇ ರೇಸ್: ಲೈನ್‌ವಿಲರ್ 3, ಡನ್‌ಕಿರ್ಕ್ 4, ಸನ್ ಡ್ಯಾನ್ಸರ್ 10

ಉತ್ತಮ ಬೆಟ್: ಆಲ್ ಟೈಮ್ ಲೆಜೆಂಡ್

ಜಾಕ್‌ಪಾಟ್ 4,5,6,7,8	1ನೇ ಮಿನಿ ಜಾಕ್‌ಪಾಟ್ 2,3,4,5	2ನೇ ಮಿನಿ ಜಾಕ್‌ಪಾಟ್ 5,6,7,8
1ನೇ ಟ್ರಿಬಲ್ 1,2,3	2ನೇ ಟ್ರಿಬಲ್ 3,4,5	3ನೇ ಟ್ರಿಬಲ್ 6,7,8

‘ಎಫ್‌ಎಸ್‌ಎಲ್ ಮೇಲ್ದರ್ಜೆಗೇರಿಸಿ’

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದ ಎಲ್ಲಾ ವಿಧಿ ವಿಜ್ಞಾನ ಪ್ರಯೋಗಾಲಯಗಳನ್ನು (ಎಫ್‌ಎಸ್‌ಎಲ್) ಮೇಲ್ದರ್ಜೆಗೇರಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಿ ಅಗತ್ಯ ಉಪಕರಣಗಳನ್ನು ಒದಗಿಸಬೇಕು. ಪರೀಕ್ಷಾ ವರದಿ ನೀಡಲು ಕಾಲಮಿತಿ ನಿಗದಿ ಮಾಡಬೇಕು ಎಂದು ತಿಳಿಸಿದೆ.

ಎಫ್‌ಎಸ್‌ಎಲ್‌ನಿಂದ ಪರೀಕ್ಷಾ ವರದಿಗಳನ್ನು ಪಡೆಯುವುದು ನಾಲ್ಕು ವರ್ಷಗಳಷ್ಟು ವಿಳಂಬ ಆಗುತ್ತಿರುವುದನ್ನು ಗಮನಿಸಿ ಸ್ವಯಂ ಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿಕೊಂಡಿರುವ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಮತ್ತು ಸೂರಜ್ ಗೋವಿಂದರಾಜ್ ಅವರಿದ್ದ ವಿಭಾಗೀಯ ಪೀಠ, ವಿಚಾರಣೆ ನಡೆಸುತ್ತಿದೆ.

ಗೃಹ ಇಲಾಖೆ ಸಲ್ಲಿಸಿದ್ದ ವಿವರಣೆ ಪರಿಶೀಲಿಸಿದ ಪೀಠ, ‘ರಾಜ್ಯದ ಎಲ್ಲಾ ಪೊಲೀಸ್ ಠಾಣೆಗಳಿಗೆ ಸೀನ್ ಆಫ್ ಕ್ರೈಮ್ ಅಧಿಕಾರಿಗಳನ್ನು (ಎಸ್‌ಒಸಿಒ) ಆರು ತಿಂಗಳಲ್ಲಿ ನೇಮಿಸುವಂತೆ ರಾಜ್ಯ ಸರ್ಕಾರಕ್ಕೆ ಪೀಠ ನಿರ್ದೇಶನ ನೀಡಿತು. ಜಂಟಿ ನಿರ್ದೇಶಕರ ಮೂರು ಹುದ್ದೆಗಳು ಖಾಲಿ ಇವೆ. ಇವುಗಳಲ್ಲಿ ಒಂದು ಹುದ್ದೆಗೆ ಐಪಿಎಸ್ ಅಧಿಕಾರಿಯನ್ನು ನಿಯೋಜಿಸಬೇಕಿದ್ದು, ಅದನ್ನು ಒಂದು ತಿಂಗಳಲ್ಲಿ ಮಾಡಬೇಕು. ಉಳಿದ ಎರಡು ಹುದ್ದೆಗಳನ್ನು ನಾಲ್ಕು ತಿಂಗಳಲ್ಲಿ ಭರ್ತಿ ಮಾಡಬೇಕು’ ಎಂದು ತಿಳಿಸಿತು.

‘ಜಿಲ್ಲಾ ವೈಜ್ಞಾನಿಕ ಸಹಾಯಕ (ಡಿಎಸ್‌ಎ) ಘಟಕಗಳನ್ನು ಎಲ್ಲಾ ಜಿಲ್ಲೆಗಳಲ್ಲೂ ತೆರೆಯಬೇಕು. ಹಿರಿಯ ವೈಜ್ಞಾನಿಕ ಅಧಿಕಾರಿ, ಇಬ್ಬರು ವೈಜ್ಞಾನಿಕ ಅಧಿಕಾರಿ ಮತ್ತು ಒಬ್ಬ ಪ್ರಯೋಗಾಲಯ ಸಹಾಯಕರನ್ನು ಒಳಗೊಂಡ ಸಂಚಾರಿ ವಿಧಿ ವಿಜ್ಞಾನ ಪ್ರಯೋಗಾಲಯಗಳನ್ನೂ ತೆರೆಯಬೇಕು. ಐದು ಉಪ ನಿರ್ದೇಶಕರ ಹುದ್ದೆಗಳು, ಆರು ಸಹಾಯಕ ನಿರ್ದೇಶಕರ ಹುದ್ದೆ, 20 ಹಿರಿಯ ವೈಜ್ಞಾನಿಕ ಅಧಿಕಾರಿ ಹುದ್ದೆಗಳು ಖಾಲಿ ಇದ್ದು, ಅವುಗಳನ್ನು ಆರು ತಿಂಗಳಲ್ಲಿ ಭರ್ತಿ ಮಾಡಬೇಕು’ ಎಂದು ಪೀಠ ನಿರ್ದೇಶನ ನೀಡಿತು.

‘ಡಿಜಿಟಲ್ ವಿಧಿ ವಿಜ್ಞಾನ, ವನ್ಯಜೀವಿ ವಿಧಿ ವಿಜ್ಞಾನ ಒಳಗೊಂಡ ಆಧುನಿಕ ಪ್ರಯೋಗಾಲಯ ತೆರೆಯಲು 9 ತಿಂಗಳಲ್ಲಿ ಕ್ರಮ ಕೈಗೊಳ್ಳಬೇಕು. ಈ ಸಂಬಂಧ ಅನುಸರಣಾ ವರದಿಯನ್ನು ಸರ್ಕಾರ ಸಲ್ಲಿಸಬೇಕು’ ಎಂದು ತಿಳಿಸಿದ ಪೀಠ, ವಿಚಾರಣೆಯನ್ನು ಅಕ್ಟೋಬರ್ 8ಕ್ಕೆ ಮುಂದೂಡಿತು.

ಅಫ್ಗಾನಿಸ್ತಾನ: ಭಾರತದ ನಿಲುವು ಸ್ಪಷ್ಟಪಡಿಸಿ– ಖಾದರ್

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ‘ಅಫ್ಗಾನಿಸ್ತಾನದ ಜೊತೆಗೆ ಭಾರತ ಎರಡು ದಶಕಗಳಿಂದ ಸ್ನೇಹ ಸಂಬಂಧ ಹೊಂದಿತ್ತು. ಆದರೆ, ಈಗ ಆ ದೇಶ ನಮ್ಮ ಶತ್ರು ರಾಷ್ಟ್ರಗಳಾದ ಪಾಕಿಸ್ತಾನ ಹಾಗೂ ಚೀನಾ ಜೊತೆಗೆ ಬೆಸೆದುಕೊಳ್ಳುತ್ತಿದೆ. ಈ ಹಿನ್ನೆಲೆಯಲ್ಲಿ ಆ ದೇಶದ ಕುರಿತು ಭಾರತದ ನಿಲುವನ್ನು ಪ್ರಧಾನಿ ಸ್ಪಷ್ಟಪಡಿಸಬೇಕು’ ಎಂದು ಶಾಸಕ ಯು.ಟಿ. ಖಾದರ್ ಆಗ್ರಹಿಸಿದರು.

‘ಭಾರತವೂ ಅಲ್ಲಿ ಸಾಕಷ್ಟು ಹೂಡಿಕೆ ಮಾಡಿದೆ. ಬದಲಾದ ವ್ಯವಸ್ಥೆಯಲ್ಲಿ ಕೇಂದ್ರದ ಮುಂದಿನ ನಡೆ ಏನಿರಬೇಕು ಎಂಬ ಬಗ್ಗೆ ಕೂಲಂಕಷವಾಗಿ ಚರ್ಚೆ ಮಾಡಿ ನಿರ್ಧಾರ ಕೈಗೊಳ್ಳಬೇಕು’ ಎಂದೂ ಅವರು ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

‘ಕುಟುಂಬವು ಆರ್ಥಿಕವಾಗಿ ತೀವ್ರ ಸಂಕಷ್ಟಕ್ಕೆ ಸಿಲುಕಿದಾಗ ಎಷ್ಟೋ ತಾಯಂದಿರು ತಮ್ಮ ತಾಳಿ ಮಾರಿ ಜೀವನ ನಡೆಸಿದ ಸ್ಥಿತಿಯನ್ನು ನಾವು ನೋಡಿದ್ದೇವೆ. ಈಗ ಭಾರತವೂ ಇಂಥದ್ದೇ ಪರಿಸ್ಥಿತಿ ಅನುಭವಿಸುತ್ತಿದೆ. ಸ್ಪಷ್ಟವಾದ ಆರ್ಥಿಕ ನೀತಿ ಇಲ್ಲದ ಕಾರಣ ಸಣ್ಣಸಣ್ಣ ರಾಷ್ಟ್ರಗಳ ಮುಂದೆಯೂ ನಾವು ಕೈಚಾಚುವಂತಾಗಿದೆ’ ಎಂದೂ ದೂರಿದರು.

ಸಾರ್ವಜನಿಕರ ಅಹವಾಲು ಆಲಿಸಿದ ಕಂದಾಯ ಸಚಿವ ಆರ್. ಅಶೋಕ

ಭೂಮಾಪಕರ ಹುದ್ದೆಗೆ ಮತ್ತೆ ಅರ್ಜಿ ಆಹ್ವಾನ

ಬೆಂಗಳೂರು: ಪೋಡಿ ಮಾಡಿಕೊಡಲು ವರ್ಷದಿಂದ ಸತಾಯಿಸುತ್ತಿದ್ದಾರೆ, ಗ್ರಾಮ ಲೆಕ್ಕಾಧಿಕಾರಿ ಹುದ್ದೆಗೆ ಅರ್ಜಿ ಸಲ್ಲಿಸಿ ವರ್ಷವಾದರೂ ನೇಮಕಾತಿ ಪ್ರಕ್ರಿಯೆ ನಡೆಯುತ್ತಿಲ್ಲ, ಸ್ಮಶಾನ–ಗೋಮಾಳದ ಜಾಗವನ್ನು ಪ್ರಭಾವಿಗಳು ಒತ್ತುವರಿ ಮಾಡಿಕೊಂಡಿದ್ದಾರೆ, ಆಸ್ತಿ ನೋಂದಣಿ ಕಚೇರಿಗಳಲ್ಲಿ ಸರ್ವರ್ ಡೌನ್ ಸಮಸ್ಯೆ ತೀವ್ರವಾಗಿದೆ....

ರಾಜ್ಯದ ನಾನಾ ಭಾಗಗಳಲ್ಲಿನ ನಾಗರಿಕರು ಕಂದಾಯ ಸಚಿವ ಆರ್. ಅಶೋಕ ಅವರಿಗೆ ದೂರವಾಣಿ ಕರೆಗಳ ಮೂಲಕ ಸಲ್ಲಿಸಿದ ಅಹವಾಲುಗಳ ಕೆಲವು ಉದಾಹರಣೆಗಳಿವು. ‘ಪ್ರಜಾವಾಣಿ’ ಫೋನ್ ಇನ್ ಕಾರ್ಯಕ್ರಮದಲ್ಲಿ ಸಾರ್ವಜನಿಕರ ಕುಂದು–ಕೊರತೆ ಆಲಿಸಿದ ಸಚಿವರು, ಸೂಕ್ತ ಕ್ರಮ ಕೈಗೊಂಡು ಸಮಸ್ಯೆ ಬಗೆಹರಿಸುವ ಭರವಸೆ ನೀಡಿದರು.


ಆರ್. ಅಶೋಕ

ಪ್ರಜಾವಾಣಿ ಫೋನ್–ಇನ್

● **ಗ್ರಾಮ ಲೆಕ್ಕಾಧಿಕಾರಿ ಹುದ್ದೆಗೆ ಅರ್ಜಿ ಸಲ್ಲಿಸಿ ಒಂದೂವರೆ ವರ್ಷವೇ ಆಯಿತು. ಈವರೆಗೆ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಿಲ್ಲ. ಕೆಲಸವಿಲ್ಲದೆ ತೊಂದರೆಯಾಗಿದೆ, ಬೇಗ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸಿ.**

ಮಧು ಜಿ.ಎನ್. ದಾವಣಗೆರೆ

ಅಶೋಕ: ಮೊದಲು ಸರ್ಕಾರದಿಂದಲೇ ಅಂದರೆ, ಕಂದಾಯ ಇಲಾಖೆಯಿಂದಲೇ ಗ್ರಾಮ ಲೆಕ್ಕಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲಾಗುತ್ತಿತ್ತು. ಈಗ ಆಯಾ ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. ಕೋವಿಡ್ ಕಾರಣದಿಂದ ಪ್ರಕ್ರಿಯೆ ಸ್ಥಗಿತಗೊಂಡಿತ್ತು. ಶೀಘ್ರದಲ್ಲಿಯೇ ನೇಮಕಾತಿ ಪ್ರಕ್ರಿಯೆ ಆರಂಭಿಸಲಾಗುವುದು.

● **ಭೂಮಾಪಕರ ಪರೀಕ್ಷೆ ಬರೆದಿದ್ದೆವು. ಹಲವು ತಿಂಗಳುಗಳಾದರೂ ಈ ಬಗ್ಗೆ ಯಾವುದೇ ಮಾಹಿತಿ ಇಲ್ಲ**

ಪ್ರದೀಪ್, ಗದಗ

ಅಶೋಕ: ಈಗಾಗಲೇ 2,500 ಭೂಮಾಪಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಸರ್ವೆಯರ್‌ಗಳ ಅಗತ್ಯ ಇನ್ನೂ ಇದೆ. ಬಾಕಿ ಇರುವ ಹುದ್ದೆಗಳ ವಿವರ ತರಿಸಿಕೊಂಡು ಮತ್ತೆ ಅರ್ಜಿ ಆಹ್ವಾನಿಸಲಾಗುವುದು. ಖಾಲಿ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು.

● **ನಮ್ಮ ತಾಲ್ಲೂಕಿನ ಮೂರು ಊರುಗಳ ದಾಖಲೆಯೇ ಗ್ರಾಮ ಪಂಚಾಯಿತಿಯಲ್ಲಿ ಇಲ್ಲ ಎನ್ನುತ್ತಿದ್ದಾರೆ. ಪಹಣಿಯೇ ಸಿಗುತ್ತಿಲ್ಲ. ಬ್ಯಾಂಕ್‌ಗಳಲ್ಲಿ ಸಾಲವೂ ದೊರೆಯುತ್ತಿಲ್ಲ.**

ಹನುಮಂತ, ಯಾದಗಿರಿ

ಅಶೋಕ: ಇಡೀ ಊರಿನ ದಾಖಲೆಯೇ ಇಲ್ಲ ಎಂದರೆ ತಾಂತ್ರಿಕವಾಗಿ ಏನಾದರೂ ಸಮಸ್ಯೆ ಇರಬಹುದು. ನಿಮ್ಮ ಕ್ಷೇತ್ರದ ಶಾಸಕರು ಮತ್ತು ಜಿಲ್ಲಾಧಿಕಾರಿಯೊಂದಿಗೆ ಚರ್ಚಿಸಿ ಸಮಸ್ಯೆ ಪರಿಹರಿಸಲಾಗುವುದು

● **ಇ-ಸ್ವತ್ತು ನೀಡಲು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಅಲೆದಾಡಿಸುತ್ತಿದ್ದಾರೆ. ಆಸ್ತಿಯ ಮೇಲೆ ಸಾಲ ತೆಗೆದುಕೊಳ್ಳಲು ಸಮಸ್ಯೆಯಾಗುತ್ತಿದೆ.**

ಸಿದ್ದೇಶ, ಹರಿಹರ

ಅಶೋಕ: ಇ-ಸ್ವತ್ತು ವಿಚಾರ ಗ್ರಾಮೀಣಾಭಿವೃದ್ಧಿ ಇಲಾಖೆಯ ವ್ಯಾಪ್ತಿಗೆ ಬರುತ್ತದೆ. ಸಚಿವ ಕೆ.ಎಸ್. ಈಶ್ವರಪ್ಪ ಜತೆ ಮಾತನಾಡಿ, ಪಿಡಿಒಗಳಿಗೂ ಸೂಚನೆ ನೀಡಲಾಗುವುದು

● **ವಸತಿ ಮತ್ತಿತರ ಯೋಜನೆಗೆ ನಗರಾಭಿವೃದ್ಧಿ ಇಲಾಖೆಯವರು ಭೂಮಿ ಸ್ವಾಧೀನದ ಬಗ್ಗೆ ಅಧಿಸೂಚನೆ ಹೊರಡಿಸುತ್ತಾರೆ. 20-30 ವರ್ಷಗಳಾದರೂ ಅದನ್ನು ಇಲಾಖೆಯ ವಶಕ್ಕೆ ತೆಗೆದುಕೊಳ್ಳುವುದಿಲ್ಲ. ಇಂತಹ ಯೋಜನೆಗಳಿಗೆ ಭೂಮಿ ಕೊಟ್ಟವರು ಅತಂತ್ರ ಸ್ಥಿತಿ ಎದುರಿಸುವಂತಾಗಿದೆ**

ಯದುಕುಮಾರ್, ಮೈಸೂರು

ಅಶೋಕ: ಈ ಸಮಸ್ಯೆ ಮೊದಲಿನಿಂದಲೂ ಇದೆ. ಈ ಬಗ್ಗೆ ಹಲವು ದೂರುಗಳು ಬಂದಿವೆ. ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅವರೊಂದಿಗೆ ಈ ಕುರಿತು ಮಾತನಾಡುತ್ತೇನೆ.

ಸ್ಮಶಾನ ಒತ್ತುವರಿ ಮಾಡಿದರೆ ಕಠಿಣ ಕ್ರಮ

● **ಚಿಂತಾಮಣಿ ತಾಲ್ಲೂಕಿನ ಕೈವಾರ ಪಂಚಾಯಿತಿಯ ಬನಹಳ್ಳಿ ಗ್ರಾಮದಲ್ಲಿ ಸ್ಮಶಾನ ಭೂಮಿಯನ್ನು ಕೆಲವು ಪ್ರಭಾವಿಗಳು ಒತ್ತುವರಿ ಮಾಡಿಕೊಂಡಿದ್ದಾರೆ.**

ಆನಂದ ಕೈವಾರ, ಚಿಂತಾಮಣಿ

ಅಶೋಕ: ಗ್ರಾಮಕ್ಕೊಂದು ಸ್ಮಶಾನ ಇರಲೇಬೇಕು. ಸ್ಮಶಾನ, ಗೋಮಾಳದಂತಹ ಜಾಗವನ್ನು ಒತ್ತುವರಿ ಮಾಡಿಕೊಂಡಿರುವವರು ಎಂಥ ಪ್ರಭಾವಿಗಳಾದರೂ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು. ನೇರವಾಗಿ ನನಗೇ ದೂರು ನೀಡಬಹುದು.

ಮಾಜಿ ಯೋಧರಿಗೆ ನಿವೇಶನ

● **ಮಾಜಿ ಸೈನಿಕರಿಗೆ ಸರ್ಕಾರದಿಂದ ಜಮೀನು ಕೊಡಬೇಕು ಎಂದು ಆದೇಶ ಇದೆ. ಆದರೆ, ಜಿಲ್ಲಾಧಿಕಾರಿಗಳು ವಿಳಂಬ ಮಾಡುತ್ತಿದ್ದಾರೆ.**

ವಿಜಯಕುಮಾರ್, ವಿಜಯಪುರ

ಅಶೋಕ: ಮಾಜಿ ಯೋಧರಿಗೆ ಜಮೀನು ಕೊಡುವ ಬಗ್ಗೆ ಆದೇಶವಿದೆ. ಆದರೆ, ಕೆಲವು ಪ್ರಕರಣಗಳು ನ್ಯಾಯಾಲಯದಲ್ಲಿವೆ. ಅವು ಇತ್ಯರ್ಥವಾಗಬೇಕು. ಅಲ್ಲದೆ, ಅರ್ಜಿ ಹಾಕಿದವರಿಗೆಲ್ಲ ಮೊದಲು ಜಮೀನು ಕೊಡಲಾಗುತ್ತಿತ್ತು. ಈಗ ಸರ್ಕಾರಿ ಜಮೀನು ಕೂಡ ಹೆಚ್ಚು ಲಭ್ಯವಿಲ್ಲ. ಜಮೀನು ಕೊಡಲು ಆಗದಿದ್ದರೆ ನಿವೇಶನವಾದರೂ ನೀಡಬೇಕು ಎಂಬ ಚಿಂತನೆ ಇದೆ. ಯುದ್ಧದಲ್ಲಿ ಮರಣ ಹೊಂದಿರುವ ಸೈನಿಕರ ಕುಟುಂಬದವರಿಗೆ, ಗಾಯಗೊಂಡ ಯೋಧರಿಗೆ ಆದ್ಯತೆ ಮೇರೆಗೆ ನಿವೇಶನ ನೀಡಲಾಗುವುದು.

ಅಂಕಿ–ಅಂಶ

₹12,655 ಕೋಟಿ 2020–21ನೇ ಸಾಲಿನಲ್ಲಿದ್ದ ರಾಜಸ್ವ ಸಂಗ್ರಹ ಗುರಿ

₹10,705 ಕೋಟಿ 2020–21ರಲ್ಲಿ ಸಂಗ್ರಹವಾದ ರಾಜಸ್ವ

₹12,655 ಕೋಟಿ 2021–22ನೇ ಸಾಲಿನ ರಾಜಸ್ವ ಸಂಗ್ರಹ ಗುರಿ

₹3,946 ಕೋಟಿ ಈವರೆಗೆ ಸಂಗ್ರಹಿಸಲಾಗಿರುವ ರಾಜಸ್ವ

ಪ್ರಸ್ತಾವ ಸಲ್ಲಿಸಿದರೆ ಸ್ವಂತ ಕಟ್ಟಡ

‘ರಾಜ್ಯದಲ್ಲಿ ಉಪ ನೋಂದಣಾಧಿಕಾರಿ ಕಚೇರಿಗಳು ಬಾಡಿಗೆ ಕಟ್ಟಡದಲ್ಲಿಯೇ ಹೆಚ್ಚಿವೆ. ಇವು ಇಕ್ಕಟ್ಟಾಗಿದ್ದು ಜನರಿಗೂ ತೊಂದರೆಯಾಗುತ್ತಿರುವುದು ಗಮನಕ್ಕೆ ಬಂದಿದೆ. ಸಂಬಂಧಪಟ್ಟ ಉಪನೋಂದಣಾಧಿಕಾರಿಗಳು ಈ ಬಗ್ಗೆ ಪ್ರಸ್ತಾವ ಸಲ್ಲಿಸಿದರೆ, ಸ್ವಂತ ಕಟ್ಟಡ ಒದಗಿಸುವ ವ್ಯವಸ್ಥೆ ಮಾಡಲಾಗುವುದು’ ಎಂದು ಸಚಿವರು ಹೇಳಿದರು.

ಬಗರ್‌ಹುಕುಂ: ಅರ್ಜಿ ಸಲ್ಲಿಕೆಗೆ ಅವಕಾಶ

● **ಸುಮಾರು ವರ್ಷಗಳಿಂದ ಜಮೀನು ಉಳುಮೆ ಮಾಡುತ್ತಿದ್ದೇವೆ. ಪೋಡಿ ಆಗಿಲ್ಲ, ಸಮೀಕ್ಷೆಯೂ ಆಗಿಲ್ಲ. ಪೋಡಿಗೆ ಅರ್ಜಿ ಸಲ್ಲಿಸಿ ಎರಡು ವರ್ಷವಾದರೂ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿಲ್ಲ. ಸರ್ಕಾರದಿಂದಲೇ ಜಮೀನು ಮಂಜೂರು ಆಗಿದ್ದರೂ ಪಹಣಿ ಕೊಡುತ್ತಿಲ್ಲ.**

ಶಿವರಾಜ್ ಕುಣಿಗಲ್, ಸಿದ್ದಿಂಗು ಮಳವಳ್ಳಿ, ಧನಂಜಯ ಶಿರಾ, ಲಿಂಗಪ್ಪ ಅರಸೀಕೆರೆ

ಅಶೋಕ: ಸರ್ಕಾರಿ ಜಮೀನಿನಲ್ಲಿ 15–20 ವರ್ಷಗಳಿಂದ ಉಳುಮೆ ಮಾಡುತ್ತಿರುವವರಿಗೆ ಆಯಾ ಜಮೀನನ್ನು ಅವರಿಗೇ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗಿದೆ. ಅರ್ಜಿ ಸಲ್ಲಿಸಲು ಅರ್ಹ ರೈತರಿಗೆ ಒಂದು ವರ್ಷದವರೆಗೆ ಕಾಲಾವಕಾಶವನ್ನೂ ನೀಡಲಾಗಿದೆ.

ಆದರೆ, 100 ಎಕರೆ ಇದ್ದರೆ, 150 ಎಕರೆಯವರೆಗೆ ಮಂಜೂರು ಮಾಡಿರುವುದರಿಂದ ರಾಜ್ಯದೆಲ್ಲೆಡೆ ಇಂತಹ ಸಮಸ್ಯೆ ಇದೆ. ಜನರ ಬಳಿ ದಾಖಲೆ ಇರುತ್ತದೆ, ಆದರೆ ಸರ್ಕಾರದ ಬಳಿ ಇಂತಹ ದಾಖಲೆಗಳೇ ಇರುವುದಿಲ್ಲ. 2 ಲಕ್ಷದಿಂದ 3 ಲಕ್ಷ ಜನರಿಗೆ ಇಂತಹ ಸಮಸ್ಯೆ ಆಗಿದೆ. ಈ ಜಮೀನುಗಳ ಪೋಡಿಗೆ ಮೊದಲು ಅರ್ಜಿ ಸಲ್ಲಿಸಿದವರಿಗೆ ಮೊದಲ ಆದ್ಯತೆ ನೀಡುವ ಚಿಂತನೆ ಇದೆ. ಸರ್ಕಾರದಿಂದ ಭೂಮಿ ಮಂಜೂರು ಆಗಿದ್ದರೂ ಪಹಣಿ ಆಗಿಲ್ಲ ಎಂದರೆ, ಸಂಬಂಧಪಟ್ಟ ಕ್ಷೇತ್ರದ ಶಾಸಕರನ್ನು ಸಂಪರ್ಕಿಸಿ. ಅವರ ನೇತೃತ್ವದಲ್ಲಿಯೇ ಸಮಿತಿ ರಚಿಸಲಾಗಿದೆ. ಅಲ್ಲಿಯೇ ಸಮಸ್ಯೆ ಇತ್ಯರ್ಥವಾಗುತ್ತದೆ.

ಹಕ್ಕಿ–ಪಿಕ್ಕಿಗೆ ಹಾಡಿಗಳಿಗೆ ‘ಗ್ರಾಮ ಸೌಲಭ್ಯ’

ಹಕ್ಕಿ–ಪಿಕ್ಕಿ ಮತ್ತು ಕುರುಬ ಸಮುದಾಯದವರು ವಾಸವಿರುವ ಹಾಡಿಗಳನ್ನು ಗ್ರಾಮಗಳು ಎಂದು ಘೋಷಿಸುವ ಪ್ರಕ್ರಿಯೆ ನಡೆಯುತ್ತಿದೆ. ಇವುಗಳನ್ನು ಗ್ರಾಮಗಳಾಗಿ ಪರಿವರ್ತಿಸಲು ಆದೇಶವನ್ನೂ ಮಾಡಲಾಗಿದೆ. ಹಾಡಿಗಳಿಗೆ ಗ್ರಾಮದ ಸ್ವರೂಪ ನೀಡಿದರೆ, ಎಲ್ಲ ಮೂಲಸೌಲಭ್ಯ ದೊರೆಯಲಿದೆ ಎಂದು ಅಶೋಕ ಹೇಳಿದರು.

ಸುದ್ದಿ 2 ನಿಮಿಷ

‘ನದಿ ಜೋಡಣೆ ಯೋಜನೆಗೆ ರಾಜ್ಯಗಳು ಮುಂದೆ ಬರಲಿ’

ಹೊಸಪೇಟೆ (ವಿಜಯನಗರ): ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು ಅವರು ಶುಕ್ರವಾರ ಸಂಜೆ ಇಲ್ಲಿನ ತುಂಗಭದ್ರಾ ಜಲಾಶಯಕ್ಕೆ ಭೇಟಿ ನೀಡಿದರು.

ಈ ಸಂದರ್ಭದಲ್ಲಿ ಅವರು, ‘ನದಿಗಳ ಜೋಡಣೆ ಯೋಜನೆ ದೇಶದ ಜನರ ಕನಸು, ಇದು ಈಡೇರಬೇಕು. ಇದಕ್ಕೆ ರಾಜ್ಯಗಳು ಮುಂದೆ ಬರಬೇಕು. ನದಿಗಳ ನೀರು ಸದ್ಬಳಕೆಯಾದರೆ ರೈತರ ಬಾಳು ಹಸನಾಗುತ್ತದೆ. ದೇಶ ಅಭಿವೃದ್ಧಿ ಆಗುತ್ತದೆ’ ಎಂದರು.

‘ಜಲಾಶಯಗಳು ಅಕ್ಷಯ ಪಾತ್ರೆಯಿದ್ದಂತೆ. ಸಾಧ್ಯವಿರುವ ಎಲ್ಲ ಕಡೆಗಳಲ್ಲಿ ನೀರಿನ ಸಂಗ್ರಹಕ್ಕೆ ಒತ್ತು ಕೊಡಬೇಕು. ಇದರಿಂದ ಅಂತರ್ಜಲದ ಪ್ರಮಾಣ ಹೆಚ್ಚಾಗುತ್ತದೆ’ ಎಂದು ಹೇಳಿದರು.



‘ಈ ಜಲಾಶಯ ನಾಲ್ಕು ವರ್ಷದಿಂದ ಸತತವಾಗಿ ತುಂಬುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇದು ಸಂತಸದ ವಿಷಯ. ಜಲಾಶಯ ತುಂಬಿ ಕರ್ನಾಟಕ, ತೆಲಂಗಾಣದ ಹಿಂದುಳಿದ ಪ್ರದೇಶಗಳಿಗೆ ಒಳ್ಳೆಯದಾಗಲಿ’ ಎಂದು ಹೇಳಿದರು.

ಶನಿವಾರ ಅವರು ಹಂಪಿಗೆ ಭೇಟಿ ನೀಡುವ ಕಾರ್ಯಕ್ರಮವಿದೆ.

‘ಅಧಿಕಾರಿಗಳು ಸಾಮಾಜಿಕ ಮಾಧ್ಯಮದಿಂದ ದೂರವಿರಲಿ’

ಮೈಸೂರು: ‘ಸರ್ಕಾರದ ಅಧಿಕೃತ ಖಾತೆ ಹೊರತುಪಡಿಸಿ ಸಾಮಾಜಿಕ ಮಾಧ್ಯಮಗಳನ್ನು ಬಳಸದಂತೆ ಐಎಎಸ್, ಐಪಿಎಸ್ ಅಧಿಕಾರಿಗಳನ್ನು ನಿರ್ಬಂಧಿಸಬೇಕು’ ಎಂದು ಸಂಸದ ಪ್ರತಾಪಸಿಂಹ ಆಗ್ರಹಿಸಿದರು.

ಇಲ್ಲಿ ಶುಕ್ರವಾರ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್‌ನ ಕಚೇರಿ ಉದ್ಘಾಟಿಸಿ ಮಾತನಾಡಿದರು.

‘ಹಲವು ಅಧಿಕಾರಿಗಳು ಸಾಮಾಜಿಕ ಜಾಲತಾಣಗಳ ತಮ್ಮ ಖಾತೆಯಲ್ಲಿ ಚಿಕ್ಕ ವಿಷಯಗಳನ್ನೇ ದೊಡ್ಡದಾಗಿ ಬರೆದುಕೊಂಡು ನಕಲಿ ಫಾಲೊವರ್‌ಗಳನ್ನು ಸೃಷ್ಟಿಸಿಕೊಳ್ಳುತ್ತಾರೆ. ಸಿಂಗಂ ಎಂದು ಪ್ರಚಾರ ಪಡೆದು ವೈಯಕ್ತಿಕ ಲಾಭ ಮಾಡಿಕೊಳ್ಳುತ್ತಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದರು.

‘ಅಧಿಕಾರಿಗಳು ಸಾಮಾಜಿಕ ಮಾಧ್ಯಮಗಳ ಸರ್ಕಾರದ ಅಧಿಕೃತ ಖಾತೆಯಲ್ಲಿ ಮಾತ್ರ ವಿವರಗಳನ್ನು ದಾಖಲಿಸಬೇಕು. ವೈಯಕ್ತಿಕ ಖಾತೆಗಳ ಬಳಕೆ ಮೇಲೆ ನಿರ್ಬಂಧ ವಿಧಿಸಬೇಕು’ ಎಂದು ಒತ್ತಾಯಿಸಿದರು.

ಮಂಗಳಾ ವಿದ್ಯಾ ಸಂಸ್ಥೆ: ಪ್ರವೇಶ ಪ್ರಾರಂಭ

ಮಂಗಳೂರು: ಇಲ್ಲಿನ ನೀರುಮಾರ್ಗದಲ್ಲಿರುವ ‘ಮಂಗಳಾ ಕಾಲೇಜ್ ಆಫ್ ಪ್ಯಾರಾ ಮೆಡಿಕಲ್ ಸೈನ್ಸಸ್’ನಲ್ಲಿ ಪ್ರವೇಶಾತಿ ಪ್ರಕ್ರಿಯೆ ಆರಂಭಿಸಲಾಗಿದೆ.

ವೈದ್ಯಕೀಯ ಕ್ಷೇತ್ರಗಳಲ್ಲಿ ಬೇಡಿಕೆಯಿರುವ ನಾಲ್ಕು ವರ್ಷಗಳ ಅಲೈಡ್ ಹೆಲ್ತ್ ಸೈನ್ಸ್ ಪದವಿ ಕೋರ್ಸ್‌ಗಳಾದ ಅನಸ್ಥೆಶಿಯಾ ಟೆಕ್ನಾಲಜಿ ಮತ್ತು ಆಪರೇಶನ್ ಥಿಯೇಟರ್ ಟೆಕ್ನಾಲಜಿ, ಲ್ಯಾಬ್ ಟೆಕ್ನಾಲಜಿ, ಇಮೇಜಿಂಗ್ ಟೆಕ್ನಾಲಜಿ, ಒಪ್ಟೋಮೆಟ್ರಿ, ಡಯಾಲಿಸಿಸ್ ಟೆಕ್ನಾಲಜಿ ವಿಭಾಗಗಳಲ್ಲಿ ಪ್ರವೇಶಾತಿ ಪ್ರಾರಂಭಿಸಲಾಗಿದೆ.

ಬಿಎಸ್‌ಸಿ ಪದವಿ ಕೋರ್ಸ್, ಸ್ನಾತಕೋತ್ತರ ನರ್ಸಿಂಗ್ ಮತ್ತು ಜಿಎನ್‌ಎಂ ಡಿಪ್ಲೊಮಾ ಕೋರ್ಸ್‌ಗಳ ಪ್ರವೇಶ ಕೂಡಾ ಆರಂಭವಾಗಿದೆ.

ಪ್ರವೇಶಾತಿ ಮತ್ತು ಇತರ ಮಾಹಿತಿಗಾಗಿ ಡಾ. ಧರ್ಮರಾಜ್ ಕೆ. (ಮೊ.ಸಂ. 94495992330 ಅಥವಾ ಶ್ರೀನಾಥ್ ಆಚಾರ್ಯ (9632124717) ಅವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

6 ಎಂಜಿನಿಯರಿಂಗ್ ಕಾಲೇಜುಗಳ ಮಾನ್ಯತೆ ರದ್ದು

ಬೆಳಗಾವಿ: ‘ರಾಜ್ಯದ 6 ಎಂಜಿನಿಯರಿಂಗ್ ಕಾಲೇಜುಗಳ ಮಾನ್ಯತೆ ರದ್ದುಪಡಿಸಲಾಗಿದ್ದು, ಅವು 2021-22ನೇ ಸಾಲಿನಿಂದ ಮುಚ್ಚಲಿವೆ’ ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) ತಿಳಿಸಿದೆ.

ಬೆಂಗಳೂರಿನ ಆಲ್ಫಾ ಎಂಜಿನಿಯರಿಂಗ್ ಕಾಲೇಜು, ಇಸ್ಲಾಮಿಯಾ ತಾಂತ್ರಿಕ ಸಂಸ್ಥೆ, ಬಿಟಿಎಲ್ ತಾಂತ್ರಿಕ ಸಂಸ್ಥೆ ಹಾಗೂ ಬೆಳಗಾವಿಯ ಶೇಖ್ ಎಂಜಿನಿಯರಿಂಗ್ ಕಾಲೇಜು, ಚಾಮರಾಜನಗರದ ಏಕಲವ್ಯ ತಾಂತ್ರಿಕ ಸಂಸ್ಥೆ, ಕೆಜಿಎಫ್‌ನ ವಿನಾಯಕ ತಾಂತ್ರಿಕ ಸಂಸ್ಥೆಗಳ ಮಾನ್ಯತೆ ಹಿಂಪಡೆಯಲಾಗಿದೆ ಎಂದು ವಿಟಿಯು ತನ್ನ ಜಾಲತಾಣದಲ್ಲಿ ಪ್ರಕಟಿಸಿದೆ.

ಈ ಕಾಲೇಜುಗಳ ವಿದ್ಯಾರ್ಥಿಗಳಿಗೆ ಮಾನ್ಯತೆ ಪಡೆದ ಬೇರೆ ಕಾಲೇಜುಗಳಲ್ಲಿ ಪ್ರವೇಶ ನೀಡಲಿದ್ದು, ಈ ಬಗ್ಗೆ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದು. ಯಾರಾದರೂ ಈ ಕಾಲೇಜುಗಳಲ್ಲಿ ಪ್ರವೇಶ ಮುಂದುವರಿಸಿದರೆ ಅದಕ್ಕೆ ವಿಶ್ವವಿದ್ಯಾಲಯವು ಜವಾಬ್ದಾರಿ ಆಗಿರುವುದಿಲ್ಲ ಎಂದು ತಿಳಿಸಲಾಗಿದೆ.



ದೇವರಾಜ ಅರಸು ಪ್ರಶಸ್ತಿ... ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಸವಪ್ರಭು ಲಖಮಗೌಡ ಪಾಟೀಲ, ಕೆ.ಭಾಸ್ಕರ್ ದಾಸ್ ಎಕ್ಕಾರು ಮತ್ತು ಎಸ್.ಜಿ.ಸುಶೀಲಮ್ಮ ಅವರಿಗೆ ದೇವರಾಜ ಅರಸು ಪ್ರಶಸ್ತಿ ಪ್ರದಾನ ಮಾಡಿದರು. ರಶ್ಮಿ ಮಹೇಶ್, ಡಿ.ಎಸ್.ಅರುಣ್, ರಿಜ್ವಾನ್ ಅರ್ಷದ್, ಕೋಟ ಶ್ರೀನಿವಾಸ ಪೂಜಾರಿ, ನೆ.ಲ.ನರೇಂದ್ರಬಾಬು, ಪ್ರೊ.ದೊಡ್ಡರಂಗೇಗೌಡ ಇದ್ದರು.

ಸಂಕ್ಷಿಪ್ತ ಸುದ್ದಿ

ವಿದ್ಯುತ್ ಅವಘಡ: ಇಬ್ಬರ ಸಾವು

ಮಸ್ಕಿ (ರಾಯಚೂರು ಜಿಲ್ಲೆ): ತಾಲ್ಲೂಕಿನ ಸಂತೆಕಲ್ಲೂರಿನಲ್ಲಿ ಶುಕ್ರವಾರ ಬೆಳಗಿನ ಜಾವ ಮೊಹರಂ ಹಬ್ಬ ಆಚರಣೆ ವೇಳೆ ವಿದ್ಯುತ್ ತಂತಿಗೆ ಪಂಜಾ ತಾಗಿದ್ದರಿಂದ ಪಂಜಾ ಹಿಡಿದಿದ್ದ ಹುಸೇನಸಾಬ ದೇವರಮನಿ (50) ಹಾಗೂ ಇವರ ಪಾದಮುಟ್ಟಿ ನಮಸ್ಕರಿಸುತ್ತಿದ್ದ ಹುಲಿಗೆಮ್ಮ (18) ಇಬ್ಬರೂ ಮೃತಪಟ್ಟಿದ್ದಾರೆ.

ಮೊಹರಂ ಕೊನೆಯ ದಿನ ಮೆರವಣಿಗೆ ನಡೆಯುವಾಗ 8 ಅಡಿ ಎತ್ತರವಿದ್ದ ಪಂಜಾ ವಿದ್ಯುತ್ ತಂತಿಗೆ ಸ್ಪರ್ಶವಾಗಿದೆ. ಗ್ರಾಮದಲ್ಲಿ ಈಗ ಮೌನ ಆವರಿಸಿದೆ. ಮಸ್ಕಿ ಪೊಲೀಸ್ ಠಾಣೆಯಲ್ಲಿ ಆಕಸ್ಮಿಕ ಘಟನೆ ಎಂದು ಪ್ರಕರಣ ದಾಖಲಿಸಲಾಗಿದೆ.

ತಾಲಿಬಾನ್ ಪರ ಪೋಸ್ಟ್: ಯುವಕನ ಬಂಧನಕ್ಕೆ ಆಗ್ರಹ

ಬಾಗಲಕೋಟೆ: ಇಲ್ಲಿನ ಜಮಖಂಡಿ ನಗರದಲ್ಲಿ ಆಸಿಫ್ ಗಲಗಲಿ ಎಂಬ ಯುವಕ ಫೇಸ್‌ಬುಕ್‌ನಲ್ಲಿ ‘ಐ ಲವ್ ಯೂ ತಾಲಿಬಾನ್’ ಎಂದು ಸಂದೇಶ ಹಾಕಿದ್ದಾನೆ. ಸ್ಥಳೀಯರು ಆತನ ಬಂಧನಕ್ಕೆ ಆಗ್ರಹಿಸಿದ್ದಾರೆ.

ಯುವಕ ನಾಪತ್ತೆಯಾಗಿದ್ದು, ಪೊಲೀಸರು ಹುಡುಕಾಟ ನಡೆಸಿದ್ದಾರೆ. ಶುಕ್ರವಾರ ಸಂಜೆಯವರೆಗೆ ಈ ಬಗ್ಗೆ ಪ್ರಕರಣ ದಾಖಲಾಗಿರಲಿಲ್ಲ.

ಸಿಡಿಲು: ತಂದೆ ಮಗನಿಗೆ ಗಾಯ

ಉಡುಪಿ: ಪರ್ಕಳದ ಆತ್ರಾಡಿ ಬಳಿ ಶುಕ್ರವಾರ ಜಮೀನಿನಲ್ಲಿರುವ ನಾಗಬನಕ್ಕೆ ಹಾಲು ಎರೆಯಲು ಹೋಗಿದ್ದ ಸಂದರ್ಭ ಸಿಡಿಲು ಬಡಿದು ತಂದೆ, ಮಗ ಗಾಯಗೊಂಡಿದ್ದಾರೆ.

ಗಾಯಾಳು ಸೋಮನಾಥ ಶೆಟ್ಟಿ ಮತ್ತು ಅವರ ಪುತ್ರನನ್ನು ಆಸ್ಪತ್ರೆಗೆ ಸೇರಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಟಗೇರಿ ಕೃಷ್ಣಶರ್ಮ ಪ್ರಶಸ್ತಿ ಪ್ರಕಟ


ಡಾ.ಸಿದ್ದಲಿಂಗ ಪಟ್ಟಣಶೆಟ್ಟಿ


ಕುಂ. ವೀರಭದ್ರಪ್ಪ


ವೈದೇಹಿ

ಬೆಳಗಾವಿ: ಇಲ್ಲಿನ ಡಾ. ಬೆಟಗೇರಿ ಕೃಷ್ಣಶರ್ಮ ಸ್ಮಾರಕ ಪ್ರತಿಷ್ಠಾನ ನೀಡಲಿರುವ 2020-21ನೇ ಸಾಲಿನ ವಿವಿಧ ಪ್ರಶಸ್ತಿಗಳಿಗೆ ಡಾ.ಸಿದ್ದಲಿಂಗ ಪಟ್ಟಣಶೆಟ್ಟಿ (ಕಾವ್ಯ), ಕುಂ.ವೀರಭದ್ರಪ್ಪ (ಕಥೆ), ವೈದೇಹಿ (ಕಾದಂಬರಿ) ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಗಳು ತಲಾ ₹ 50 ಸಾವಿರ ಒಳಗೊಂಡಿವೆ. ಧಾರವಾಡದ ಆಲೂರು ವೆಂಕಟರಾವ್ ರಾಷ್ಟ್ರೀಯ ಸ್ಮಾರಕ ಭವನದಲ್ಲಿ ಸೆ.5ರಂದು ಸಂಸ್ಕೃತಿ ಚಿಂತಕ ಡಾ.ಗುರುಲಿಂಗ ಕಾಪಸೆ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಪ್ರೊ.ರಾಘವೇಂದ್ರ ಪಾಟೀಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	120.02	8,033	5,545
ಹಾರಂಗಿ	2,859	2,857.87	2,491	3,537
ಕಬಿನಿ	2284.00	2,283.38	11,031	5,000
ಹೇಮಾವತಿ	2,922	2,919.56	4,244	4,725
ಲಿಂಗನಮಕ್ಕಿ	1,819	1,812.60	6172	-
ಸೂಪಾ (ಮೀ)	564	554.65	3,796	2,937
ಮಾಣಿ	594	585.50	944	-
ತುಂಗಭದ್ರಾ	1,633	1,632.97	13,265	14,061
ಮಲಪ್ರಭಾ	2079.5	2,077.80	2,269	594
ಘಟಪ್ರಭಾ	2175	2,175.00	4,664	4,664
ಭದ್ರಾ	186	185	5,698	5096
ಆಲಮಟ್ಟಿ (ಮೀ)	519.6	519.60	25,967	21,905
ನಾರಾಯಣಪುರ (ಮೀ)	492.25	491.89	15,000	13,500

* ನೆಲಮಟ್ಟದಿಂದ

ನಿತ್ಯ ಒಂದು ಲೋಟ ತರಕಾರಿ ರಸವನ್ನು ಸೇವಿಸುವುದರಿಂದ ಮಲಬದ್ಧತೆ, ತಲೆನೋವು, ಹೊಟ್ಟೆನೋವು ಕಡಿಮೆಯಾಗುವುದಲ್ಲದೆ ತ್ವಚೆಯೂ ಆರೋಗ್ಯದಿಂದ ಹೊಳೆಯುತ್ತದೆ



ಹದಿಹರೆಯದವರಲ್ಲಿ ಮಾನಸಿಕ ಸಮಸ್ಯೆ ಪೋಷಕರ ಕೈಯಲ್ಲಿದೆ ಪರಿಹಾರದ ಸೂತ್ರ!

ಕೋವಿಡ್ ಶುರುವಾದ ಮೇಲೆ ಪೋಷಕರಲ್ಲಿ ಮಾತ್ರವಲ್ಲ, ಹದಿಹರೆಯದ ಮಕ್ಕಳಲ್ಲೂ ಹಲವು ರೀತಿಯ ಮಾನಸಿಕ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಇಂತಹ ಮಕ್ಕಳ ಮಾನಸಿಕ ಸಮಸ್ಯೆಗಳ ನಿವಾರಣೆಯಲ್ಲಿ ಪೋಷಕರ ಪಾತ್ರ ಹೇಗಿರಬೇಕು?



ರೇಷ್ಮಾ

'ಒಂಬತ್ತನೇ ತರಗತಿಯಲ್ಲಿ ಓದುತ್ತಿರುವ ನನ್ನ ಮಗಳು ವಲ್ಲರಿ ಇತ್ತೀಚೆಗೆ ಯಾಕೋ ಬಹಳ ಮಂಕಾಗಿರುತ್ತಾಳೆ. ಸದಾ ಕೋಣೆ ಬಾಗಿಲು ಹಾಕಿಕೊಂಡಿರುತ್ತಾಳೆ. ಒಮ್ಮೊಮ್ಮೆ ಒಬ್ಬಳೇ ಕುಳಿತು ಅಳುತ್ತಾಳೆ. ಕಾರಣ ಕೇಳಿದರೆ ಹೇಳುವುದಿಲ್ಲ. ಇತ್ತೀಚೆಗೆ ಅವಳ ವರ್ತನೆ ಸಂಪೂರ್ಣ ಬದಲಾಗಿದೆ. ನಮ್ಮೊಂದಿಗೂ ಸರಿಯಾಗಿ ಮಾತನಾಡುತ್ತಿಲ್ಲ. ಕೋವಿಡ್ ಬಂದ ಮೇಲೆ ಮಕ್ಕಳು ಹೀಗೇಕೆ ಆಗಿದ್ದಾರೆ ಅರ್ಥವಾಗುತ್ತಿಲ್ಲ. ನನಗಂತೂ ಏನು ಮಾಡಬೇಕೆಂದೇ ತೋಚುತ್ತಿಲ್ಲ' ಎಂದು ಸಹೋದ್ಯೋಗಿ ಬಳಿ ಹೇಳಿಕೊಂಡಿದ್ದರು ವಿದ್ಯಾ ದೇಸಾಯಿ.

ಸದಾ ಉತ್ಸಾಹದ ಚಿಲುಮೆಯಾಗಿದ್ದ ಮಗಳು ಕೋವಿಡ್ ಬಂದ ನಂತರ ಮಂಕಾಗಿದ್ದನ್ನು ನೋಡಲು ಆಗುತ್ತಿಲ್ಲ ವಿದ್ಯಾ ದೇಸಾಯಿಗೆ. ಹಾಗಂತ ಮಗಳ ಸಮಸ್ಯೆಯ ಬಗ್ಗೆ ಬೇರೆಯವರ ಬಳಿ ಹೇಳಿಕೊಳ್ಳಲು ಹಿಂಜರಿಕೆ. ಈ ಮಾನಸಿಕ ಒತ್ತಡದ ನಡುವೆ ವಿದ್ಯಾ ಅವರ ಆರೋಗ್ಯ ಕೂಡ ಹದಗೆಟ್ಟಿತ್ತು.

ಕೋವಿಡ್ ಶುರುವಾದ ಮೇಲೆ ವಲ್ಲರಿಯಂತೆ ಹದಿಹರೆಯದ ಹಲವಾರು ಮಕ್ಕಳು ಒತ್ತಡ, ಖಿನ್ನತೆ, ಭಯ, ದುಗುಡದಂತಹ ಮಾನಸಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದರೆ ಪೋಷಕರಿಗೆ ತಮ್ಮ ಮಕ್ಕಳ ಮಾನಸಿಕ ಸಮಸ್ಯೆಯ ಕುರಿತು ಬೇರೆಯವರ ಬಳಿ ಹೇಳಿಕೊಳ್ಳಲು ಹಿಂಜರಿಕೆ. ವೈದ್ಯರ ಬಳಿ ಹೋಗಲು ಇಷ್ಟವಿಲ್ಲದೇ ಮಕ್ಕಳ ಸಮಸ್ಯೆಯ ಬಗ್ಗೆ ಚಿಂತಿಸುತ್ತಾ ಹೈರಾಣಾಗುತ್ತಿದ್ದಾರೆ.

'ದೈಹಿಕ, ಮಾನಸಿಕ ಹಾಗೂ ಸಾಮಾಜಿಕ-ಕೌಟುಂಬಿಕ ಕಾರಣಗಳಂತಹ 'ರಿಸ್ಕ್ ಫ್ಯಾಕ್ಟರ್' ಗಳಿಂದ ಹದಿಹರೆಯದ ಮಕ್ಕಳಲ್ಲಿ ಖಿನ್ನತೆ, ಆತಂಕ, ಒತ್ತಡ, ಭಯ, ಅತಿಯಾದ ಕೋಪ ಇಂತಹ ಮಾನಸಿಕ ಸಮಸ್ಯೆಗಳು ಕಾಣಿಸಿಕೊಳ್ಳುತ್ತಿವೆ. ಸಾಮಾಜಿಕವಾಗಿ ತೆರೆದುಕೊಳ್ಳಲು ಸಾಧ್ಯವಾಗದೇ ಇರುವುದು ಇದಕ್ಕೆ ಒಂದು ಪ್ರಮುಖ ಕಾರಣ ಎನ್ನಬಹುದು' ಎನ್ನುತ್ತಾರೆ ನಿಮ್ಹಾನ್ಸ್‌ನ ಮಕ್ಕಳ ಮತ್ತು ಹದಿಹರೆಯದ ಮನೋವೈದ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ರಾಜೇಂದ್ರ ಮಾದೇಗೌಡ ಕಿರಗಸೂರು.

ಹದಿಹರೆಯದ ಮಕ್ಕಳಲ್ಲಿ ಮಾನಸಿಕ ಸಮಸ್ಯೆ ಕಾಣಿಸಿಕೊಳ್ಳಲು ಕೆಲವು ಪ್ರಮುಖ ಕಾರಣಗಳು:

ಸಾಮಾಜಿಕ ಬಂಧನ

ಕೋವಿಡ್ ಬರುವ ಮೊದಲಿನ ಜೀವನಸ್ಥಿತಿಗೂ ಇಂದಿನ ಜೀವನಸ್ಥಿತಿಗೂ ತುಂಬಾನೇ ವ್ಯತ್ಯಾಸವಿದೆ. ಕೋವಿಡ್ ಬರುವ ಮೊದಲು ಶಾಲೆ, ಕಾಲೇಜು, ಆಗಾಗ ಪಿಕ್‌ನಿಕ್, ಪೋಷಕರ ಜೊತೆ ಸಿನಿಮಾ, ಶಾಪಿಂಗ್ ಎಂದು ತಿರುಗಾಡಿಕೊಂಡು ಖುಷಿಯಿಂದ ಇರುತ್ತಿದ್ದ ಮಕ್ಕಳಿಗೆ ಈಗ ಗೃಹಬಂಧನ ಅನಿವಾರ್ಯವಾಗಿದೆ. ಕಳೆದ ಒಂದೂವರೆ ವರ್ಷದಿಂದ ಮನೆಯಲ್ಲೇ ಇದ್ದು ಇದ್ದೂ ಮಕ್ಕಳಿಗೆ ಬೇಸರ ಬಂದಿದೆ. ಸಾಮಾಜಿಕವಾಗಿ ತಮ್ಮನ್ನು ತೆರೆದುಕೊಳ್ಳಲಾಗದೇ ಮಾನಸಿಕ ಒತ್ತಡ ಅನುಭವಿಸುತ್ತಿದ್ದಾರೆ.

ಆನ್‌ಲೈನ್ ತರಗತಿಗಳು

ಕೋವಿಡ್ ಶುರುವಾದ ನಂತರ ಮಕ್ಕಳಲ್ಲಿ ಮಾನಸಿಕ ಒತ್ತಡ ಅತಿಯಾಗಿ ಹೆಚ್ಚಲು ಕಾರಣವಾಗಿದ್ದು ಆನ್‌ಲೈನ್ ತರಗತಿಗಳು. ಮೊದಲೆಲ್ಲಾ ಬೆಳಿಗ್ಗೆ ಎದ್ದು ಚೆಂದವಾಗಿ ತಯಾರಾಗಿ ಶಾಲೆ ಅಥವಾ ಕಾಲೇಜಿಗೆ ಹೋಗಿ ಸಹಪಾಠಿಗಳೊಂದಿಗೆ ಪಾಠ ಕೇಳುತ್ತಿದ್ದ ಮಕ್ಕಳಿಗೆ ಆನ್‌ಲೈನ್ ತರಗತಿ ಬೇಸರ ತಂದಿದೆ. ಅದರಲ್ಲೂ ನೆಟ್‌ವರ್ಕ್ ತೊಂದರೆ, ಅಸಮರ್ಪಕ ಸಮಯ ಪರಿಪಾಲನೆಯು ಇನ್ನಷ್ಟು ಬೇಸರ ಹೆಚ್ಚುವಂತೆ ಮಾಡಿದೆ.

ಮನೆಯ ಆರ್ಥಿಕ ಪರಿಸ್ಥಿತಿ

ಕೋವಿಡ್ ಸಂದರ್ಭದಲ್ಲಿ ಹಲವರು ಉದ್ಯೋಗ ಕಳೆದುಕೊಂಡಿದ್ದಾರೆ. ಕೆಲವರಿಗೆ ವೇತನ ಕಡಿತವಾಗಿದೆ. ಇನ್ನೂ ಕೆಲವರ ಮನೆಗಳಲ್ಲಿ ದುಡಿಯುವ ಕೈಗಳೇ ಇಲ್ಲದಂತಾಗಿವೆ. ಇದರಿಂದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ತುತ್ತಿನ ಚೀಲ ತುಂಬಲು ಕಷ್ಟಪಡುವಂತಹ ಪರಿಸ್ಥಿತಿ ಹಲವು ಮನೆಗಳಲ್ಲಿದೆ. ಈ ಆರ್ಥಿಕ ಅಸಮತೋಲನವು ಕೂಡ ಮಕ್ಕಳ ಮಾನಸಿಕ ಒತ್ತಡಕ್ಕೆ ಕಾರಣವಾಗಿದೆ.

'ಹದಿಹರೆಯದ ಮಕ್ಕಳು ತಮ್ಮ ವಿದ್ಯಾಭ್ಯಾಸ ಹಾಗೂ ಭವಿಷ್ಯದ ಬಗ್ಗೆ ಚಿಂತಿಸಿ ಆತಂಕ, ಖಿನ್ನತೆಗೆ ಒಳಗಾಗುತ್ತಿದ್ದಾರೆ' ಎನ್ನುತ್ತಾರೆ ಡಾ. ರಾಜೇಂದ್ರ.

ಅಧ್ಯಯನವೊಂದರ ಪ್ರಕಾರ ಕೋವಿಡ್-19 ಕಾಣಿಸಿಕೊಂಡ ನಂತರ ಶೇ 70 ರಷ್ಟು ಮಕ್ಕಳಲ್ಲಿ ಮಾನಸಿಕ ಸಮಸ್ಯೆ ಕಾಣಿಸಿಕೊಂಡಿದೆ. ಅದರಲ್ಲೂ ಹೆಣ್ಣುಮಕ್ಕಳಲ್ಲಿ ಈ ಸಮಸ್ಯೆ ಹೆಚ್ಚಿದೆ ಎನ್ನುತ್ತದೆ ಅಧ್ಯಯನ. ಇದರೊಂದಿಗೆ 4 ಮಕ್ಕಳಲ್ಲಿ ಒಬ್ಬರಲ್ಲಿ ಖಿನ್ನತೆ ಹಾಗೂ 5ವರಲ್ಲಿ ಒಬ್ಬರಲ್ಲಿ ಆತಂಕದ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ಪಾಶ್ಚಾತ್ಯ ದೇಶಗಳ ಹದಿಹರೆಯದವರಲ್ಲಿ ಮಾನಸಿಕ ಸಮಸ್ಯೆಯ ಪ್ರಮಾಣ ಹೆಚ್ಚಿದ್ದು ಭಾರತದಲ್ಲೂ ಈ ಸಮಸ್ಯೆ ಸಾಕಷ್ಟಿದೆ.

ಮಾನಸಿಕ ಸಮಸ್ಯೆ ನಿರ್ವಹಣೆಯಲ್ಲಿ ಪೋಷಕರ ಪಾತ್ರ

- ಮಕ್ಕಳ ಮಾನಸಿಕ ಸಮಸ್ಯೆ ನಿವಾರಣೆಯಲ್ಲಿ ಪೋಷಕರ ಪಾತ್ರ ಬಹಳ ದೊಡ್ಡದು. ಮನೆಯಲ್ಲಿ ಮಕ್ಕಳ ಮನಸ್ಸಿನ ಮೇಲೆ ಒತ್ತಡ ಹೇರದಂತೆ ಪೋಷಕರು ಪರಿಸ್ಥಿತಿಯನ್ನು ನಿಭಾಯಿಸಬೇಕು.
- ಪೋಷಕರು ಮಕ್ಕಳ ಮಾನಸಿಕ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು ಅದಕ್ಕೆ ತಕ್ಕಂತೆ ಪ್ರತಿಕ್ರಿಯೆ ನೀಡಬೇಕು. ಮಕ್ಕಳಿಗೆ ಹೊಡೆಯುವುದು, ಟೀಕಿಸುವುದು, ಗದರುವುದು ಮಾಡಬಾರದು.
- ಪೋಷಕರು ತಮ್ಮ ಮನಸ್ಸಿನ ಒತ್ತಡ, ಆತಂಕವನ್ನು ಮಕ್ಕಳ ಮೇಲೆ ಹೇರಬಾರದು. ಇದರಿಂದ ಹದಿಹರೆಯದ ಮಕ್ಕಳಿಗೆ ಇನ್ನಷ್ಟು ಬೇಸರವಾಗುತ್ತದೆ, ಜೊತೆಗೆ ಅವರಿಗೆ ಮುಂದಿನ ಜೀವನದ ಬಗ್ಗೆ ಆತಂಕ ಹೆಚ್ಚುತ್ತದೆ.
- ಹದಿಹರೆಯದ ಮಕ್ಕಳಿಗೆ ನಿಧಾನಕ್ಕೆ ತಿಳಿಸಿ ಹೇಳಿದರೆ ಅರ್ಥ ಮಾಡಿಕೊಳ್ಳುವ ಮನೋಭಾವವಿರುತ್ತದೆ. ಹಾಗಾಗಿ ಕೋವಿಡ್, ಆರ್ಥಿಕ ನಷ್ಟ, ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಮಕ್ಕಳಿಗೆ ವಿವರವಾಗಿ ತಿಳಿಸಿ ಹೇಳಬೇಕು.
- ಪರಿಸ್ಥಿತಿಗೆ ತಕ್ಕಂತೆ ಬದಲಾಗಬೇಕು ಎಂಬುದನ್ನು ಮಕ್ಕಳಿಗೆ ಬಿಡಿಸಿ ಹೇಳಬೇಕು. ಬದಲಾಗುವುದು ಕಷ್ಟ, ಆದರೂ ಬದಲಾವಣೆ ಅನಿವಾರ್ಯ ಎಂಬುದನ್ನು ಅರ್ಥ ಮಾಡಿಸಬೇಕು.
- ಕೋವಿಡ್ ಪರಿಸ್ಥಿತಿ ಎಂಬುದು ಜೀವನಕ್ಕೆ ಪಾಠವಿದ್ದಂತೆ. ಇದರಿಂದ ಎಲ್ಲರೂ ಹಲವು ರೀತಿಯ ಪಾಠ ಕಲಿತಿದ್ದಾರೆ. ಇದನ್ನು ತಂದೆ-ತಾಯಿ ಸಮರ್ಥವಾಗಿ ಎದುರಿಸಬೇಕು. ಪೋಷಕರು ನಿಭಾಯಿಸಿದ ರೀತಿಯನ್ನು ಮಕ್ಕಳು ನೋಡಿ ಕಲಿಯುತ್ತಾರೆ. ಇದರಿಂದ ಮುಂದೆ ಯಾವುದೇ ದೊಡ್ಡ ದೊಡ್ಡ ಸಮಸ್ಯೆಗಳು ಎದುರಾದರೂ ಧೈರ್ಯದಿಂದ ಎದುರಿಸುವುದು ಕಲಿಯುತ್ತಾರೆ.
- ಮುಖ್ಯವಾದದ್ದು ಯಾವುದು ಎಂದು ಗುರುತಿಸುವುದು, ದೈಹಿಕ ಆರೋಗ್ಯದ ಮೇಲೆ ಗಮನ ನೀಡುವುದು, ಭಾವನೆಗಳನ್ನು ಇತರರೊಂದಿಗೆ ಹಂಚಿಕೊಳ್ಳುವುದು ಹಾಗೂ ಇದರೊಂದಿಗೆ ಪರಿಸ್ಥಿತಿಯನ್ನು ಹೇಗೆ ನಿಭಾಯಿಸಬಹುದು ಎಂಬುದನ್ನು ಕಲಿಸಬೇಕು.
- ಭಯ, ಆತಂಕ, ಕೋಪ, ಗಡಿಬಿಡಿಯಲ್ಲಿ ನಿರ್ಧಾರ ಮಾಡುವ ಗುಣ ಇರುವ ಮಕ್ಕಳ ಮೇಲೆ ಪೋಷಕರು ಹೆಚ್ಚು ಗಮನ ಹರಿಸಬೇಕು. ಅಂತಹ ಮಕ್ಕಳ ಜೊತೆ ಸೂಕ್ಷ್ಮವಾಗಿ ವ್ಯವಹರಿಸಬೇಕು.
- ಹದಿಹರೆಯದ ಮಕ್ಕಳಿಗೆ ಮೊಬೈಲ್ ಬಳಕೆ, ಸಂಬಂಧ, ಭಾವನಾತ್ಮಕ ಹಾಗೂ ದೈಹಿಕ ವಿಚಾರಗಳ ಬಗ್ಗೆ ತಿಳಿಸಿ ಹೇಳಬೇಕು.

'ಮಕ್ಕಳ ವಿದ್ಯಾಭ್ಯಾಸಕ್ಕೆ ಸಂಬಂಧಿಸಿ ಒತ್ತಡ ಕಡಿಮೆ ಮಾಡುವ ನಿಟ್ಟಿನಲ್ಲಿ ಸರ್ಕಾರ ಒಂದಿಷ್ಟು ಯೋಜನೆಗಳನ್ನು ಕೈಗೊಂಡಿದೆ. ಅದರಿಂದ ಮಕ್ಕಳಲ್ಲಿ ಸಾಕಷ್ಟು ಒತ್ತಡ ಕಡಿಮೆಯಾಗಿದೆ. ಆದರೆ ಆರ್ಥಿಕ ಸ್ಥಿತಿಗತಿ, ಮನೆಯ ಪರಿಸ್ಥಿತಿ, ಮನರಂಜನೆಯ ಕೊರತೆ ಇವುಗಳಿಂದಲೂ ಮಕ್ಕಳಲ್ಲಿ ಒತ್ತಡ ಹೆಚ್ಚಿದೆ. ಅದನ್ನು ಪೋಷಕರು ಸಮರ್ಥವಾಗಿ ನಿಭಾಯಿಸಿದರೆ ಮಕ್ಕಳನ್ನು ಮಾನಸಿಕ ಸಮಸ್ಯೆಗಳಿಂದ ದೂರ ಇಡಬಹುದು'.

ಡಾ. ರಾಜೇಂದ್ರ ಮಾದೇಗೌಡ ಕಿರಗಸೂರು, ನಿಮ್ಹಾನ್ಸ್ ಪ್ರಾಧ್ಯಾಪಕ

ಸಲಿಂಗಪ್ರೇಮಕ್ಕೆ ಆತ್ಮಹತ್ಯೆ ಪರಿಹಾರವೇ?

ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್

- **22 ವರ್ಷದ ಸರ್ಕಾರಿ ನೌಕರ. ಹುಡುಗಿಯರನ್ನು ನೋಡಿದರೆ ಭಾವನೆಗಳು ಕೆರಳುವುದಿಲ್ಲ. ನಾನು ಸಲಿಂಗಪ್ರೇಮಿ ಇರಬಹುದೇ ಎನ್ನಿಸುತ್ತಿದೆ. ಕುಟುಂಬ ಮತ್ತು ಸ್ನೇಹಿತರ ಪ್ರೀತಿಯೆಲ್ಲವೂ ಸಿಕ್ಕಿದೆ. ಆದರೆ ಮದುವೆಯಿಲ್ಲದೆ ಜೀವನ ವ್ಯರ್ಥವೆನಿಸುತ್ತದೆ. ಮದುವೆಯಾದರೆ ಹೆಂಡತಿಗೆ ಲೈಂಗಿಕ ತೃಪ್ತಿ ಕೊಡಲಾರೆ ಎಂದು ಭಯವಾಗುತ್ತಿದೆ. ಎರಡು ವರ್ಷದಿಂದ ಇದೇ ಚಿಂತೆ ಕಾಡುತ್ತಿದೆ. ಸುಮಾರು 30 ವರ್ಷಗಳವರೆಗೆ ಕಾದು ಸಲಿಂಗಪ್ರೇಮದಿಂದ ಹೊರಬರಲಾಗದಿದ್ದರೆ ಸಾಯಲು ನಿರ್ಧರಿಸಿದ್ದೇನೆ. ಹೊರಬರಲು ಸಾಧ್ಯವೇ? ಸಲಹೆನೀಡಿ.**

ಹೆಸರು, ಊರು ಇಲ್ಲ.

ಸಲಿಂಗಕಾಮ ಸಾಮಾಜಿಕವಾಗಿ ಕಳಂಕವಾಗಿರುವುದಕ್ಕೆ ನಿಮಗೆ ಹಿಂಜರಿಕೆ, ನೋವು ಮತ್ತು ಬೇಸರಗಳಿರುವುದು ಸಹಜ. ಆದರೆ ಇದು ಗುಣಪಡಿಸಬೇಕಾದ ಕಾಯಿಲೆಯಲ್ಲ. ಪ್ರಕೃತಿಯು ನೀಡಿರುವ ಸಹಜವಾದ ಲೈಂಗಿಕ ಆಯ್ಕೆ. ಸಾಕಷ್ಟು ಪ್ರಾಣಿಗಳಲ್ಲಿಯೂ ಇಂತಹ ಪ್ರವೃತ್ತಿಯನ್ನು ಗುರುತಿಸಲಾಗಿದೆ. ಸಲಿಂಗಪ್ರೇಮಿ ಎನ್ನುವ ಒಂದೇ ಕಾರಣಕ್ಕಾಗಿ ನಿಮ್ಮ ವ್ಯಕ್ತಿತ್ವದ ಇತರ ಹಲವಾರು ಅದ್ಭುತವಾದ ಅಂಶಗಳು ವ್ಯರ್ಥವಾಗುವುದು ಹೇಗೆ? ಸಲಿಂಗಪ್ರೇಮಿಯಾಗಿಯೂ ನೀವೊಬ್ಬ ಉತ್ತಮ ಮಗ, ಸ್ನೇಹಿತ, ನಾಗರಿಕ ಎಲ್ಲವೂ ಆಗಿರಬಹುದಲ್ಲವೇ? ತೀವ್ರ ಹತಾಶೆ ನಿಮ್ಮನ್ನು ಆತ್ಮಹತ್ಯೆಯ ಯೋಚನೆಗಳಿಗೆ ತಳ್ಳುತ್ತಿದೆ. ಮೊದಲು ನಿಮ್ಮ ಲೈಂಗಿಕತೆಯ ಕುರಿತಾದ ಪೂರ್ಣ ಅರಿವನ್ನು ಪಡೆದುಕೊಳ್ಳಲು ತಜ್ಞ ಲೈಂಗಿಕ ಮನೋಚಿಕಿತ್ಸಕರನ್ನು ಭೇಟಿಯಾಗಿ. ನಿಮ್ಮ ಎಲ್ಲಾ ನೋವುಗಳಿಗೆ ಸಹಾಯ ಸಿಗುತ್ತದೆ. ಅನಗತ್ಯವಾದ ಔಷಧಗಳನ್ನು ಸೇವಿಸುವುದರ ಮೂಲಕ ಅಪಾಯಗಳನ್ನು ಆಹ್ವಾನಿಸಿಕೊಳ್ಳಬೇಡಿ.

- **ಎಂ.ಎ ಪದವೀಧರ. ಮದುವೆಯಾಗಿ ಇಬ್ಬರು ಮಕ್ಕಳಿದ್ದಾರೆ. ನನಗೆ ಮೊದಲಿನಿಂದಲೂ ಮಲವನ್ನು ನೋಡಿದರೆ ಅಸಹ್ಯವುಂಟಾಗುತ್ತದೆ. ಇದರ ಕುರಿತೇ ಯೋಚಿಸುತ್ತಿರುವುದರಿಂದ ಸಾಮಾನ್ಯರಂತೆ ಎಲ್ಲರೊಡನೆ ಬೆರೆಯಲಾಗುವುದಿಲ್ಲ. ನಾನೇ ಸಮಾಧಾನ ಮಾಡಿಕೊಂಡರೂ ಅದೇ ಯೋಚನೆಗಳು ಬರುತ್ತಿರುತ್ತವೆ. ಎಲ್ಲಾ ವಿಚಾರದಲ್ಲಿಯೂ ಅತಿಯಾಗಿ ಋಣಾತ್ಮಕವಾಗಿ ಚಿಂತಿಸುತ್ತೇನೆ. ಇದರಿಂದ ಹೊರಬರುವುದು ಹೇಗೆ?**

ಹೆಸರು, ಊರು ಇಲ್ಲ.

ಅಸಹ್ಯದ ಭಾವನೆಗಳು ಬರುವುದು ಒಂದು ದೊಡ್ಡ ಮಾನಸಿಕ ಕಾಯಿಲೆ ಎಂದು ನೀವು ಆಳವಾಗಿ ನಂಬಿಕೊಂಡಿರುವಂತಿದೆ. ಮಲವನ್ನು ನೋಡಿದರೆ ಅಸಹ್ಯವಾಗದವರು ಯಾರಿದ್ದಾರೆ ಹೇಳಿ? ತಕ್ಷಣಕ್ಕೆ ಎಲ್ಲರಿಗೂ ಅಸಹ್ಯದ ಭಾವನೆ ಬಂದರೂ ಅದು ಕಾಡುವುದಿಲ್ಲ. ನಿಮ್ಮ ಯಾವುದೋ ಬಾಲ್ಯದ ಅನುಭವ ಇಂತಹ ತೀವ್ರ ಅಸಹ್ಯದ ಭಾವನೆಗಳಿಗೆ ಜೋಡಿಸಿಕೊಂಡಿದೆ. ಇದನ್ನು ತಿಳಿಯಲು ಮನೋಚಿಕಿತ್ಸಕರ ಸಹಾಯದ ಅಗತ್ಯವಿದೆ. ಸದ್ಯಕ್ಕೆ ಹೀಗೆ ಮಾಡಿ. ಅಸಹ್ಯದ ಭಾವನೆ ಬಂದ ಕೂಡಲೇ ಯೋಚನೆಗಳನ್ನು ಬದಲಾಯಿಸುವ ಪ್ರಯತ್ನ ಮಾಡಬೇಡಿ. ಅಸಹ್ಯದ ಭಾವನೆಯನ್ನೇ ಮನಸ್ಸಿನಲ್ಲಿಟ್ಟುಕೊಂಡು ದೀರ್ಘವಾಗಿ ಉಸಿರಾಡುತ್ತಾ ನಿಮ್ಮ ದೇಹದ ಎಲ್ಲಾ ಭಾಗಗಳನ್ನು ಗಮನಿಸಿ. ದೇಹವನ್ನು ಶಾಂತಗೊಳಿಸುತ್ತಾ ಹೋದಂತೆ ಭಾವನೆಗಳ ಒತ್ತಡ ಕಡಿಮೆಯಾಗುತ್ತದೆ. ಹೆಚ್ಚಿನ ಸಹಾಯಕ್ಕೆ ತಜ್ಞರನ್ನು ಸಂಪರ್ಕಿಸಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ.
bhoomika@prajavani.co.in

ಪ್ರಜಾವಾಣಿ ನೋಡಿಯೊ
'ಶೂನ್ಯ ಸಂಪಾದನೆಯ ಹಾದಿಯಲ್ಲಿ... ೪೪ರ ಹರೆಯದಲ್ಲೂ ಜಯಾ ಸಾಧನೆ' ಈ ವಿಡಿಯೊವನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಟೊಮೆಟೊ ಸ್ಯಾಂಡ್‌ವಿಚ್

ನಳಪಾಕ

ವೇದಾವತಿ ಎಚ್. ಎಸ್.

ಟೊಮೆಟೊ ಸ್ಯಾಂಡ್‌ವಿಚ್

ಬೇಕಾಗುವ ಸಾಮಗ್ರಿಗಳು: ಟೊಮೆಟೊ – 3, ಈರುಳ್ಳಿ – 2, ಕ್ಯಾಪ್ಸಿಕಂ – ಅರ್ಧ, ಕೊತ್ತಂಬರಿಸೊಪ್ಪು – 2 ಟೇಬಲ್ ಚಮಚ, ಹಸಿಮೆಣಸಿನಕಾಯಿ –2, ಖಾರದಪುಡಿ – 1 ಟೀ ಚಮಚ, ಚಾಟ್‌ಮಸಾಲ – 1 ಟೀ ಚಮಚ, ರುಚಿಗೆ ತಕ್ಕಷ್ಟು ಉಪ್ಪು, ಬ್ರೆಡ್ ಸ್ಲೈಸ್, ಬೇಕಿದ್ದರೆ ಚೀಸ್ ಹಾಕಬಹುದು, ಬೇಯಿಸಲು ತುಪ್ಪ



ತಯಾರಿಸುವ ವಿಧಾನ: ಟೊಮೆಟೊ, ಈರುಳ್ಳಿ, ಕ್ಯಾಪ್ಸಿಕಂ, ಕೊತ್ತಂಬರಿಸೊಪ್ಪು, ಹಸಿಮೆಣಸಿನಕಾಯಿ ಇವುಗಳನ್ನು ಚಿಕ್ಕದಾಗಿ ಕತ್ತರಿಸಿ ಬೌಲ್‌ಗೆ ಹಾಕಿಕೊಳ್ಳಿ. ಅವುಗಳ ಜೊತೆಗೆ ಖಾರದಪುಡಿ, ಚಾಟ್‌ಮಸಾಲ, ರುಚಿಗೆ ತಕ್ಕಷ್ಟು ಉಪ್ಪನ್ನು ಹಾಕಿ ಚೆನ್ನಾಗಿ ಮಿಶ್ರಣ ಮಾಡಿ. ಬ್ರೆಡ್ ಸ್ಲೈಸ್ ತೆಗೆದುಕೊಳ್ಳಿ. ತಯಾರಿಸಿದ ಮಸಾಲ ಮಿಶ್ರಣವನ್ನು ಅದರ ಮೇಲೆ ಹಾಕಿ. ಚೀಸ್ ಬೇಕಿದ್ದರೆ ಸೇರಿಸಿ. ನಂತರ ಅದರ ಮೇಲೆ ಇನ್ನೊಂದು ಬ್ರೆಡ್ ಸ್ಲೈಸ್ ಇಟ್ಟು ಹಾಕಿರುವ ಪದಾರ್ಥಗಳು ಹೊರ ಬರದಂತೆ ನಿಧಾನವಾಗಿ ಒತ್ತಿ. ತವಾಕ್ಕೆ ತುಪ್ಪವನ್ನು ಹಾಕಿ. ತಯಾರಿಸಿಕೊಂಡ ಸ್ಯಾಂಡ್‌ವಿಚ್ ತವಾದಲ್ಲಿಡಿ. ಬ್ರೆಡ್‌ನ ಮೇಲೆ ತುಪ್ಪವನ್ನು ಸವರಿ. 2 ರಿಂದ 3 ನಿಮಿಷ ಮಧ್ಯಮ ಉರಿಯಲ್ಲಿ ಬೇಯಿಸಿ. ನಂತರ ಇನ್ನೊಂದು ಬದಿಯನ್ನು ತಿರುಗಿಸಿ 2 ರಿಂದ 3 ನಿಮಿಷ ಬೇಯಿಸಿ. ರುಚಿಕರವಾದ ಸ್ಯಾಂಡ್‌ವಿಚ್ ಸವಿಯಲು ಸಿದ್ಧ.

ಚೀಸ್ ಗಾರ್ಲಿಕ್ ಬ್ರೆಡ್

ಬೇಕಾಗುವ ಸಾಮಗ್ರಿಗಳು: ಬೆಣ್ಣೆ – 50 ಗ್ರಾಂ, ಜಜ್ಜಿದ ಬೆಳ್ಳುಳ್ಳಿ – 2 ಟೇಬಲ್ ಚಮಚ, ಬ್ರೆಡ್ ಸ್ಲೈಸ್ – 4, ಚಿಕ್ಕದಾಗಿ ಕತ್ತರಿಸಿದ ಹಸಿಮೆಣಸಿನಕಾಯಿ – 2, ತುರಿದ ಚೀಸ್, ಚಿಲ್ಲಿ ಫ್ಲೇಕ್ಸ್ – ಅರ್ಧ ಟೀ ಚಮಚ, ಚಿಕ್ಕದಾಗಿ ಕತ್ತರಿಸಿದ ಕೊತ್ತಂಬರಿ ಸೊಪ್ಪು ಸ್ವಲ್ಪ, ಬ್ರೆಡ್ ಬೇಯಿಸಲು ಸ್ವಲ್ಪ ಬೆಣ್ಣೆ.

ತಯಾರಿಸುವ ವಿಧಾನ: ಬೆಣ್ಣೆಯನ್ನು ಬಾಣಲೆಗೆ ಹಾಕಿಕೊಂಡು ಸಣ್ಣ ಉರಿಯಲ್ಲಿ ಕರಗಿಸಿ, ಬೆಳ್ಳುಳ್ಳಿಯನ್ನು ಸೇರಿಸಿ. 1 ನಿಮಿಷ ಸಣ್ಣ ಉರಿಯಲ್ಲಿ ಹುರಿಯಿರಿ. ಬ್ರೆಡ್ ಸ್ಲೈಸಿಗೆ ಒಂದು ಬದಿಗೆ ಬೆಣ್ಣೆಯನ್ನು ಹಾಕಿ. ತವಾದಲ್ಲಿ ಬೆಣ್ಣೆ ಹಾಕಿದ ಬದಿಯನ್ನು ಬಣ್ಣ ಬದಲಾಗುವವರೆಗೆ ಬೇಯಿಸಿ. ಎಲ್ಲವನ್ನೂ ಹಾಗೆ ತಯಾರಿಸಿಕೊಳ್ಳಿ. ಬ್ರೆಡ್ ಟೋಸ್ಟ್ ಮಾಡಿದ ಭಾಗಕ್ಕೆ ಕರಗಿಸಿಕೊಂಡ ಬೆಣ್ಣೆ ಮತ್ತು ಬೆಳ್ಳುಳ್ಳಿ ಮಿಶ್ರಣವನ್ನು ಹಾಕಿ. ಕತ್ತರಿಸಿಕೊಂಡ ಹಸಿಮೆಣಸಿನಕಾಯಿ, ತುರಿದ ಚೀಸ್, ಚಿಲ್ಲಿ ಫ್ಲೇಕ್ಸ್, ಕೊತ್ತಂಬರಿಸೊಪ್ಪು ಬ್ರೆಡ್ ಮೇಲೆ ಹಾಕಿ. ತವಾಕ್ಕೆ ಬೆಣ್ಣೆಯನ್ನು ಹಾಕಿ. ತಯಾರಿಸಿದ ಚೀಸ್ ಬ್ರೆಡ್ ಇಡಿ. ಮುಚ್ಚಳವನ್ನು ಮುಚ್ಚಿ. 2 ರಿಂದ 3 ನಿಮಿಷ ಸಣ್ಣ ಉರಿಯಲ್ಲಿ ಬೇಯಿಸಿ. ರುಚಿಕರವಾದ ಗಾರ್ಲಿಕ್ ಬ್ರೆಡ್ ಸವಿಯಲು ಸಿದ್ಧ.



ಪ್ರಜಾವಾಣಿ ನೋಡಿಯೊ
ರೆಸಿಪಿ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ದೇಶ ವಿಭಜನೆಯ ಕ್ರೌರ್ಯದ ನೆನಪಿನ ದಿನ ಆಚರಿಸುವ ಅಗತ್ಯ ಇದೆಯೇ?

ನೋವು ಮರೆಯಲು ಸ್ಫೂರ್ತಿ ಸಿಗಲಿದೆ

• ರಾಮ್ ಮಾಧವ್



ವಿಭಜನೆ ಎಂಬುದು ಹಿಂದೂಗಳಿಗೆ ಭೂಪ್ರದೇಶದ ನಷ್ಟ ಮಾತ್ರ ಅಲ್ಲ; ಅದು ಅವರ ಪವಿತ್ರ ತಾಯ್ನಾಡಿನ ಛೇದನ. ಕಳೆದುಹೋದ ಭೂ ಪ್ರದೇಶವನ್ನು ದೇಶಗಳ ವಿಲೀನದ ಮೂಲಕ ಪಡೆದುಕೊಂಡು ಅಖಂಡ ಭಾರತವನ್ನು ರೂಪಿಸುವುದು ಭಾರತದ ಹಲವರಲ್ಲಿ ಈಗಲೂ ಇರುವ ಗಾಢವಾದ ಕನಸು

ಪ್ರಜಾವಾಣಿ ಚರ್ಚೆ

1940ನೇ ದಶಕದ ಕೊನೆಯ ಭಾಗದಲ್ಲಿ ಮೂರು ಪ್ರಮುಖ ವಿಭಜನೆಗಳು ಘಟಿಸಿದ್ದವು. 1945ರಲ್ಲಿ ಜರ್ಮನಿಯು ಪೂರ್ವ ಮತ್ತು ಪಶ್ಚಿಮ ಜರ್ಮನಿಯಾಗಿ ವಿಭಜನೆಯಾಯಿತು. 1947ರಲ್ಲಿ ಭಾರತವು ಹಿಂದುಸ್ತಾನ ಮತ್ತು ಪಾಕಿಸ್ತಾನವಾಗಿ ಒಡೆಯಿತು. ಕೊನೆಯದಾಗಿ, 1948ರಲ್ಲಿ ಪ್ಯಾಲೆಸ್ಟೀನ್‌ನಿಂದ ಇಸ್ರೇಲ್ ಅನ್ನು ಸೃಷ್ಟಿಸಲಾಯಿತು.

ಜರ್ಮನಿಯ ವಿಭಜನೆಯು ತಾತ್ಕಾಲಿಕವಾಗಿತ್ತು. ಹಾಗಿದ್ದರೂ ಈ ವಿಭಜನೆಯನ್ನು ಶಾಶ್ವತವಾಗಿಸುವುದಕ್ಕಾಗಿ 1960ರ ದಶಕದ ಆರಂಭದಲ್ಲಿ ಬರ್ಲಿನ್ ಗೋಡೆಯನ್ನು ಕಟ್ಟಲಾಯಿತು. ಮೂರೇ ದಶಕಗಳಲ್ಲಿ ಜರ್ಮನ್ನರು ಈ ಗೋಡೆಯನ್ನು ಕೆಡವಿದರು. 1989ರಲ್ಲಿ ಪೂರ್ವ ಮತ್ತು ಪಶ್ಚಿಮ ಜರ್ಮನಿಗಳು ಒಂದಾದವು. ಆದರೆ, ಭಾರತ ಮತ್ತು ಪ್ಯಾಲೆಸ್ಟೀನ್ ವಿಭಜನೆಯು ಘೋರವಾದುದು. ಪ್ಯಾಲೆಸ್ಟೀನ್ ವಿಭಜನೆಯು ಇಸ್ರೇಲ್‌ನಲ್ಲಿ ಯುದ್ಧಕ್ಕೆ ಕಾರಣವಾದರೆ, ಭಾರತದಲ್ಲಿ ವಿಭಜನೆಯು ಸಾಮೂಹಿಕ ವಲಸೆ ಮತ್ತು ಹೃದಯವನ್ನು ಕಲಕುವ ಹಿಂಸಾಚಾರಕ್ಕೆ ಕಾರಣವಾಯಿತು.

1947-49ರ ಅವಧಿಯಲ್ಲಿ ಅರಬ್-ಇಸ್ರೇಲ್ ಯುದ್ಧದ ಸಂದರ್ಭದಲ್ಲಿ 30 ಸಾವಿರಕ್ಕೂ ಹೆಚ್ಚು ಜನರು ಬಲಿಯಾಗಿದ್ದಾರೆ. ಭಾರತದ ವಿಭಜನೆಯ ಸಂದರ್ಭದಲ್ಲಿ ಆದ ಸಾವು-ನೋವು, ನಾಶ-ನಷ್ಟ ಆಘಾತಕಾರವಾದುದು. ಹತ್ತು ಲಕ್ಷಕ್ಕೂ ಹೆಚ್ಚು ಜನರ ಹತ್ಯೆ ಆಗಿದೆ. ತರಾತುರಿಯಲ್ಲಿ ಸೃಷ್ಟಿಸಲಾಗಿದ್ದ ಗಡಿಗಳನ್ನು ದಾಟಿ ನಡೆದ ವಲಸೆ ಹೋಗುವುದಕ್ಕಾಗಿ ಲಕ್ಷಾಂತರ ಜನರು ಪಟ್ಟ ಪಡಿಪಾಟಲು ವೇದನಾದಾಯಕವಾಗಿತ್ತು. ಸಾವಿರಾರು ಜನರು ತಮ್ಮ ಗಮ್ಯವನ್ನು ತಲುಪಲೇ ಇಲ್ಲ. ಅವರನ್ನು ದಾರಿಯಲ್ಲಿಯೇ ತಡೆದು ಕೊಂದು ಹಾಕಲಾಯಿತು.

ಈ ಕ್ರೌರ್ಯವನ್ನು ಮರೆಯುವುದು ಕಷ್ಟ. ಇತಿಹಾಸಕಾರ ವಿಲಿಯಂ ಡಾಲ್‌ರಿಂಪಲ್ ಅವರು ನ್ಯೂಯಾರ್ಕರ್ ನಿಯತಕಾಲಿಕಕ್ಕೆ ಬರೆದ ಲೇಖನದಲ್ಲಿ ನಿಸಿದ್ ಹಜಾರಿ ಅವರ 'ಮಿಡ್‌ನೈಟ್ಸ್ ಫ್ಯೂರೀಸ್' ಕೃತಿಯನ್ನು ಉಲ್ಲೇಖಿಸುತ್ತಾ ಈ ಕ್ರೌರ್ಯದ ಬಗ್ಗೆ ಹೀಗೆ ಬರೆಯುತ್ತಾರೆ: 'ಹಂತಕರ ಗುಂಪುಗಳು ಇಡೀ ಗ್ರಾಮಗಳಿಗೆ ಬೆಂಕಿ ಇರಿಸಿವೆ, ಗಂಡಸರು ಮತ್ತು ಮಕ್ಕಳನ್ನು ಬಿಡದೆ ಕೊಂದಿವೆ ಮತ್ತು ಅತ್ಯಾಚಾರ ಎಸಗುವುದಕ್ಕಾಗಿ ಯುವತಿಯರನ್ನು ಹೊತ್ತೊಯ್ದಿವೆ. ನಾಜಿ ಮರಣ ಶಿಬಿರಗಳಿಗಿಂತ ವಿಭಜನೆಯ ಕ್ರೌರ್ಯವು ಭಯಾನಕ ಎಂದು ನಾಜಿ ಶಿಬಿರಗಳನ್ನು ಕಂಡಿದ್ದ ಬ್ರಿಟನ್ ಸೈನಿಕರು ಮತ್ತು ಪತ್ರಕರ್ತರು ಹೇಳಿದ್ದಾರೆ. ಗರ್ಭಿಣಿಯರ ಮೊಲೆಗಳನ್ನು ಕತ್ತರಿಸಲಾಯಿತು ಮತ್ತು ಗರ್ಭದಲ್ಲಿದ್ದ ಶಿಶುಗಳನ್ನು ಹೊರಕ್ಕೆ ಕೀಳಲಾಯಿತು. ಹಸುಳೆಗಳನ್ನು ಹುರಿದು ಹಾಕಲಾಯಿತು'.

ಭಾರತದ ವಿಭಜನೆಯು ಅರ್ಥಹೀನ ಮತ್ತು ಹೊಣೆಗೇಡಿ ಕೃತ್ಯ. ವಿಭಜನೆಯನ್ನು ವಿರೋಧಿಸಿದ್ದ ಗಾಂಧೀಜಿ ಹೀಗೆ ಹೇಳಿದ್ದರು: 'ದೇಶವನ್ನು ಕತ್ತರಿಸುವ ಮೊದಲು ನನ್ನನ್ನು ಕತ್ತರಿಸಿ'. ವಿಭಜನೆಯನ್ನು ತಿರಸ್ಕರಿಸಲು ಕೊನೆಯ ತನಕ ಹೋರಾಡುವುದಾಗಿ ಪಟೇಲ್ ಹೇಳಿದ್ದರು. 'ಇಂಡಿಯಾ ಡಿವೈಡೆಡ್' ಎಂಬ ಪುಸ್ತಕದಲ್ಲಿ ವಿಭಜನೆಯು ಎಷ್ಟು ಅತಾರ್ಕಿಕ ಎಂಬುದನ್ನು ಸಮಗ್ರವಾಗಿ, ಮನದಟ್ಟಾಗುವ ರೀತಿಯಲ್ಲಿ ರಾಜೇಂದ್ರ ಪ್ರಸಾದ್ ವಿವರಿಸಿದ್ದರು.

ಇದು ಉನ್ಮಾದವಲ್ಲದೆ ಬೇರೇನೂ ಅಲ್ಲ ಎಂದು ಗಡಿಯಾಚೆಗಿನ ಪ್ರಸಿದ್ಧ ಕವಿ ಸಾದತ್ ಹಸನ್ ಮಂಟೋ ಹೇಳಿದ್ದರು. ಅತ್ಯಾಚಾರಕ್ಕೆ ಒಳಗಾಗಿ ಗರ್ಭ ಧರಿಸಿದ್ದ ಮಹಿಳೆಯರು ಆ ಕವಿಯ ಮನ ಕಲಕಿದ್ದರು.'ಈ ಗರ್ಭಗಳು ಎಲ್ಲಿಗೆ ಸೇರಿದವು- ಹಿಂದುಸ್ಥಾನಕ್ಕೋ ಪಾಕಿಸ್ತಾನಕ್ಕೋ?' ಎಂದು ವೇದನೆಯಲ್ಲಿ ಅವರು ಪ್ರಶ್ನಿಸಿದ್ದರು. ಮಂಟೊ ಅವರ ನಾಯಕ ತೋಬಾ ತೇಕ್ ಸಿಂಗ್ ಕೊನೆಯಲ್ಲಿ ಭಾರತಕ್ಕೂ ಪಾಕಿಸ್ತಾನಕ್ಕೂ ಸೇರದ ಯಾರದೂ ಅಲ್ಲದ ನೆಲದಲ್ಲಿ ಇರುವ ವ್ಯಂಗ್ಯವು ವಿಭಜನೆಯ ಹುಚ್ಚಾಟವನ್ನು ತೋರಿಸುತ್ತದೆ. 'ಒಂದೆಡೆ ಮುಳ್ಳು ಬೇಲಿಯ ಆ ಕಡೆಗೆ ಭಾರತದ ಕಡೆಯ ಹುಚ್ಚರು ಇದ್ದಾರೆ ಮತ್ತು ಇನ್ನೊಂದು ಕಡೆ ಇನ್ನೂ ಹೆಚ್ಚು ಮುಳ್ಳು ಬೇಲಿಗಳ ಆಚೆಗೆ ಪಾಕಿಸ್ತಾನದ ಹುಚ್ಚರು ಇದ್ದಾರೆ. ಇದರ ನಡುವೆ, ಭೂಮಿಯ ಸಣ್ಣ ತುಂಡಿನಲ್ಲಿ ತೋಬಾ ತೇಕ್ ಸಿಂಗ್ ಮಲಗಿದ್ದಾನೆ' ಎಂದು ಮಂಟೋ ಪ್ರಚೋದನಕಾರಿಯಾಗಿಯೇ ಬರೆದಿದ್ದರು.



ದೇಶ ವಿಭಜನೆಗೆ ಸಂಬಂಧಿಸಿದ ಚಿತ್ರಗಳಿರುವ ಅಮೃತಸರದ ಮ್ಯೂಸಿಯಂ

1940ರ ದಶಕದ ಆರಂಭದ ವರೆಗೂ ವಿಭಜನೆಯು ಅನಿವಾರ್ಯವೇನೂ ಆಗಿರಲಿಲ್ಲ. ಆದರೆ, ಆ ಹೊತ್ತಿಗೆ ಬ್ರಿಟಿಷರು ದೇಶ ತೊರೆಯುವ ಆತುರದಲ್ಲಿದ್ದರು. 1948ರ ಜೂನ್‌ಗೆ ಮೊದಲು ದೇಶವನ್ನು ಮುಕ್ತಗೊಳಿಸಬೇಕು ಎಂಬ ಆದೇಶದೊಂದಿಗೆ ಮೌಂಟ್ ಬ್ಯಾಟನ್ ಅವರು 1947ರ ಮಾರ್ಚ್‌ನಲ್ಲಿ ಭಾರತಕ್ಕೆ ಬಂದರು. 'ಮಾನಸಿಕ ಅಸ್ವಸ್ಥ' ಜಿನ್ನಾರನ್ನು ಭೇಟಿಯಾದ ಬಳಿಕ ಅಷ್ಟು ಕಾಲ ಕಾಯಲು ಅವರು ಮನಸ್ಸು ಮಾಡಲಿಲ್ಲ. ಭಾರತವನ್ನು ಬ್ರಿಟನ್ ಎರಡಾಗಿ ವಿಭಜಿಸಲಿದೆ ಮತ್ತು ಮೂರು ತಿಂಗಳಿಗೂ ಮೊದಲೇ ದೇಶ ತೊರೆಯಲಿದೆ ಎಂದು ಮೌಂಟ್‌ಬ್ಯಾಟನ್ ಅವರು ಏಕಪಕ್ಷೀಯವಾಗಿ ಜೂನ್‌ನಲ್ಲಿ ಘೋಷಿಸಿದರು.

'ಹುಚ್ಚ' ಮತ್ತು 'ಅತ್ಯಂತ ಕುಬುದ್ಧಿ'ಯ ಜಿನ್ನಾ ಬಯಕೆ ಅಷ್ಟು ಬೇಗನೆ ಈಡೇರಿದ್ದನ್ನು ಅರಗಿಸಿಕೊಳ್ಳುವುದು ಗಾಂಧೀಜಿಗೆ ಸಾಧ್ಯವಾಗಲಿಲ್ಲ. ಬಂಗಾಳದ ಕೋಮುವಾದಿ ಪ್ರಧಾನಿ ಹುಸೇನ್ ಸುಹ್ರವರ್ದಿಯ ಧರ್ಮಾಂಧತೆ ಮತ್ತು ಕ್ರೌರ್ಯಕ್ಕೆ ಒಳಗಾಗಿದ್ದ ಜನರಿಗೆ ಸಾಂತ್ವನ ಹೇಳಲು ಗಾಂಧೀಜಿ ಬಂಗಾಳಕ್ಕೆ ಹೋದರು. ವಿಭಜನೆ ಎಂಬುದು 'ಅತ್ಯದ್ಭುತವಾದ ಅಸಂಬದ್ಧ' ಎಂದು ಒಮ್ಮೆ ಹೇಳಿದ್ದ ಜವಾಹರಲಾಲ್ ನೆಹರೂ ಅವರು ವಿಭಜನೆಯ ಸಿದ್ಧಾಂತಕ್ಕೆ ತಕ್ಷಣವೇ ಹೊಂದಿಕೊಂಡರು. 'ನಮ್ಮ ದಾರಿಗೆ ಅಡ್ಡಲಾಗಿ ಇರುವವರು ತಮ್ಮ ದಾರಿಯಲ್ಲಿ ಸಾಗಬಹುದು' ಎಂದು 1947ರ ಏಪ್ರಿಲ್‌ನಲ್ಲಿ ಅವರು ಘೋಷಿಸಿದರು.

ವಿಭಜಿತ ಭಾರತದ ಮೊದಲ ರಾಷ್ಟ್ರಪತಿಯಾಗಿ ರಾಜೇಂದ್ರ ಬಾಬು ಮತ್ತು ಪ್ರಧಾನಿಯಾಗಿ ನೆಹರೂ ಅಧಿಕಾರಕ್ಕೆ ಬಂದರು. ಪಾಕಿಸ್ತಾನದಲ್ಲಿ ಮಂಟೋಗೆ ದೇಶದ್ರೋಹಿ ಎಂಬ ಹಣೆಪಟ್ಟಿ ಕಟ್ಟಿ ಜೈಲಿಗೆ ಎಸೆಯಲಾಯಿತು. ಹೃದಯ ಒಡೆದು ಹೋಗಿದ್ದ ಆ ಮನುಷ್ಯ 1955ರಲ್ಲಿ ತಮ್ಮ 42ನೇ ವಯಸ್ಸಿಗೆ ಮೃತಪಟ್ಟರು.

ವಿಭಜನೆ ಎಂಬುದು ಹಿಂದೂಗಳಿಗೆ ಭೂಪ್ರದೇಶದ ನಷ್ಟ ಮಾತ್ರ ಅಲ್ಲ; ಅದು ಅವರ ಪವಿತ್ರ ತಾಯ್ನಾಡಿನ ಛೇದನ. ಕಳೆದುಹೋದ ಭೂ ಪ್ರದೇಶವನ್ನು ದೇಶಗಳ ವಿಲೀನದ ಮೂಲಕ ಪಡೆದುಕೊಂಡು ಅಖಂಡ ಭಾರತವನ್ನು ರೂಪಿಸುವುದು ಭಾರತದ ಹಲವರಲ್ಲಿ ಈಗಲೂ ಇರುವ ಗಾಢವಾದ ಕನಸು. ಎರಡು ಶತಮಾನಗಳ ಕಾಲ ಯಹೂದ್ಯರಿಗೆ ಇಸ್ರೇಲ್ ಇದ್ದ ಹಾಗೆ.

ಜರ್ಮನಿಯ ವಿಭಜನೆಯನ್ನು ಗಡಿಯ ಎರಡೂ ಭಾಗಗಳಲ್ಲಿ ಇದ್ದವರು ವಿರೋಧಿಸಿದ್ದರು. ಗೋಡೆಯನ್ನು ಕೆಡವಿದ ಅವರು ವಸಾಹತುಶಾಹಿ ಆಟಕ್ಕೆ ಕೊನೆ ಹಾಡಿದರು. ಪೂರ್ವ ಜರ್ಮನಿಯ ಪ್ರಧಾನಿ ಲೋದರ್ ಡಿ ಮಸೀಯ ಮತ್ತು ವಿರೋಧ ಪಕ್ಷದ ನಾಯಕ ರಿಚರ್ಡ್ ಶ್ರೋಡರ್ ತಮ್ಮ ಜನರ ಜತೆಗೆ ನಿಂತರು. ಸೋವಿಯತ್ ಒಕ್ಕೂಟದ ಒಳಗೆ ವಿರೋಧ ವ್ಯಕ್ತವಾದರೂ ಗೋರ್ಬಚೆವ್ ಅವರು ಹಸ್ತಕ್ಷೇಪ ನಡೆಸದೆ ಮುತ್ಸದ್ದಿತನ ಪ್ರದರ್ಶಿಸಿದರು.

ದುರದೃಷ್ಟವೆಂದರೆ, ಭಾರತದ ವಿಭಜನೆ ಎಂಬುದು ನೆಲಕ್ಕೆ ಸಬಂಧಿಸಿದ ವಿಚಾರ ಮಾತ್ರ ಅಲ್ಲ ಅದು ಮನಸ್ಸಿಗೆ ಸಂಬಂಧಿಸಿದ್ದು ಕೂಡ. ಹಿಂದೂಗಳು ಮತ್ತು ಮುಸ್ಲಿಮರು ಜತೆಯಾಗಿ ಬದುಕುವುದು ಸಾಧ್ಯವಿಲ್ಲ ಎಂಬುದು ವಿಭಜನೆಯ ನೆಲೆಗಟ್ಟು. ಹಿಂದೂ-ಮುಸ್ಲಿಂ ಒಗ್ಗಟ್ಟಿನ ರಾಯಭಾರಿ ಎಂದು ಒಂದು ಕಾಲದಲ್ಲಿ ಜಿನ್ನಾ ಹೊಗಳಿಕೆಗೆ ಪಾತ್ರವಾಗಿದ್ದರು. 'ಹಿಂದೂ ಪ್ರಾಬಲ್ಯ ಎಂಬುದು ನಿಮ್ಮನ್ನು (ಮುಸ್ಲಿಮರು) ಹೆದರಿಸಲು ನಿಮ್ಮ ಶತ್ರುಗಳು ಸೃಷ್ಟಿಸಿರುವ ಕಟ್ಟುಕತೆ' ಎಂದಿದ್ದರು. ಆದರೆ, 1940ರ ದಶಕದ ಹೊತ್ತಿಗೆ ಅವರ ಮನೋಭಾವವೇ ಬದಲಾಯಿತು. ಜತೆಯಾಗಿ ಬದುಕುವುದು ಸಾಧ್ಯವೇ ಇಲ್ಲ ಎಂದು ಅವರು ಹುಚ್ಚನಂತೆ ವಾದಿಸಿದರು ಮತ್ತು ಅದರಲ್ಲಿ ಗೆಲುವು ಪಡೆದರು.

ಜಿನ್ನಾ ಭೂತವನ್ನು ಮರಳಿ ಸೀಶೆಯೊಳಗೆ ಸೇರಿಸುವುದು ಅಖಂಡ ಭಾರತದ ಮೊದಲ ಹೆಜ್ಜೆ. ಮಾನಸಿಕ ಮತ್ತು ಭಾವನಾತ್ಮಕ ವಿಭಜನೆಯ ಗಾಯ ಮಾಯುವಂತೆ ಮಾಡಲು ಸಮುದಾಯವು ಪೋಷಿಸಿಕೊಂಡು ಬಂದಿರುವ ವಿಭಜನೆಯ ಕಾಲದ ನೆನಪುಗಳು ಸಹಕರಿಸುತ್ತದೆಯೇ ಹೊರತು ಅವನ್ನು ಹೆಚ್ಚಿಸುವುದಿಲ್ಲ. 'ತಾರತಮ್ಯ, ಶತ್ರುತ್ವ ಮತ್ತು ಕಹಿಯ ವಿಷವನ್ನು ನಿರ್ಮೂಲನೆಗೊಳಿಸಲು ಈ ದಿನವು ಸ್ಫೂರ್ತಿ ತುಂಬಬಹುದು. ಜತೆಗೆ, ಇದು ಏಕತೆ, ಸಾಮಾಜಿಕ ಸಾಮರಸ್ಯ ಮತ್ತು ಮಾನವೀಯ ಸ್ಪಂದನಗಳನ್ನು ಬಲಪಡಿಸಬಹುದು'. ಪ್ರಧಾನಿ ನರೇಂದ್ರ ಮೋದಿ ಅವರು ಈ ಭರವಸೆಯಿಂದಲೇ 'ವಿಭಜನೆಯ ಕ್ರೌರ್ಯದ ನೆನಪಿನ ದಿನ' ಆಚರಿಸಬೇಕು ಎಂದು ಕರೆ ಕೊಟ್ಟಿದ್ದಾರೆ.

ಲೇಖಕ: ಆರ್‌ಎಸ್‌ಎಸ್ ಅಖಿಲ ಭಾರತೀಯ ಕಾರ್ಯಕಾರಿಣಿಯ ಸದಸ್ಯ

ಸಚ್ಚಿದಾನಂದ ಸತ್ಯಸಂದೇಶ
ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ



ವ್ರತಗಳ ಮಾಸ ಶ್ರಾವಣ

ಶ್ರಾವಣಮಾಸ ವ್ರತಗಳ ಮಾಸ. ವರ್ಷಧಾರೆಯ ಶ್ರಾವಣಮಾಸದಲ್ಲಿ ಪ್ರತಿದಿನವೂ ಹೊಸ ಒಸಗೆಯ ಸಂಭ್ರಮ ತುಂಬಿರುತ್ತದೆ. ಅತಿ ಮಳೆಯಾಗುವ ಕಾರಣ ಗೃಹಸ್ಥರು ಸುಮ್ಮನೆ ಕೂರುವ ಬದಲು ದೇವರ ವ್ರತಗಳನ್ನು ಮಾಡುತ್ತಾ, ಮನಸ್ಸನ್ನು ನಿರ್ಮಲಗೊಳಿಸಿಕೊಳ್ಳಲೆಂದು ನಮ್ಮ ಹಿರಿಯರು ಶ್ರಾವಣಮಾಸವನ್ನು ವ್ರತಗಳ ಮಾಸವನ್ನಾಗಿಸಿದ್ದಾರೆ. ಯತಿಗಳೂ ಸಹ ಮಳೆಯಿಂದಾಗಿ ದೇಶಪರ್ಯಟನೆ ಮಾಡದೆ, ಒಂದೆಡೆ ಕುಳಿತು ಚಾತುರ್ಮಾಸ್ಯವನ್ನು ಆಚರಿಸುವ ಪದ್ಧತಿಯನ್ನು ರೂಪಿಸಿದ್ದಾರೆ.

ಹಿಂದೂಧರ್ಮ ಈ ನೆಲದ ಧರ್ಮವಾಗಿರುವುದರಿಂದ ಇಲ್ಲಿಯ ಪರಿಸರಕ್ಕೆ ತಕ್ಕಂತೆ ಹಬ್ಬಗಳನ್ನು ರೂಪಿಸಲಾಗಿದೆ. ಮನುಷ್ಯರ ಬದುಕಿಗೆ ಪೂರಕವಾದ ವ್ರತ-ನಿಯಮಗಳನ್ನೂ ಮಾಡಲಾಗಿದೆ. ಇದು ಯಾರೋ ಒಬ್ಬರು ಸ್ವಕಲ್ಪಿತವಾಗಿ ಯೋಚಿಸಿ ಮಾಡಿದ್ದಲ್ಲ. ಸಾವಿರಾರು ವರ್ಷಗಳ, ನೂರಾರು ಋಷಿಗಳು ಚಿಂತಿಸಿ-ಮಂಥಿಸಿದ ನಂತರ ನೀತಿ-ನಿಯಮಗಳನ್ನು ಅನುಷ್ಠಾನಕ್ಕೆ ತರಲಾಗಿದೆ. ಹೇಗೆ ನೋಡಿದರೂ, ನಮ್ಮ ಹಬ್ಬಗಳು ಸುಖಾಸುಮ್ಮನೆ ಮಾಡಿಕೊಂಡ ಸಂಭ್ರಮಾಚರಣೆಗಳಲ್ಲ. ಧಾರ್ಮಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ವೈಜ್ಞಾನಿಕವಾಗಿ ಎಲ್ಲಾ ಸ್ತರಗಳಲ್ಲೂ ಯೋಚಿಸಿ, ಯೋಜಿಸಿ ಮಾಡಿದ ಕ್ರಮಗಳು. ದೇವರ ನಂಬಿ ಕೆಟ್ಟವರಿಲ್ಲ, ವ್ರತಗಳ ಮಾಡಿ ಯಾರೂ ಹಾಳಾದವರಿಲ್ಲ. ಶಾಸ್ತ್ರ-ಸಂಪ್ರದಾಯಗಳಿಂದ ನಮ್ಮ ಬದುಕು ಪಾವನವಾಗಿದೆ, ನಮ್ಮ ಭವಿಷ್ಯ ಉಜ್ವಲವಾಗುತ್ತಲೇ ಸಾಗಿದೆ. ಇದಕ್ಕೆ ಸಹಸ್ರಾರು ವರ್ಷಗಳಿಂದ ರೋಗಬಾಧೆ, ಶತ್ರುಬಾಧೆಗಳನ್ನು ನಿವಾರಿಸಿಕೊಂಡು ನಾವು ಉತ್ತಮವಾಗಿ ಬದುಕನ್ನು ರೂಪಿಸಿಕೊಂಡಿರುವುದೇ ಸಾಕ್ಷಿ.


ಹಬ್ಬಗಳು ಮನಸ್ಸನ್ನು ಉಲ್ಲಾಸಗೊಳಿಸಿದರೆ, ವ್ರತಗಳು ಮನಸ್ಸಿನ ಕೊಳೆಯನ್ನು ತೊಳೆಯುತ್ತವೆ. ಇದಕ್ಕಾಗಿ ಶ್ರಾವಣಮಾಸದ ಎರಡನೇ ಶುಕ್ರವಾರವನ್ನು 'ವರಮಹಾಲಕ್ಷ್ಮಿವ್ರತ'ವಾಗಿ, ಶ್ರಾವಣ ಹುಣ್ಣಿಮೆಯನ್ನು 'ರಕ್ಷಾಬಂಧನ'ವಾಗಿ ಆಚರಿಸುತ್ತೇವೆ. ಲಕ್ಷ್ಮಿ ಅಂದರೆ ಕೇವಲ ಐಶ್ವರ್ಯ ಕೊಡುವ ಧಾತೆಯಲ್ಲ; ಅಷ್ಟೈಶ್ವರ್ಯವನ್ನು ಕರುಣಿಸುವ ಮಹಾದೇವಿ. ಆದಿಲಕ್ಷ್ಮಿ, ಧನಲಕ್ಷ್ಮಿ, ಧಾನ್ಯಲಕ್ಷ್ಮಿ, ಗಜಲಕ್ಷ್ಮಿ, ಸಂತಾನಲಕ್ಷ್ಮಿ, ಧೈರ್ಯಲಕ್ಷ್ಮಿ, ವಿಜಯಲಕ್ಷ್ಮಿ, ವಿದ್ಯಾಲಕ್ಷ್ಮಿಯಾಗಿ ನಮ್ಮನ್ನೆಲ್ಲ ಪೊರೆವ ಮಹಾತಾಯಿ. ನಮ್ಮ ಸುತ್ತಲ ಸಮಾಜ ದಾರಿದ್ರ್ಯ ಮುಕ್ತವಾಗಿ, ರೋಗಮುಕ್ತವಾಗಿ, ನಮ್ಮ ಮನೆ-ಮನಗಳಲ್ಲಿ ಸುಖ-ಶಾಂತಿ-ನೆಮ್ಮದಿ ನೆಲೆಸುವಂತೆ ಮಾಡುವ ಜಗನ್ಮಾತೆ. ಸ್ವತಃ ಮಹಾಶಿವನೇ ಸುಖ-ಸಮೃದ್ಧಿಗಾಗಿ ವರಮಹಾಲಕ್ಷ್ಮಿವ್ರತವನ್ನು ಮಾಡುವಂತೆ ಪಾರ್ವತಿಗೆ ಸೂಚಿಸಿದ ಪುರಾಣೈತಿಹ್ಯವಿದೆ. ಹಾಗೆಯೆ, ಮಗಧ ರಾಜ್ಯದ ಕೌಂಡಿನ್ಯಪುರದ ಚಾರುಮತಿ ವರಮಹಾಲಕ್ಷ್ಮಿವ್ರತವನ್ನು ಮಾಡಿ ತನ್ನ ಮನೆಯನ್ನಲ್ಲದೆ, ಇಡೀ ಊರನ್ನೇ ಶ್ರೀಮಂತಗೊಳಿಸಿದ ಐತಿಹ್ಯ ಸಹ ಇದೆ.

ನಾವು ಹೆಣ್ಣನ್ನು ದೇವರೆಂದು ಪೂಜಿಸುತ್ತೇವೆ. ಹೆಣ್ಣನ್ನು ಪೂಜಿಸುವ ಮತ್ತು ಗೌರವಿಸುವ ಸ್ಥಳದಲ್ಲಿ ದೇವರು ನೆಲೆಸುತ್ತಾನೆ ಎಂದು ನಂಬಿದ್ದೇವೆ. ಹೆಣ್ಣಿಗೆ ಸಿಗುವ ಗೌರವಾದಾರಗಳಿಂದ ಸಮಾಜ ಬೆಳಗುತ್ತದೆ, ಹೆಣ್ಣು ನೊಂದರೆ ಸಮಾಜ ನಂದುತ್ತದೆ ಅಂತ ಭಾವಿಸಿದ್ದೇವೆ. ತಾಯಿಯಾಗಿ, ಸೋದರಿಯಾಗಿ, ಪತ್ನಿಯಾಗಿ, ಬಂಧುವಾಗಿ ನಮ್ಮ ಬದುಕು ಮುನ್ನಡೆಸುವ ಅಬಲೆಗೆ ದುಷ್ಟರಿಂದ ಯಾವ ಅಪಾಯವೂ ಬಾರದಿರಲೆಂದು 'ರಕ್ಷಾಬಂಧನ' ಕಟ್ಟಿ ಅಭಯವನ್ನು ನೀಡುತ್ತೇವೆ. ದ್ರೌಪದಿಗೆ ರಕ್ಷಾಬಂಧನವನ್ನು ಕಟ್ಟಿದ ಶ್ರೀಕೃಷ್ಣ, ಆಕೆಯ ಕುಟುಂಬಕ್ಕೆ ಕಾವಲಾಗಿದ್ದಂತೆ, ಪ್ರತಿಯೊಬ್ಬ ಪುರುಷನೂ ಪರಸ್ತ್ರೀಯರನ್ನು ಸೋದರಿಯಂತೆ ಭಾವಿಸಿ, ರಕ್ಷಣೆಗೆ ಧಾವಿಸಿ ಬರಲು ರಕ್ಷಾಬಂಧನಸೂತ್ರವನ್ನು ರೂಪಿಸಲಾಗಿದೆ. ಅಣ್ಣ-ತಂಗಿಯರ ಬಾಂಧವ್ಯ ಬೆಸೆಯುವ ರಕ್ಷಾಬಂಧನ ಪ್ರಸ್ತುತ ಕಾಲಘಟ್ಟದಲ್ಲಿ ಅಗತ್ಯವಾಗಿದೆ.

ಸಮಾಜದಲ್ಲಿ ಸ್ತ್ರೀಕುಲದ ರಕ್ಷಣೆಯ ಮಹತ್ವ ಅರಿತು, ನಮ್ಮ ಸಂಸ್ಕೃತಿಯಲ್ಲಿ ಮಹಿಳೆಯರ ಸುರಕ್ಷತೆಗೆ ಆದ್ಯತೆ ನೀಡಲಾಗಿದೆ. ಸ್ತ್ರೀಯರ ಬಗ್ಗೆ ದುಷ್ಟರ ಮನದಲ್ಲಿ ದುರಾಲೋಚನೆ ಹುಟ್ಟದಂತೆ ವ್ರತ-ನಿಯಮಗಳನ್ನು ಜಾರಿಗೆ ತರಲಾಗಿದೆ. ಸಮಾಜದ ಪುರುಷರೆಲ್ಲ ಸೋದರರಂತಿದ್ದರೆ ಹೆಣ್ಣುಮಕ್ಕಳಲ್ಲಿ ಸುರಕ್ಷತೆಯ ಭಾವ ಹೆಚ್ಚಿ, ಅವರು ನೆಮ್ಮದಿಯಾಗಿ ಗೌರವಯುತವಾಗಿ ಬಾಳಿದಾಗ 'ಸಚ್ಚಿದಾನಂದ' ಜಗತ್ತು ಪ್ರಕಾಶಿಸುತ್ತದೆ.

ಗಾಯ ಕೆರೆದು ವಿಷ ಹಚ್ಚುವ ವಿಕೃತಿ

• ಕೆ.ಪಿ. ಸುರೇಶ್



ಮೋದಿಯವರು ಕೋಮು ಹಿಂಸೆಯ ದುರಂತವನ್ನು ಈಗಿನ ತಲೆಮಾರಿಗೆ ತಿಳಿಸಲು ದೇಶ ವಿಭಜನೆಯ ಕತೆಗಳನ್ನಷ್ಟೇ ಅಲ್ಲ, ಗೋಧ್ರೋತ್ತರ ಹಿಂಸಾಚಾರದ ಉದಾಹರಣೆಯನ್ನೂ ತಮ್ಮ ಸಿಲೆಬಸ್ಸಿನಲ್ಲಿ ಸೇರಿಸಿಕೊಳ್ಳಬೇಕು. ನೋವು ಮರೆತು ಬದುಕು ಕಟ್ಟಿಕೊಳ್ಳಲು ನೋಡುತ್ತಿರುವ ದೇಶದ ಮನಸ್ಸಿಗೆ ಮತ್ತೆ ಹುಳಿ ಹಿಂಡುವ ಕೆಲಸ ಮಾಡುವ ನಾಯಕ ನಾಯಕನೇ ಅಲ್ಲ, ಅಧಿಕಾರದ ವಿಕೃತ ಲಾಲಸಿ ಅಷ್ಟೇ

ಆಗಸ್ಟ್ 14ರಂದು ದೇಶ ವಿಭಜನೆಯ ಕರಾಳ ದಿನವನ್ನಾಗಿ ಆಚರಿಸಬೇಕೆಂದು ಪ್ರಧಾನಿ ನರೇಂದ್ರ ಮೋದಿ ಹುಕುಂ ಹೊರಡಿಸಿದ್ದಾರೆ. ಈ ಮೂಲಕ ಇತಿಹಾಸದ ನೋವಿನ ನೆನಪುಗಳನ್ನು ಕೆರೆದು ರಣ ಗಾಯ ಮಾಡಿ ಕೋಮು ಧ್ರುವೀಕರಣದ ಸುಳಿಗೆ ಮತ್ತೆ ದೇಶವನ್ನು ತಳ್ಳುವ ಕುಟಿಲ ತಂತ್ರಕ್ಕೆ ಮೊರೆ ಹೋಗಿದ್ದಾರೆ. ಸೋಗೇ ಇಲ್ಲದ ಹವಣಿಕೆ ಇದು! ಸಂದ ಕಾಲದ ಕಲ್ಪಿತ ಮತ್ತು ನೈಜ ನೋವುಗಳನ್ನು ಕೆದಕಿ ವರ್ತಮಾನದಲ್ಲಿ ಸೇಡು ತೀರಿಸಿಕೊಳ್ಳುವ ಹವಣಿಕೆಯ ನಾಯಕತ್ವ ಆಯಾ ದೇಶಗಳನ್ನು ಸರ್ವನಾಶ ಮಾಡಿದೆ. ಹಿಟ್ಲರ್ ಮಾಡಿದ್ದೂ ಇದನ್ನೇ.

ನಮ್ಮ ಹಳ್ಳಿಗಳಲ್ಲಿ ಆಸ್ತಿ, ಜಾತಿ ಕಾರಣಕ್ಕೆ ಜಗಳ ಬಡಿದಾಟಗಳು ನಡೆದಿವೆ, ನಡೆಯುತ್ತಲೇ ಇವೆ. ಆದರೆ ಬಹುತೇಕ ಸಂದರ್ಭಗಳಲ್ಲಿ ಊರ ಹಿರಿಯರು/ಕುಟುಂಬದ ಹಿರೀಕರು 'ಇವೆಲ್ಲಾ ಇಟ್ಕೋಬಾರದಪ್ಪಾ, ಆದದ್ದು ಆಗಿ ಹೋಯಿತು' ಎಂದು ರಾಜಿ ಮಾಡಿಸಿ ಸೌಹಾರ್ದ ಬೆಸೆಯುವ ಕೆಲಸ ಮಾಡಿಯೇ ಇದ್ದಾರೆ. ಇದು ನಮ್ಮ ಪರಂಪರೆ. ಹಳೆಯದ್ದನ್ನು ನೆನಪಿಸಿ ಕಡ್ಡಿಯಾಡಿಸುವ ದುಷ್ಟ ಬುದ್ಧಿಗಳನ್ನು ನಮ್ಮ ಗ್ರಾಮಗಳಲ್ಲೇ ಹೇಯವಾಗಿ ನೋಡುತ್ತಾರೆ.

ಇಂಥಾ ಕಲಹ, ಹತ್ಯೆಗಳು ನಮಗೆ ಹೊಸತಲ್ಲ. ಮಹಾಭಾರತ ಇಲ್ಲವೇ? ಯಾದವೀ ಕಲಹವೆಂಬ ನುಡಿಗಟ್ಟೇ ಸೃಷ್ಟಿಯಾಯಿತಲ್ಲ?

ಅಷ್ಟೇಕೆ ಈ ವಿಭಜನೆ ಎನ್ನುವುದನ್ನು ಮತೀಯ ಕಾರಣದ ವಿಭಜನೆಗಷ್ಟೇ ಯಾಕೆ ಸೀಮಿತಗೊಳಿಸಬೇಕು? '1947ರ ವಿಭಜನೆಯ ಹೊರತಾಗಿಯೂ ಈ ದೇಶದಲ್ಲಿ ಪ್ರಾಂತೀಯ ವಿಭಜನೆಗಳಾಗಿವೆ. ಸ್ವತಃ ಮೋದಿಯವರ ಗುಜರಾತ್ ಹುಟ್ಟಿದ್ದೇ ಇಂಥಾ ಭಾಷಾ ಪ್ರಾಂತ್ಯದ ಬೇಡಿಕೆಯಿಂದ. ಐದು ಮಂದಿ ವಿದ್ಯಾರ್ಥಿಗಳು ಈ ಗುಜರಾತು ರಾಜ್ಯ ಬೇಡಿಕೆಯ ಚಳವಳಿಯಲ್ಲಿ ಹುತಾತ್ಮರಾದರು. ಪೊಟ್ಟಿ ಶ್ರೀರಾಮುಲು ಜೀವ ತ್ಯಾಗ ಮಾಡಿದ್ದು ಆಂಧ್ರಪ್ರದೇಶದ ಸೃಷ್ಟಿಗಾಗಿ. ಈಗಲೂ ಈ ಭಾಷಾವಾರು ವಿಭಜನೆಯ ಅತೃಪ್ತಿಯ ಕೆಂಡಗಳು ಹಾಗೇ ಉಳಿದಿವೆ. ಅವನ್ನೆಲ್ಲಾ ಏನು ಮಾಡುವುದು?

ದೇಶ ವಿಭಜನೆಯ ಘೋಷಣೆ ಆಗಿದ್ದು 1947ರ ಜೂನ್‌ನಲ್ಲಿ. ಆಗಸ್ಟ್ 14-15 ಬ್ರಿಟಿಷರಿಂದ ದೇಶವು ಸ್ವಾತಂತ್ರ್ಯ ಪಡೆದ ದಿನಗಳು. ಪಾಕಿಸ್ತಾನ ಆಗಸ್ಟ್ 14ಕ್ಕೆ ಇದನ್ನು ಆಚರಿಸುತ್ತಿದೆ. ಆಗಸ್ಟ್ 14-15ರಂದು ಭಾರತ-ಪಾಕಿಸ್ತಾನದ ಸೈನ್ಯದವರು ಗಡಿಯಲ್ಲಿ ಪರಸ್ಪರ ಸಿಹಿ ಹಂಚಿಕೊಳ್ಳುತ್ತಾರೆ. ಮೋದಿಯ ಹುನ್ನಾರ ಇನ್ನಷ್ಟು ವಿಷಕಾರಿಯಾಗುವುದು ಈ ಕಾರಣಕ್ಕೆ. ನಾಳೆ ಪಾಕಿಸ್ತಾನ ಆಗಸ್ಟ್ 15 ಅನ್ನು ಇದೇ ರೀತಿ ಆಚರಿಸಹೊರಟರೆ ಎರಡೂ ದೇಶಗಳು ಶಾಶ್ವತ ವೈಷಮ್ಯದ ಒಪ್ಪಂದಕ್ಕೆ ಸಹಿ ಹಾಕಿದವು ಎಂದೇ ಅರ್ಥ!

ದೇಶ ವಿಭಜನೆಯನ್ನೇ ನೆನಪಿಸುವುದಾದರೆ, ದೇಶ ವಿಭಜನೆಯೆಂಬುದು ಮತ ಭಿನ್ನತೆಯ ನೆಪದ ಕಾರಣಕ್ಕಾಯಿತು ನಿಜ. ಇದನ್ನು ಜಿನ್ನಾ, ಹುಸೇನ್ ಸುಹ್ರವರ್ದಿಯವರ ನಾಯಕತ್ವವನ್ನು ಅನುಮೋದಿಸಿದ ಮುಸ್ಲಿಮರಷ್ಟೇ ಒಪ್ಪಿಕೊಂಡರು. ದೇಶದ ಬಹುಸಂಖ್ಯಾತ ಮುಸ್ಲಿಮರು ಇದನ್ನು ಅನುಮೋದಿಸಲಿಲ್ಲ. '1947ರಲ್ಲೇ ಮುಸ್ಲಿಂ ನಾಯಕರು ಹಿಂದೂ ದಾಳಿಯ ಬಗ್ಗೆ, ಹಿಂದೂ ಮಹಾ ಸಭಾ ಮತ್ತಿತರ ಸಂಘಟನೆಗಳ ನಾಯಕರು ಮುಸ್ಲಿಮರ ದಾಳಿಯ ಬಗ್ಗೆ ಅತಿರಂಜಿತ ಕತೆಗಳನ್ನು ಹಬ್ಬಿಸುತ್ತಾ ಸಮೂಹ ಸನ್ನಿಯೊಂದು ಅಡ್ಡಡ್ಡ ಹರಡಲು ಕಾರಣವಾದರು. ಖ್ಯಾತ ಬರಹಗಾರ ನೀರದ್ ಚೌಧರಿ ಇಂಥಾ ಮಾರಣ ಹೋಮವನ್ನು ಕಣ್ಣಾರೆ ಕಂಡಿದ್ದರು. ನೀರದ್ ಚೌಧರಿ ಅವರ ಬರಹದ ತುಣುಕು ನೋಡಿ: 'ಒಬ್ಬ ವ್ಯಕ್ತಿಯನ್ನು ಕಂಬಕ್ಕೆ ಕಟ್ಟಿ ತಲೆಗೆ ಸಣ್ಣ ತೂತು ಮಾಡಿ ಆತ ನಿಧಾನಕ್ಕೆ ಸಾಯುವುದನ್ನು ಜನರ ಗುಂಪು ನೋಡುತ್ತಾ ನಿಂತಿತ್ತು. ಇನ್ನೊಂದೆಡೆ ಹದಿನಾಲ್ಕರ ಹರೆಯದ ಹುಡುಗನನ್ನು ಬೆತ್ತಲೆ ನಿಲ್ಲಿಸಿ ಆತ ಮುಸ್ಲಿಂ ಎಂದು ಖಾತ್ರಿ ಮಾಡಿಕೊಂಡು, ಆತನನ್ನು ಕೆರೆಗೆ ತಳ್ಳಿ ಬಿದಿರು ಗಳದಲ್ಲಿ ಒತ್ತಿ ಹಿಡಿದು ಸಾಯಿಸಲಾಯಿತು. ಇಂಗ್ಲೆಂಡಿನಲ್ಲಿ ಓದಿ ಬಂದಿದ್ದ ಬಂಗಾಳಿ ಎಂಜಿನಿಯರ್ ಒಬ್ಬ ತನ್ನ ರೋಲೆಕ್ಸ್ ವಾಚಿನಲ್ಲಿ ಈ ಹುಡುಗ ಸಾಯಲು ಎಷ್ಟು ನಿಮಿಷ ತಗುಲಿತು ಎಂದು ನೋಡಿದ್ದ!'

ಗಮನಿಸಿ: ಸಾಯಲು ಎಷ್ಟು ಸಮಯ ಹಿಡಿಯಿತು ಎಂದು ನೋಡಿದವನು ಪರಮ ಶಿಕ್ಷಿತ. ಇಂಗ್ಲೆಂಡಿನಲ್ಲಿ ಓದಿ ಬಂದವನು. ಈ ದೇಶ ವಿಭಜನೆಯ ಹಿಂಸಾಚಾರವನ್ನು ಸಾಬರು ಮಾಡಿದ ಹಿಂಸಾಚಾರ ಎಂದು ಬಿಂಬಿಸುವುದೂ ಲೆಕ್ಕಾಚಾರದ ಕುಯುಕ್ತಿ. ಮೂಲತಃ ಈ ಕಣ್ಣಿಗೆ ಕಣ್ಣು ಎಂಬುದನ್ನು ಎರಡೂ ಕೋಮಿನ ಕಾಮಾಲೆ ಗಣ್ಣಿನ ನಾಯಕರು ಪೋಷಿಸಿದರು ಎಂಬುದನ್ನು ಮರೆಯಕೂಡದು.

ಈ ಎರಡು ದೇಶಗಳ ಸಿದ್ಧಾಂತವನ್ನು ಮೊದಲು ಸೃಷ್ಟಿಸಿದ್ದೇ ಸಾವರ್ಕರ್. ಆದರೆ ಅವರಿಗೆ ದೇಶ ವಿಭಜನೆ ಬೇಡ, ಅಖಂಡ ಭಾರತ ಇರಬೇಕು, ಅಲ್ಲಿ ಅಲ್ಪಸಂಖ್ಯಾತರು ಹಿಂದೂ ಆಡಳಿತದ ನಿರೀಕ್ಷೆಗೆ ತಕ್ಕಂತೆ ಬಾಳಬಹುದು ಎಂಬ ನಿಲುವು ಇತ್ತು!

ಅಮ್ತುಸ್ ಸಲಾಂ ಎಂಬ 23ರ ಯುವತಿಯು ಗಾಂಧಿಯ ಅನುಯಾಯಿಯಾಗಿ ಪ್ರಾಣ ಪಣಕ್ಕಿಟ್ಟು ನೌಖಾಲಿಯಲ್ಲಿ ಈ ಕೋಮು ದಳ್ಳುರಿಯನ್ನು ನಂದಿಸಲು 21 ದಿನಗಳ ಕಾಲ ಉಪವಾಸ ಹೂಡಿದ್ದರಿಂದ ನೌಖಾಲಿ ಮತ್ತು ಸುತ್ತ ಮುತ್ತಲಿನ ಮೂರು ಜಿಲ್ಲೆಗಳಲ್ಲಿ ಈ ಪಾಶವೀ ಹಿಂಸೆ, ಲೂಟಿ, ಅತ್ಯಾಚಾರಗಳು ನಿಂತು ಹೋದವಷ್ಟೇ ಅಲ್ಲ, ಇನ್ನೆಂದೂ ನಾವು ಇಂಥಾ ಬರ್ಬರ ಕೋಮು ದ್ವೇಷದ ಉನ್ಮಾದಕ್ಕೊಳಿಯುವುದಿಲ್ಲ ಎಂದು ಹಿಂದೂ-ಮುಸ್ಲಿಂ ನಾಯಕರು ವಚನವಿತ್ತರು. ಇಂಥಾ ಎಲ್ಲಾ ಹಿಂಸಾಚಾರಗಳಲ್ಲೂ ಇದರ ಆತ್ಯಂತಿಕ ಹಿಂಸೆ ಅನುಭವಿಸುವುದು ಮಹಿಳೆಯರೇ. ದೇಶ ವಿಭಜನೆಯ ಹಿಂಸಾಚಾರದಲ್ಲಿ ಅತ್ಯಂತ ಸೆಕ್ಯುಲರ್ ಆಗಿ ಮಹಿಳೆಯರ ಮೇಲೆ ಅತ್ಯಾಚಾರ ನಡೆದಿತ್ತು. ಕೋಮು ಪ್ರತೀಕಾರ ಎನ್ನುವುದು ನೆಪ. ಹೆಣ್ಣನ್ನು ಕಂಡ ತಕ್ಷಣ ಪಾಶವೀ ಕಾಮತೃಷೆ ನೀಗಿಸಿಕೊಳ್ಳುವುದು ಕೂಡಾ ಈ ಧರ್ಮದ ಸೇವೆಯ ಭಾಗವಾಗಿ ಹೋಯಿತು. ಇಂಥಾ ಮಹಿಳೆಯರಿಗೆ ಅಮ್ತುಸ್ ಸಲಾಂ ಪಟಿಯಾಲಾದ ಬಳಿ ಕಸ್ತೂರ್ ಬಾ ಮಂದಿರ್ ಎಂಬ ಪುನರ್ವಸತಿ ಕೇಂದ್ರ ಆರಂಭಿಸಿದ್ದರು. ಅವರಿಗೆ ಎಲ್ಲಾ ಧರ್ಮಗಳ ಹೆಂಗಸರು ಅತ್ಯಾಚಾರಕ್ಕೆ ಬಲಿಯಾಗುವ ಬಗೆ ಒಂದೇ ರೀತಿಯದ್ದು ಎಂದು ಗೊತ್ತಿತ್ತು.

ದೇಶ ವಿಭಜನೆಯ ಕಾಲದ ಕೋಮು ಹಿಂಸೆಯ ಕ್ರೌರ್ಯ ಹೇಗಿದ್ದಿರಬಹುದು ಎಂಬುದರ ಒಂದು ಝಲಕ್ ಗೋಧ್ರೋತ್ತರ ಹಿಂಸಾಚಾರದಲ್ಲಿ ನಮಗೆ ಕಂಡಿದೆ! ಮೋದಿ ತಮ್ಮ ಉದ್ದೇಶಪೂರ್ವಕ ನಿಷ್ಕ್ರಿಯತೆಯ ಮೂಲಕ ಈ ಹಿಂಸಾಚಾರವನ್ನು ವ್ಯಾಪಕಗೊಳಿಸಿದರು. ಸುಹ್ರವರ್ದಿ 1946ರಲ್ಲಿ ಕಲ್ಕತ್ತಾದಲ್ಲಿ ಇದೇ ರೀತಿಯ ಉದ್ದೇಶಪೂರ್ವಕ ನಿರ್ಲಕ್ಷ್ಯ ತೋರಿ ಸಾವಿರಾರು ಮಂದಿಯ ಮಾರಣ ಹೋಮಕ್ಕೆ ಕಾರಣರಾಗಿದ್ದರು. ಅಷ್ಟೇಕೆ, 'ಒಂದು ದೊಡ್ಡ ಧ್ಯೇಯಕ್ಕೆ ಇಂಥಾ ಬಲಿ ಅನಿವಾರ್ಯ' ಎಂದು ಹೇಳುವ ಭಂಡತನ ತೋರಿದ್ದರು. ಆದ್ದರಿಂದಲೇ ಮೋದಿಯವರು ಈ ಕೋಮು ಹಿಂಸೆಯ ದುರಂತವನ್ನು ಈಗಿನ ತಲೆಮಾರಿಗೆ ತಿಳಿಸಲು ದೇಶ ವಿಭಜನೆಯ ಕತೆಗಳನ್ನಷ್ಟೇ ಅಲ್ಲ, ಗೋಧ್ರೋತ್ತರ ಹಿಂಸಾಚಾರದ ಉದಾಹರಣೆಯನ್ನೂ ತಮ್ಮ ಸಿಲೆಬಸ್ಸಿನಲ್ಲಿ ಸೇರಿಸಿಕೊಳ್ಳಬೇಕು. ನೋವು ಮರೆತು ಬದುಕು ಕಟ್ಟಿಕೊಳ್ಳಲು ನೋಡುತ್ತಿರುವ ದೇಶದ ಮನಸ್ಸಿಗೆ ಮತ್ತೆ ಹುಳಿ ಹಿಂಡುವ ಕೆಲಸ ಮಾಡುವ ನಾಯಕ ನಾಯಕನೇ ಅಲ್ಲ, ಅಧಿಕಾರದ ವಿಕೃತ ಲಾಲಸಿ ಅಷ್ಟೇ.


ಲೇಖಕ: ಸಾಮಾಜಿಕ ವಿಶ್ಲೇಷಕ

ಪದಬಂಧ 4695

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಯುದ್ಧದ ನಗಾರಿಯಿದು (4)
3.ನಿರಾಕರಿಸಲು ಯೋಗ್ಯವಾದುದು (4)
5.ಪವಿತ್ರ ಎಂದು ಹೀಗೆ ಹೇಳಿರಿ (3)
6.ಬೆಟ್ಟದ ಮಗ್ಗುಲು (3)
8.ಜನಜನಿತವಾಗಿ ಬಂದ ನಂಬಿಕೆ (3)
9.ಸೀತೆಯ ತಂದೆ (3)
10.ಹಣೆಗಿರಿಸುವ ಬೊಟ್ಟು (3)
12.ಮಾನವಂತನಿಗೆ ಮಾಡಿದ ಮನ್ನಣೆ (3)
14.ಹೆದರಿಕೆಯನ್ನುಂಟು ಮಾಡುವುದು (4)
15.ರುಚಿಕಟ್ಟಾದ ಅಡುಗೆಯಿದು (4)

ಮೇಲಿಂದ ಕೆಳಕ್ಕೆ
1.ಈತ ಸೂರ್ಯನ ಮಗ (4)
2.ಕುದುರೆಯನ್ನೇರುವ ಬಳೆ (3)
3.ಇದು ಅನುಮಾನಕ್ಕೆಡೆಯಿಲ್ಲದ್ದು (3)
4.ಮೊದಲಿದ್ದ ಹಾಗೆ ಎಂದು ಈ ರೀತಿ ಹೇಳಬಹುದು (4)
7.ಜಿಪುಣ ಇಲ್ಲಿದ್ದಾನೆ (3)
8.ಗತಿಯಲ್ಲಿ ಕೊನೆಗೊಂಡಿರುವ ಏಳಿಗೆ (3)
9.ಗೆಲುವಿನ ನೆನಪಿಗಾಗಿ ನೆಡುವ ಕಂಬ (4)
11.ಕನ್ನಡಿಗರ ಹೆಮ್ಮೆಯ ನಾಡಿದು (4)
12.ಕೊನೆಗೆ ಬೆಲೆಯನ್ನಿಟ್ಟು ತೋರಿದ ಸಲಿಗೆ (3)
13.ನೃತ್ಯವನ್ನು ಹೀಗೆ ಹೇಳಿ (3)



4694ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಸಮುದ್ರಯಾನ 4.ಪಾವತಿ
5.ರಥಿಕ 9.ಮಾಹೆ 10.ಜಕಾತಿ
11.ನಾರಿ 12.ಕರ್ತಾರ
15.ಸಲಗ
16.ಸುಮನೋಹರ

ಮೇಲಿಂದ ಕೆಳಕ್ಕೆ:
1.ಮುದ್ರಣ
2.ಸತಿ 3.ನರ 4.ಪಾರಮಾರ್ಥಿಕ
6.ಕಸ್ತೂರಿಮೃಗ 7.ಗುಜರಿ
8.ವಂತಿಗೆ 13.ರಸು 14.ವಿನೋದ
15.ಸರ

ಸುಡೊಕು 5081

			4		3	9	6	
7		8						5
4			5		8	7		1
		9						7
	3	7	1		6	4	5	
8						2	1	
6		5		2			3	4
3						5		2
	8	2		5			7	


5080 ಸುಡೊಕು

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

ಗುಂಡಣ್ಣ



ದಿನ ಭವಿಷ್ಯ

ಶನಿವಾರ ಆಗಸ್ಟ್ 21, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಶ್ರಾವಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಮಖಾ ಚತುರ್ದಶಿ ಗಂ. 30-11 (ಸಾ. 6-19) ಶನಿವಾರ ನಿತ್ಯ ನಕ್ಷತ್ರ ಶ್ರವಣ ಗಂ. 36-23 (ರಾ. 8-48) ಸೌಭಾಗ್ಯ ನಾಮ ಯೋಗ ಗಂ. 19-51 ಗರಜ ಕರಣ ಗಂ. 2-11 ಉಪರಿ ವಣಿಜ ಕರಣ ಗಂ. 28-0 ವಿಷ ಗಂ. 46-9 ಅಮೃತ ಗಂ. 11-36 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00 : ಸೂರ್ಯೋದಯ: 6-11 ಸೂರ್ಯಾಸ್ತ: 6-34 ಅದೃಷ್ಟ ಸಂಖ್ಯೆ 4, 9

ಮೇಷ: ಬಟ್ಟೆ ಹಾಗೂ ಲೋಹ ವ್ಯಾಪಾರ ಮಾಡುವವರಿಗೆ ವಿಶೇಷ ಆದಾಯ. ಹಣಕಾಸು ಸಂಸ್ಥೆಗಳ ಅಧಿಕಾರಿಗಳ ವ್ಯತಿರಿಕ್ತ ಸಲಹೆಯಿಂದಾಗಿ ನಷ್ಟ ಅನುಭವಿಸುವ ಸಾಧ್ಯತೆ. ಲೇವಾದೇವಿದಾರರಿಗೆ ವಿಶೇಷ ಲಾಭದ ನಿರೀಕ್ಷೆ.

ವೃಷಭ: ತರಕಾರಿ ಹಣ್ಣುಗಳ ವ್ಯಾಪಾರಸ್ಥರಿಗೆ ಬಹು ಬೇಡಿಕೆಯಿಂದಾಗಿ ಅಧಿಕ ಲಾಭ. ಪತ್ನಿ ವರ್ಗದವರ ಮನೆಗಳಿಗೆ ಕುಟುಂಬ ಸಮೇತರಾಗಿ ಭೇಟಿ ನೀಡುವ ಸಾಧ್ಯತೆ. ಧಾನ್ಯ ವ್ಯಾಪಾರಸ್ಥರಿಗೆ ವ್ಯವಹಾರದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ.

ಮಿಥುನ: ಉದ್ಯೋಗದಲ್ಲಿ ಬದಲಾವಣೆ ನಿರೀಕ್ಷೆ. ನೆರೆಹೊರೆಯವರೊಂದಿಗೆ ವಿರಸ ತಲೆದೋರಬಹುದು. ಸಂಗಾತಿಗೆ ಭಾಗ್ಯೋದಯವಾಗುವ ಸಾಧ್ಯತೆ ಇದೆ. ಉದ್ಯಮ ಸ್ಥಳದಲ್ಲಿ ನವೀಕರಣ ಅಥವಾ ಬದಲಾವಣೆ ಮಾಡಲಿದ್ದೀರಿ.

ಕರ್ಕಾಟಕ: ತುರ್ತುವಿಷಯಕ್ಕಾಗಿ ಸಂಬಂಧಿಕರ ನೆರವು ಪಡೆಯಬೇಕಾದೀತು. ಸಂಸಾರದಲ್ಲಿ ನೆಮ್ಮದಿ. ಅನಗತ್ಯ ಸುತ್ತಾಟದಿಂದಾಗಿ ದೇಹಾಲಸ್ಯ. ಗುರುದೇವತಾ ದರ್ಶನ ಮಾಡುವ ಸಾಧ್ಯತೆ ಕಂಡುಬರುವುದು.

ಸಿಂಹ: ಸಮಸ್ಯೆಗಳಿಗೆ ಪರಹಾರ ಕಂಡುಕೊಳ್ಳುವಿರಿ. ತೈಲ ವ್ಯಾಪಾರಿಗಳಿಗೆ ವ್ಯವಹಾರದ ವೃದ್ಧಿಯಿಂದಾಗಿ ಅಧಿಕ ಧನಲಾಭ. ಲೆಕ್ಕಪತ್ರಗಳನ್ನು ಮರುಪರಿಶೀಲನೆಗೆ ಒಳಪಡಿಸಬೇಕಾದ ಅನಿವಾರ್ಯತೆ ತಲೆದೋರೀತು.

ಕನ್ಯಾ: ರಾಜಕೀಯ ವ್ಯಕ್ತಿಗಳಿಗೆ ಆಶಾದಾಯಕ ದಿನ. ಸರ್ಕಾರಿ ಹುದ್ದೆಯಲ್ಲಿರುವವರು ಭ್ರಷ್ಟಾಚಾರದ ಆರೋಪವನ್ನು ಎದುರಿಸಬೇಕಾದೀತು. ವಿಚಾರಣೆ ವೇಳೆಯಲ್ಲಿ ಸಂಯಮದಿಂದಾಗಿ ಎಲ್ಲವೂ ನಿರಾಳವಾಗಲಿವೆ.

ತುಲಾ: ಆಮದು ರಫ್ತು ವ್ಯವಹಾರದಲ್ಲಿ ತೊಡಗಿಕೊಂಡಿರುವವರಿಗೆ ಉತ್ತಮ ಲಾಭ. ಪಾಲುಗಾರಿಕೆ ವ್ಯವಹಾರ ಸ್ವಲ್ಪಮಟ್ಟಿನ ಇರುಸುಮುರುಸು ತರುವ ಸಾಧ್ಯತೆ. ಉದ್ಯೋಗಸ್ಥರಿಗೆ ಒಳ್ಳೆಯ ಸುದ್ದಿಯನ್ನು ಕೇಳುವ ಅವಕಾಶ.

ವೃಶ್ಚಿಕ: ಉದ್ಯೋಗ ಕ್ಷೇತ್ರದಿಂದ ಒಳ್ಳೆಯ ಸುದ್ದಿಯೊಂದನ್ನು ಕೇಳಲಿದ್ದೀರಿ. ಅತಿಯಾದ ಕಾರ್ಯಬಾಹುಳ್ಯದಿಂದಾಗಿ ಕೌಟುಂಬಿಕ ವಿರಸ ಮೂಡುವ ಸಾಧ್ಯತೆ. ಮಕ್ಕಳು ಉದ್ಯೋಗ ನಿಮಿತ್ತ ವಿದೇಶ ಪ್ರಯಾಣ ಮಾಡುವ ಸಾಧ್ಯತೆ.

ಧನು: ಪ್ರಗತಿಯಲ್ಲಿರುವ ಮನೆಯ ಕೆಲಸಗಳು ಪೂರ್ಣಗೊಂಡು ನೆಮ್ಮದಿ. ಮಕ್ಕಳಿಗೆ ವಿವಾಹ ವಿಷಯದಲ್ಲಿ ನೆಂಟರಿಂದ ಒತ್ತಾಯ ಪೂರ್ವಕ ಪ್ರಸ್ತಾಪಗಳು ಬರಲಿವೆ. ಸಾಲದಿಂದ ಮುಕ್ತಿ ಹೊಂದಿ ನಿರಾಳತೆ.


ಮಕರ: ಅಡೆತಡೆಗಳ ನಡುವೆಯೂ ಶುಭಕಾರ್ಯಗಳನ್ನು ನೆರವೇರಿಸಲಿದ್ದೀರಿ. ವಿಮಾ ಅಧಿಕಾರಿಗಳಿಗೆ ಸ್ಥಾನ ಬದಲಾವಣೆ. ಔಷಧ ತಯಾರಕರು, ಬಣ್ಣ ಮುಂತಾದ ರಾಸಾಯನಿಕ ವಸ್ತುಗಳ ವ್ಯವಹಾರಗಳಲ್ಲಿ ತೊಡಗಿದವರಿಗೆ ಲಾಭ.

ಕುಂಭ: ಸಂಗಾತಿಗೆ ನೆರೆಹೊರೆಯವರಿಂದ ಸ್ವಲ್ಪಮಟ್ಟಿನ ಪ್ರತಿರೋಧ. ನವೀನ ವ್ಯವಹಾರವೊಂದರಲ್ಲಿ ಹಣ ವಿನಿಯೋಗ ಮಾಡಲಿದ್ದೀರಿ. ಹೊಸ ಉದ್ಯಮವು ಶ್ರೇಯಸ್ಸನ್ನುಂಟು ಮಾಡಲಿದೆ. ಧಾರ್ಮಿಕ ಕಾರ್ಯಗಳಿಗಾಗಿ ಧನ ವಿನಿಯೋಗ.

ಮೀನ: ಅಧಿಕಾರಿಗಳ ಅಸಹಕಾರದಿಂದಾಗಿ ಸರ್ಕಾರದಿಂದಾಗಬೇಕಾದ ಕೆಲಸಗಳು ವಿಳಂಬವಾಗುವ ಸಾಧ್ಯತೆ. ನಿರಾಸೆಯ ಮಧ್ಯೆ ಆಸೆಯ ಸೆಳವೊಂದು ಕಂಡುಬರಲಿದೆ.

ನಿಮ್ಮ ಜನ್ಮದಿನ 21-ಆಗಸ್ಟ್ ಇಂದು ಅತ್ಯಂತ ಶುಭದಾಯಕ. ಈಷ್ಟಾನಿಷ್ಟಗಳ ಅರಿವು ಇರುವುದರಿಂದ ಉತ್ತಮ ಕೆಲಸಗಳನ್ನು ಕೈಗೆತ್ತಿಕೊಂಡು ನಿಧಾನವಾಗಿ ಯಶಸ್ಸನ್ನು ಸಾಧಿಸಲಿದ್ದೀರಿ. ಸಮಾಜದ ಏಳ್ಗೆಗಾಗಿ ಕೈಗೊಂಡ ಕಾರ್ಯಗಳಲ್ಲಿ ಏಳ್ಗೆ ಸಹಿಸದವರಿಂದ ಸ್ವಲ್ಪಮಟ್ಟಿನ ವಿರೋಧ. ಮನೆಯವರಿಂದ ಹಿತ ವಚನಗಳು ಕೇಳಿಬರಲಿವೆ. ದಾಂಪತ್ಯದಲ್ಲಿ ಸಾಮರಸ್ಯ.

ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	16,568
ಇಂದಿನ ಅಂತ್ಯ	16,450
▼	118
ದಿನದ ಗರಿಷ್ಠ	16,509

ವಿನಿಮಯ ದರ

$ ಡಾಲರ್	74.39
£ ಪೌಂಡ್	101.29
€ ಯುರೊ	86.84
¥ ಯೆನ್ (100ಕ್ಕೆ)	67.68

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹435
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹435

ಮುಂಬೈ ಧಾರಣೆ

ಶೇಂಗಾ

20-8-2021

ಜಾವಾ 70/80(ಹೊಸ)	10100-10150
ಜಾವಾ 80/90(ಹೊಸ)	9200-9250
ದಪ್ಪ ಮಧ್ಯಪ್ರದೇಶ(ಹೊಸ)	9700-9750
ದಪ್ಪ ಗುಜರಾತ್(ಹೊಸ)	9450-9500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1550)
ಒಂದು ವಾರದ ಡೆಲಿವರಿ	1545 (1545)
ಸೋಯಾ ಕಚ್ಚಾ	1370 (1380)
ಪಾಮ್ ವಾರದ ಡೆಲಿವರಿ	1263(1266)
ಸೂರ್ಯಕಾಂತಿ ಎಣ್ಣೆ ಕಚ್ಚಾ	1430 (1430)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
47,100 (47,175)
ಬೆಳ್ಳಿ ಕೆ.ಜಿ
62,150 (62,575)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ

ಕೂಳೆ	600-6500
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರುಅತಿಉತ್ತಮ	1300-1400
ಕಾಳು ಮೆಣಸು	400

ರೇಷ್ಮೆಗೂಡು ಮಾರುಕಟ್ಟೆ ರಾಮನಗರ

ಮಿಶ್ರ ತಳಿ: 288-411
ದ್ವಿತಳಿ; 355-528

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ ಮುದ್ರೆಮನೆ	ಹಾಸನ ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13,550	12,500	12,425	179.70ಸೆಂಟ್ಸ್
ಎಸಿ	6,150	4,800	4,950	
ಆರ್‌ಪಿ	6,050	5,900	6,050	ಲಂಡನ್
ಆರ್‌ಸಿ	3,430	3,300	3450	1861ಡಾಲರ್ಸ್

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1540 (1540)
ಸೋಯಾ (ರಿಫೈನ್ಡ್)	₹1390(1400)
ಸೂರ್ಯಕಾಂತಿ (ರಿಫೈನ್ಡ್)	₹1480 (1500)
ಪಾಮೋಲಿನ್	₹1265 (1268)

ಮಾರುತಿ: 1,400 ಕಾರು ಹಸ್ತಾಂತರ

ಬೆಂಗಳೂರು: ವರಮಹಾಲಕ್ಷ್ಮಿ ಹಬ್ಬದ ದಿನ ಮಾರುತಿ ಸುಜುಕಿ ಕಂಪನಿಯು ರಾಜ್ಯದಲ್ಲಿ 1,400ಕ್ಕೂ ಹೆಚ್ಚಿನ ಕಾರುಗಳನ್ನು ಗ್ರಾಹಕರಿಗೆ ಹಸ್ತಾಂತರ ಮಾಡಿದೆ. ಸಿಎನ್‌ಜಿ ಪಂಪ್‌ಗಳ ಜಾಲವು ರಾಜ್ಯದಲ್ಲಿ ವಿಸ್ತರಣೆ ಕಾಣುತ್ತಿರುವ ಕಾರಣ, ಮಾರುತಿ ಸುಜುಕಿ ಕಂಪನಿಯ ಸಿಎನ್‌ಜಿ ಮಾದರಿಯ ಕಾರುಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಈಗ ರಾಜ್ಯದಲ್ಲಿ 50 ಸಿಎನ್‌ಜಿ ಪಂಪ್‌ಗಳು ಇವೆ. ಈ ಹಣಕಾಸು ವರ್ಷದ ಅಂತ್ಯದ ವೇಳೆಗೆ ಇದು ಐದು ಪಟ್ಟು ಹೆಚ್ಚಾಗುವ ನಿರೀಕ್ಷೆ ಇದೆ ಎಂದು ಕಂಪನಿಯ ಪ್ರಕಟಣೆ ಹೇಳಿದೆ. ಆಲ್ಟೊ, ಎಸ್‌ಪ್ರೆಸ್ಸೊ, ಸೆಲೆರಿಯೊ, ವ್ಯಾಗನ್‌ಆರ್, ಎರ್ಟಿಗಾ, ಇಕೊ, ಡಿಜೈರ್ ಟೂರ್ ಮತ್ತು ಸೂಪರ್ ಕ್ಯಾರಿ ಮಾದರಿಗಳಲ್ಲಿ ಸಿಎನ್‌ಜಿ ಆವೃತ್ತಿ ಕೂಡ ಲಭ್ಯ ಇದೆ.

ಹಾಲ್‌ಮಾರ್ಕ್ ವಿರೋಧಿಸಿ 23ರಂದು ಪ್ರತಿಭಟನೆ

ನವದೆಹಲಿ (ಪಿಟಿಐ): ಚಿನ್ನಾಭರಣಗಳಿಗೆ ಹಾಲ್‌ಮಾರ್ಕ್ ಕಡ್ಡಾಯ ಮಾಡಿರುವುದನ್ನು ವಿರೋಧಿಸಿ, ಚಿನ್ನಾಭರಣ ವ್ಯಾಪಾರಿಗಳು ಆಗಸ್ಟ್ 23ರಂದು ಸಾಂಕೇತಿಕ ಪ್ರತಿಭಟನೆ ನಡೆಸಲಿದ್ದಾರೆ.

ದೇಶದ ನಾಲ್ಕೂ ವಲಯಗಳ ಮುತ್ತು ಮತ್ತು ಆಭರಣ ಉದ್ಯಮದ 350ಕ್ಕೂ ಹೆಚ್ಚಿನ ಸಂಘಟನೆಗಳು ಈ ಪ್ರತಿಭಟನೆಗೆ ಬೆಂಬಲ ನೀಡಲಿವೆ ಎಂದು ಅಖಿಲ ಭಾರತ ಮುತ್ತು ಮತ್ತು ಆಭರಣ ಪರಿಷತ್ತು (ಜಿಜೆಸಿ) ಹೇಳಿದೆ.

ಸಮೃದ್ಧಿ ಸಂಭ್ರಮದ ಓಣಂ

● ಡಾ. ಪಲ್ಲವಿ ಹೆಗಡೆ



ಬಲಿಚಕ್ರವರ್ತಿ(ಮಾವೇಲಿ)ಯು ವಿಷ್ಣುಭಕ್ತಿಯನ್ನೂ ಮಹಾಬಲವನ್ನೂ ಪಡೆದಿದ್ದ ಜನಾನುರಾಗಿ ರಾಜ. ಅವನ ಆಳ್ವಿಕೆಯ ಕಾಲದಲ್ಲಿ ಪ್ರಜೆಗಳೆಲ್ಲಾ ಸುಖ-ಸಮೃದ್ಧಿ-ನೆಮ್ಮದಿಯಿಂದ ಇದ್ದರು ಎಂದು ಓಣಂಹಬ್ಬದ ಸಾಂಪ್ರದಾಯಿಕ ಹಾಡುಗಳು ನೆನಪಿಸುತ್ತವೆ. ಆದರೆ, ತನ್ನ ದಾನಗುಣದ ಬಗ್ಗೆ ಅಹಂಕಾರವನ್ನು ಇಟ್ಟುಕೊಂಡಿದ್ದನಂತೆ ಬಲಿರಾಜ. 'ವಾಮನ'ನ ಅವತಾರತಾಳಿ ವಟುವಿನ ರೂಪದಲ್ಲಿ ಮಹಾವಿಷ್ಣುವು ಬಲಿಚಕ್ರವರ್ತಿಯ ಬಳಿ ಮೂರು ಹೆಜ್ಜೆ ಭೂಮಿಯನ್ನು ದಾನವಾಗಿ ಬೇಡುತ್ತಾನೆ. ಭೂಲೋಕ, ಸುರಲೋಕವೆಲ್ಲಾ ಎರಡು ಹೆಜ್ಜೆಗೆ ವಾಮನ ಆವರಿಸುತ್ತಾನೆ. ನಮ್ರನಾದ ಬಲಿಯ ತಲೆಯ ಮೇಲೆ ಮೂರನೆಯ ಹೆಜ್ಜೆಯಿಡುತ್ತಾನೆ, ವಾಮನಾವತಾರಿ ಮಹಾವಿಷ್ಣು, 'ಇನ್ನು ಪಾತಾಳಲೋಕವನ್ನಾಳು' ಎಂದು ಬಲಿರಾಜನನ್ನು ಮಹಾವಿಷ್ಣುವು ನಿಯೋಜಿಸುತ್ತಾನೆ. ಪ್ರತಿವರ್ಷವೂ ತನ್ನ ಪ್ರಿಯಪ್ರಜೆಗಳ ಭೇಟಿಗಾಗಿ ಭೂಲೋಕಕ್ಕೆ ಬರಲು ಅವನಿಗೆ ಅವಕಾಶ ನೀಡಿ, 'ಜನರ ಹೃದಯಗಳಲ್ಲಿ ಶಾಶ್ವತನಾಗು' ಎಂದು ವರವನ್ನು ನೀಡುತ್ತಾನೆ. ಕೇರಳವಾಸಿಗಳಿಗೆ ಹೀಗೆ ತಮ್ಮ ಭೇಟಿಗಾಗಿ ಬರುವ ಚಕ್ರವರ್ತಿ ಬಲಿಯನ್ನು, ಅವನ ದೇವರಾದ ವಾಮನ ವಿಷ್ಣುವನ್ನು ಸ್ವಾಗತಿಸುವ, ನೆನಪಿಸಿಕೊಳ್ಳುವ ಕಾಲವೇ ಓಣಂ.

ಸಿಂಹ (ಚಿಂಗ ಮಾಸ)ರಾಶಿಯಲ್ಲಿ ಸೂರ್ಯನಿದ್ದಾಗ ಹಸ್ತಾದಿಂದ ಶ್ರವಣನಕ್ಷತ್ರದವರೆಗೆ ಹತ್ತು ದಿನಗಳೂ ಹಬ್ಬವೇ. ಈ ನಕ್ಷತ್ರಗಳ 'ಮಲಯಾಳಂನಾಳ್'ಗಳನ್ನೆ ಹತ್ತು ದಿನಗಳ ವೈವಿಧ್ಯಮಯ ಆಚರಣೆಗೆ ಸೂಚಿಸಲಾಗುತ್ತದೆ. ಜಾತಿ-ಮತ-ಅಂತಸ್ತುಗಳನ್ನೆಲ್ಲಾ ಮೀರಿ ಈ ಹಬ್ಬವನ್ನು ಸಂಭ್ರಮಿಸುತ್ತಾರೆ. ಅವರ ಸಂಪ್ರದಾಯ, ಅಡುಗೆಗಳು, ಕಳಿ(ಆಟ) – ಇವು ವೈವಿಧ್ಯಮಯ. ಉತ್ತರಕೇರಳ (ಕಾಸರಗೋಡು, ಕೋಯಿಕ್ಕೋಡ್), ಮಧ್ಯಕೇರಳ (ತ್ರಿಶೂರ್, ಎರ್ನಾಕುಳಂ, ಕೋಟಯಂ, ಆಲಪ್ಪುಳ) ಮತ್ತು ದಕ್ಷಿಣ ಕೇರಳ (ಕೊಲ್ಲಂ, ಪತ್ತನಂತಿಟ್ಟ, ತಿರುವನಂತಪುರ)ಗಳಲ್ಲಿ ಪ್ರಾದೇಶಿಕ ಭಿನ್ನತೆಯನ್ನು ಕಾಣಬಹುದು.

ಅತ್ತಂ(ಹಸ್ತಾ)ದಿನದಿಂದ ಓಣಂಹಬ್ಬದ ಆರಂಭ. ಬಲಿರಾಜನನ್ನು ಸ್ವಾಗತಿಸಲು ಹೂವಿನ ರಂಗವಲ್ಲಿ ಹಾಸು ಸಿದ್ಧವಾಗತೊಡಗುತ್ತದೆ. ಕೇರಳದ ಸ್ಥಾನಿಕ ಹೂಗಳಿಂದ, ವಿಶೇಷವಾಗಿ ಹೆಣ್ಣುಮಕ್ಕಳಿಂದ ರಚಿಸಲ್ಪಡುವ 'ಪೂಕ್ಕಳಂ' – ಹೂಪಕಳೆಗಳ ರಂಗೋಲಿಗಳು ಎಲ್ಲರ ಮನೆಯ ಚೊಕ್ಕವಾದ ಅಂಗಳದಲ್ಲಿ ಅರಳುವ ಆಕರ್ಷಕ ಕಲಾವಿಶೇಷ. ಮೊದಲ ದಿನ ಹಳದಿಹೂವುಗಳನ್ನು ಬಳಸಿ ವರ್ತುಲರಚನೆ. ಮುಂದಿನ ದಿನಗಳಲ್ಲಿ ಪ್ರತಿದಿನ ಒಂದೊಂದು ವೈವಿಧ್ಯಮಯ ಹೂಗಳ ಪರಿಧಿಯನ್ನು ವಿಸ್ತರಿಸಲಾಗುತ್ತದೆ. ಎರಡನೆಯ ದಿನ ಚಿತ್ತಿರ-(ಚಿತ್ತಾ ನಕ್ಷತ್ರ)ದಂದು ವಿಶೇಷವಾಗಿ ಮನೆಯನ್ನೆಲ್ಲಾ ಶುಚಿಗೊಳಿಸಿ, ಪೂಕ್ಕಳಂಗೆ ಮತ್ತೊಂದು ಹೂವಿನ ವರ್ತುಲವನ್ನು ಸೇರಿಸಲಾಗುತ್ತದೆ. ಚೋದಿ-(ಸ್ವಾತಿನಕ್ಷತ್ರ)ದಂದು ಮನೆಯ ಸದಸ್ಯರೆಲ್ಲಾ ಓಣಕ್ಕೋಡಿ(ಹಬ್ಬದ ಉಡುಗೆ-ಉಡುಗೊರೆ-ಆಭರಣ)ಗಳನ್ನು, ಅಡುಗೆಸಾಮಗ್ರಿಗಳನ್ನು ಖರೀದಿಸುವುದು, ಸಂಗ್ರಹಿಸುವುದು ವಿಶೇಷ. ವಿಶಾಗಂ (ವಿಶಾಖಾನಕ್ಷತ್ರ)ದಂದು ಓಣಂಸದ್ಯ (ಹಬ್ಬದ ಭೋಜನ)ಕ್ಕೆ ಅಡುಗೆಗಳು ಸಿದ್ಧವಾಗತೊಡಗುತ್ತವೆ. ವಿವಿಧ ಬಗೆಯ ಆಟಗಳು, ನೃತ್ಯಗಳು, ಸ್ಪರ್ಧೆಗಳು ಈ ದಿನದಿಂದ ಶುಭಾರಂಭ. ತಳಪಂದುಕಳಿ (ಚೆಂಡಿನಾಟ), ಅಂಬೆಯ್ಯಲ್ (ಬಿಲ್ಲಿನಾಟ), ಕುಡುಕುಡುಕುಡು, ಕಯ್ಯಾಂಕಳಿ, ಅತ್ತಕ್ಕಳಂ ಕಾಳಗದ ಆಟಗಳನ್ನು ಪುರುಷರು ಆಯ್ಕೆ ಮಾಡಿಕೊಳ್ಳುತ್ತಾರೆ. ಐದನೆಯ ದಿನ ಅನಿಳಂ - ಅನುರಾಧಾ ನಕ್ಷತ್ರದಂದು ವಳ್ಳಂಕಳಿ - ದೋಣಿಯಾಟ ಆರಂಭ. ಅತ್ಯಂತ ಪ್ರಸಿದ್ಧವಾದದ್ದು, ಪ್ರವಾಸಿಗರನ್ನು ಸೆಳೆಯುವ ಸ್ಪರ್ಧೆ ಎಂದರೆ ನೆಹರು ಬೋಟ್ ರೇಸ್ ಟ್ರೋಫಿ, ಅಪ್ಪುಳ ಸಾಲಂಕೃತಗೊಂಡ, ಹಾವಿನಾಕಾರದ ನೀಳದೋಣಿಯ ಸ್ಪರ್ಧೆ. ಒಂದು ದೋಣಿಯಲ್ಲಿ ನೂರಾದರೂ ಪುರುಷರ ಗುಂಪು ಒಗ್ಗೂಡಿ ಹುಟ್ಟು ತಿವಿಯುತ್ತಾ ದೋಣಿನಡೆಸುವ ಓಟ. ಪತ್ತನಂತಿಟ್ಟದ ಪಂಪಾನದಿಯಲ್ಲಿ ನಡೆಯುವ ಪಂದ್ಯವೂ ಪ್ರಸಿದ್ಧ. ಅಲ್ಲದೆ ಹಗಲು-ರಾತ್ರಿ ಪುಲಿಕಳಿ, ಕಥಕ್ಕಳಿ, ಉಯ್ಯಾಲೆ ಆಟ – ಹೀಗೆ ಹಲವು ಬಗೆಯ ಸಾಂಸ್ಕೃತಿಕ ಕಾರ್ಯಕ್ರಮಗಳು ಮನರಂಜಿಸುತ್ತವೆ, ಉತ್ಸಾಹನ್ನು ನೀಡುತ್ತವೆ. ತ್ರಿಕೇಟ - ಜ್ಯೇಷ್ಠಾ ನಕ್ಷತ್ರದಂದು ಪೂಕ್ಕಳಂನ ವರ್ತುಲ ಮತ್ತಷ್ಟು ವಿಸ್ತಾರ, ವರ್ಣಮಯಗೊಳ್ಳುತ್ತದೆ. ಮೂಲಂ - ಮೂಲಾ ನಕ್ಷತ್ರದಂದು ಓಣಂನ ಭೋಜನದ ತಯಾರಿಯು ಮುಗಿಯುತ್ತಾ ಬಂದಿರುತ್ತದೆ. ಎಂಟನೆಯ ಪೂರಾಡಂ - ಪೂರ್ವಾಷಾಢದಂದು ವಾಮನ-ಮಹಾಬಲಿಯರ ಸ್ಥಾಪನೆ. ಪಿರಮಿಡ್ ಆಕಾರದ ಗೋಮಯದಿಂದ ಮಾಡಲ್ಪಟ್ಟ ಎರಡು ಮೂರ್ತಿಗಳನ್ನು ಪೂಕ್ಕಳಂ ಮಧ್ಯೆ ಸ್ಥಾಪಿಸಲಾಗುತ್ತದೆ. ಒಂಬತ್ತನೆಯ ದಿನ ಉತ್ರಾಡಂ - ಉತ್ತರಾಷಾಢದಂದು ಮಹಾಬಲಿಯು ಎಲ್ಲರ ಮನೆಗೆ ಭೇಟಿ ಕೊಡುವವನೆಂದು ನಂಬಲಾಗುತ್ತದೆ. ಹಾಗಾಗಿ ಪೂಕ್ಕಳಂ, ವಿಳಕ್ಕು(ದೀಪ)ಗಳ ಅಲಂಕಾರವು ವಿಶೇಷ.

ತಿರು ಓಣಂ - ಶ್ರವಣದಂದು ಹತ್ತನೆಯ ದಿನ ವಿಜೇತರಿಗೆ ಸನ್ಮಾನ, ಆರಾಧನೆ, ಭೋಜನ – ಹೀಗೆ ಮಾವೇಲಿಯ ನೆನಪಲ್ಲಿ ಸಮೃದ್ಧಿಯನ್ನು ಅನುಭವಿಸುತ್ತಾರೆ. ಹಾಲ್ಕೆನೆ ಬಣ್ಣದ ಹತ್ತಿಯ ಸೀರೆ-ರವಿಕೆ, ಬಿಳಿ/ ಹಾಲ್ಕೆನೆ ಬಣ್ಣದ ಹತ್ತಿಯ ಮುಂಡು-ಶರ್ಟ್ ವಿಶೇಷ ಉಡುಗೆಗಳು. ❖

ಸಾಲ ಪಡೆಯಲು ಫೇಸ್‌ಬುಕ್ ನೆರವು

ನವದೆಹಲಿ (ಪಿಟಿಐ/ರಾಯಿಟರ್ಸ್): ಫೇಸ್‌ಬುಕ್ ಕಂಪನಿಯು ತನ್ನ ಮೂಲಕ ಜಾಹೀರಾತು ನೀಡುವ ಸಣ್ಣ ಮತ್ತು ಮಧ್ಯಮ ಪ್ರಮಾಣದ ವರ್ತಕರಿಗೆ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ನೆರವಾಗಲಿದೆ. ದೇಶದ 200 ನಗರಗಳಲ್ಲಿ ಈ ಯೋಜನೆ ಜಾರಿಗೆ ಬಂದಿದೆ.

ವರ್ತಕರಿಗೆ ₹ 5 ಲಕ್ಷದಿಂದ ₹ 50 ಲಕ್ಷದವರೆಗಿನ ಸಾಲವನ್ನು ನೀಡಲು ಫೇಸ್‌ಬುಕ್ ಕಂಪನಿಯು ಇಂಡಿಫೈ ಕಂಪನಿಯ ಜೊತೆ ಕೈಜೋಡಿಸಿದೆ. ಈ ಸಾಲಕ್ಕೆ ವಾರ್ಷಿಕ ಶೇಕಡ 20ರವರೆಗೆ ಬಡ್ಡಿ ನಿಗದಿ ಮಾಡಲಾಗುತ್ತದೆ ಎಂದು ಫೇಸ್‌ಬುಕ್‌ನ ಭಾರತದ ವ್ಯವಹಾರಗಳ ವ್ಯವಸ್ಥಾಪಕ ನಿರ್ದೇಶಕ ಅಜಿತ್ ಮೋಹನ್ ಅವರು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಸಾಲವಾಗಿ ಪಡೆದ ಹಣವನ್ನು ವರ್ತಕರು ಫೇಸ್‌ಬುಕ್‌ನಲ್ಲಿ ಜಾಹೀರಾತು ನೀಡಲು ಬಳಸಬೇಕು ಎಂಬ ಷರತ್ತು ಇರುವುದಿಲ್ಲ ಎಂದು ಅವರು ಹೇಳಿದರು.

ವರ್ತಕರಿಗೆ ಸಾಲ ನೀಡಬೇಕೇ ಎಂಬ ತೀರ್ಮಾನವನ್ನು ಇಂಡಿಫೈ ಕಂಪನಿ ಕೈಗೊಳ್ಳಲಿದೆ. ಆದರೆ, ವರ್ತಕರು ಹಾಗೂ ಸಾಲ ನೀಡುವ ಕಂಪನಿಯ ನಡುವೆ ಫೇಸ್‌ಬುಕ್ ಸಂಪರ್ಕ ಕಲ್ಪಿಸಿಕೊಡಲಿದೆ.

'ಈ ಯೋಜನೆಯಿಂದ ನಾವು ಹಣ ಮಾಡಲು ಯೋಚಿಸುತ್ತಿಲ್ಲ. ಇದರಲ್ಲಿ ನಾವು ಲಾಭದ ಪಾಲು ಪಡೆಯುತ್ತಿಲ್ಲ. ಆದರೆ, ಈ ಯೋಜನೆಯಿಂದ ಉದ್ಯಮ ವಲಯದಲ್ಲಿ ಬೆಳವಣಿಗೆ ಆಗುತ್ತದೆ. ಅದು ಕಾಲಕ್ರಮೇಣ ನಮಗೂ ಪ್ರಯೋಜನ ತಂದುಕೊಡುತ್ತದೆ ಎಂದು ಆಶಿಸಿದ್ದೇವೆ' ಎಂದು ಮೋಹನ್ ತಿಳಿಸಿದರು. ಸಾಲ ಕೊಡುವ ಈ ಯೋಜನೆಗೆ ಫೇಸ್‌ಬುಕ್ ಹಣ ಹೂಡಿಕೆ ಮಾಡಿಲ್ಲ.

ಫೇಸ್‌ಬುಕ್ ಮೂಲಕ ಅಥವಾ ಫೇಸ್‌ಬುಕ್ ಸಮೂಹಕ್ಕೆ ಸೇರಿದ ಯಾವುದೇ ಆ್ಯಪ್ ಮೂಲಕ ಕನಿಷ್ಠ 180 ದಿನಗಳಿಂದ ಜಾಹೀರಾತು ನೀಡುತ್ತಿರುವ ಸಣ್ಣ ಉದ್ದಿಮೆಗಳಿಗೆ ಈ ಸಾಲ ಸೌಲಭ್ಯ ಸಿಗಲಿದೆ. ಹೊಸ ಯೋಜನೆಯು ಇನ್ನಷ್ಟು ಉದ್ದಿಮೆಗಳು ಈ ಸಾಮಾಜಿಕ ಜಾಲತಾಣಗಳ ಮೂಲಕ ಜಾಹೀರಾತು ನೀಡಲು ನೆರವಾಗಬಹುದು. ಮಹಿಳೆಯರಿಗೆ ಸಾಲದ ಮೇಲಿನ ಬಡ್ಡಿ ದರದಲ್ಲಿ ಶೇ 0.2ರಷ್ಟು ವಿನಾಯಿತಿ ಇರಲಿದೆ.

ಫೇಸ್‌ಬುಕ್‌ಗೆ ಭಾರತದಲ್ಲಿ 41 ಕೋಟಿಗೂ ಹೆಚ್ಚಿನ ಬಳಕೆದಾರರು ಇದ್ದಾರೆ. ವಾಟ್ಸ್‌ಆ್ಯಪ್ ಬಳಕೆದಾರರು ಭಾರತದಲ್ಲಿ 53 ಕೋಟಿಗೂ ಹೆಚ್ಚು ಇದ್ದಾರೆ. ಇದು ವಾಟ್ಸ್‌ಆ್ಯಪ್‌ಗೆ ಇರುವ ಅತಿದೊಡ್ಡ ಮಾರುಕಟ್ಟೆ. ಇನ್‌ಸ್ಟಾಗ್ರಾಂ ಬಳಕೆದಾರರ ಸಂಖ್ಯೆ ಭಾರತದಲ್ಲಿ 21 ಕೋಟಿಗಿಂತ ಹೆಚ್ಚಿದೆ.

ವಾಟ್ಸ್‌ಆ್ಯಪ್ ಕಂಪನಿಯು ಬ್ಯಾಂಕ್‌ಗಳ ಜೊತೆ ಸಂಬಂಧವನ್ನು ಇನ್ನಷ್ಟು ಬಲಪಡಿಸಿಕೊಂಡು, ಪಿಂಚಣಿ ಹಾಗೂ ವಿಮಾ ಸೌಲಭ್ಯವನ್ನು ತನ್ನ ಮೂಲಕ ಗ್ರಾಹಕರಿಗೆ ತಲುಪಿಸುವ ಗುರಿ ಹೊಂದಿದೆ.

'₹ 24.5 ಲಕ್ಷ ಕೋಟಿಗೆ ಡಿಜಿಟಲ್ ಉದ್ಯಮ ವಹಿವಾಟು'

ಮೈಸೂರು: 'ರಾಜ್ಯದ ಡಿಜಿಟಲ್ ಉದ್ಯಮದ ವಹಿವಾಟು 2025ರ ವೇಳೆಗೆ ₹ 24.5 ಲಕ್ಷ ಕೋಟಿ ತಲುಪಬೇಕೆಂಬ ಗುರಿ ಇದೆ' ಎಂದು ಐ.ಟಿ., ಬಿ.ಟಿ. ಮತ್ತು ತಂತ್ರಜ್ಞಾನ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಇಲ್ಲಿನ ಹೆಬ್ಬಾಳ ಕೈಗಾರಿಕಾ ಪ್ರದೇಶದ ಸಿಲ್ವರ್ ಸ್ಪಿರಿಟ್ ಟೆಕ್ನಾಲಜಿ ಪಾರ್ಕ್‌ನಲ್ಲಿ ಶುಕ್ರವಾರ 'ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್'ನ ಮೈಸೂರು ಕಚೇರಿ ಉದ್ಘಾಟಿಸಿ ಅವರು ಮಾತನಾಡಿದರು.

'ಭಾರತದ ಡಿಜಿಟಲ್ ಉದ್ಯಮದ ವಹಿವಾಟು ₹ 74 ಲಕ್ಷ ಕೋಟಿ ಆಗಬೇಕೆಂಬು ಪ್ರಧಾನಿ ಗುರಿಗೆ ಪೂರಕವಾಗಿ ರಾಜ್ಯದ ವಹಿವಾಟನ್ನೂ ಹೆಚ್ಚಿಸಲು ಪ್ರಯತ್ನಿಸಲಾಗುವುದು' ಎಂದರು.

'ಡಿಜಿಟಲ್ ಎಕಾನಮಿ ಮಿಷನ್ ಮೂಲಕ ಮೈಸೂರು, ಮಂಗಳೂರು, ಹುಬ್ಬಳ್ಳಿ, ಬೆಳಗಾವಿ, ಶಿವಮೊಗ್ಗದಂಥ 2ನೇ ಹಂತದ ನಗರಗಳಲ್ಲಿ ಹೆಚ್ಚು ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿಯಾಗಲಿದೆ' ಎಂದು ಹೇಳಿದರು.

ಸೆನ್ಸೆಕ್ಸ್ 300 ಅಂಶ ಇಳಿಕೆ

ಮುಂಬೈ (ಪಿಟಿಐ): ಷೇರು ಮಾರುಕಟ್ಟೆ ಸೂಚ್ಯಂಕಗಳು ಸತತ ಎರಡನೆಯ ದಿನವೂ ಇಳಿಮುಖವಾಗಿದ್ದವು. ಜಾಗತಿಕ ಮಾರುಕಟ್ಟೆಗಳಲ್ಲಿ ನಕಾರಾತ್ಮಕ ವಹಿವಾಟು ನಡೆದ ಪರಿಣಾಮವಾಗಿ, ಶುಕ್ರವಾರ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 300 ಅಂಶ ಇಳಿಕೆ ಕಂಡಿತು.

ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 118 ಅಂಶ ಕುಸಿತ ದಾಖಲಿಸಿತು. ಸೆನ್ಸೆಕ್ಸ್‌ನಲ್ಲಿ ಟಾಟಾ ಸ್ಟೀಲ್ ಷೇರು ಮೌಲ್ಯ ಅತಿಹೆಚ್ಚು ಅಂದರೆ ಶೇ 8.27ರಷ್ಟು ಇಳಿಕೆ ಕಂಡಿತು. ಎಸ್‌ಬಿಐ, ಡಾ ರೆಡ್ಡೀಸ್, ಸನ್ ಫಾರ್ಮಾ, ಕೋಟಕ್ ಬ್ಯಾಂಕ್, ಎಲ್‌ಆ್ಯಂಡ್‌ಟಿ, ಬಜಾಜ್ ಆಟೊ ಷೇರುಗಳು ಕೂಡ ಇಳಿಕೆ ಕಂಡವು.

'ಕೊರೊನಾ ವೈರಾಣುವಿನ ಡೆಲ್ಟಾ ರೂಪಾಂತರಿ ತಳಿಯು ವೇಗವಾಗಿ ಹರಡುತ್ತಿರುವುದು ಕೂಡ ಜಾಗತಿಕ ಮಾರುಕಟ್ಟೆಗಳಲ್ಲಿ ಹೂಡಿಕೆದಾರರ ಉತ್ಸಾಹ ತಗ್ಗಲು ಕಾರಣವಾಯಿತು' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದರು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ ಶೇ 0.59ರಷ್ಟು ಇಳಿಕೆ ಆಗಿದ್ದು, 66.06 ಡಾಲರ್‌ಗೆ ತಲುಪಿದೆ. ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 15 ಪೈಸೆಯಷ್ಟು ಕಡಿಮೆ ಆಗಿದೆ.

ಸರ್ಕಾರಿ ಆಸ್ಪತ್ರೆ: ವೈದ್ಯರ ನಿಗಾಕ್ಕೆ ಕೋವಿಡ್ ಅಡ್ಡಿ !



ಬೆಂಗಳೂರು: ಸರ್ಕಾರಿ ಆಸ್ಪತ್ರೆಗಳಲ್ಲಿನ ವೈದ್ಯರು ಕರ್ತವ್ಯದ ವೇಳೆ ಗೈರಾಗುವುದನ್ನು ತಡೆಯಲು ಜಿಯೋ ಫೆನ್ಸಿಂಗ್ ತಂತ್ರಜ್ಞಾನ ಅಳವಡಿಸುವ ಯೋಜನೆಗೆ ಕೋವಿಡ್ ಅಡ್ಡಿಪಡಿಸಿದೆ.

ಸರ್ಕಾರಿ ಆಸ್ಪತ್ರೆಗಳಲ್ಲಿನ ಕೆಲ ವೈದ್ಯರು ಕರ್ತವ್ಯದ ವೇಳೆ ಗೈರಾಗುತ್ತಾರೆ ಎಂಬ ಆರೋಪಗಳು ಸಾರ್ವಜನಿಕ ವಲಯದಲ್ಲಿವೆ. ಅದೇ ರೀತಿ, ತಡವಾಗಿ ಆಸ್ಪತ್ರೆಗೆ ಬರುವುದು, ಮನೆಗೆ ಬೇಗ ತೆರಳುವುದು, ಸೇವಾ ಅವಧಿಯಲ್ಲಿ ವೈಯಕ್ತಿಕ ಕೆಲಸಗಳಲ್ಲಿ ನಿರತರಾಗಿರುವುದು ಹಾಗೂ ವಾರ್ಡ್‌ಗಳಿಗೆ ಹೋಗದಿರುವ ದೂರುಗಳಿವೆ. ಇದಕ್ಕೆ ಪರಿಹಾರ ಒದಗಿಸಲು ಆರೋಗ್ಯ ಇಲಾಖೆಯು 2019ರಲ್ಲಿ ಜಿಯೋ ಫೆನ್ಸಿಂಗ್ ತಂತ್ರಜ್ಞಾನ ಅಳವಡಿಕೆಗೆ ಯೋಜನೆ ರೂಪಿಸಿತ್ತು. ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ತಂತ್ರಜ್ಞಾನದ ನೆರವಿನಿಂದ ಹೊಸ ವ್ಯವಸ್ಥೆಯ ಜಾರಿಗೆ ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಆದರೆ, ಕೋವಿಡ್‌ನಿಂದಾಗಿ ಇದು ನನೆಗುದಿಗೆ ಬಿದ್ದಿದೆ.

ಹಾಜರಾತಿಗೆ ಇರಿಸಲಾಗಿದ್ದ ಬಯೋಮೆಟ್ರಿಕ್ ವ್ಯವಸ್ಥೆಯನ್ನೂ ಕೋವಿಡ್ ಕಾರಣಕ್ಕೆ ಸ್ಥಗಿತಮಾಡಲಾಗಿದೆ. ಇದರಿಂದಾಗಿ ಆಸ್ಪತ್ರೆಗಳಲ್ಲಿ ವೈದ್ಯರ ಬರುವಿಕೆ ಮತ್ತು ಹೋಗುವಿಕೆಯ ಸಮಯ ಡಿಜಿಟಲ್ ರೂಪದಲ್ಲಿ ದಾಖಲೀಕರಣವಾಗುತ್ತಿಲ್ಲ. ಹೀಗಾಗಿ, ವೈದ್ಯರ ಹಾಜರಾತಿ ನಿರ್ವಹಣೆ ಇಲಾಖೆಗೆ ತಲೆನೋವಾಗಿ ಪರಿಣಮಿಸಿದೆ.

ಕ್ಷೇತ್ರ ಕಾರ್ಯಕ್ಕೂ ಯೋಜನೆ: ಜಿಯೋ ಫೆನ್ಸಿಂಗ್ ವ್ಯವಸ್ಥೆ ಅಡಿ ಕ್ಷೇತ್ರ ಕಾರ್ಯ ನಿರ್ವಹಿಸುವ ಆರೋಗ್ಯ ಸಿಬ್ಬಂದಿಯನ್ನೂ ತರಲು ಯೋಜನೆ ರೂಪಿಸಲಾಗಿತ್ತು. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ 'ಆರೋಗ್ಯ ಮಿತ್ರ' ಆ್ಯಪ್ ಮೂಲಕ ವೈದ್ಯರು ಹಾಗೂ ಆರೋಗ್ಯ ಸಿಬ್ಬಂದಿಯ ಮಾಹಿತಿಯನ್ನು ದಾಖಲೀಕರಿಸಲು ನಿರ್ಧರಿಸಲಾಗಿತ್ತು. ಆದರೆ, ಕೋವಿಡ್‌ನಿಂದಾಗಿ ಬೆರಳಚ್ಚು ಹಾಗೂ ವಿವಿಧ ಮಾಹಿತಿಗಳನ್ನು ಪಡೆದು, ದಾಖಲೀಕರಿಸುವ ಪ್ರಕ್ರಿಯೆ ಸಾಧ್ಯವಾಗುತ್ತಿಲ್ಲ. ಹಾಗಾಗಿ, ಕೋವಿಡ್ ಪೂರ್ಣ ಪ್ರಮಾಣದಲ್ಲಿ ನಿಯಂತ್ರಣಕ್ಕೆ ಬಂದ ಬಳಿಕವೇ ಈ ವ್ಯವಸ್ಥೆಯನ್ನು ಅಳವಡಿಕೆ ಮಾಡಲು ಇಲಾಖೆ ನಿರ್ಧರಿಸಿದೆ.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ — ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಮಾತೃ ಸಂಸ್ಥೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಸ್ಥಾಪಿಸಿರುವ ಟ್ರಸ್ಟ್ ಎಸ್ಎಸ್ಎಲ್‌ಸಿಯಲ್ಲಿ ಉತ್ತೀರ್ಣರಾದ ಅರ್ಹ ಬಡ ವಿದ್ಯಾರ್ಥಿಗಳಿಗೆ ಮುಂದಿನ ಶಿಕ್ಷಣಕ್ಕಾಗಿ ಧನ ಸಹಾಯ ಮಾಡುತ್ತಾ ಬಂದಿದೆ. ಸಾರ್ವಜನಿಕರು ಮತ್ತು ದಾನಿಗಳು ಸಂಸ್ಥೆಯ ಈ ಉದ್ದೇಶಕ್ಕೆ ನೆರವಾಗಬೇಕೆಂದು ಕೋರುತ್ತೇವೆ. ಚೆಕ್ ಅಥವಾ ಡಿ.ಡಿ. ರೂಪದಲ್ಲಿ ಹಣವನ್ನು 'Deccan Herald-Prajavani Relief Trust' ಹೆಸರಿಗೆ ಕಳುಹಿಸಬಹುದು.

ಆನ್‌ಲೈನ್ ಅಥವಾ ಚೆಕ್ ಮೂಲಕವೂ ಹಣ ವರ್ಗಾಯಿಸುವ ಸೌಲಭ್ಯ ಇದೆ. (ವಿವರ ಕೆಳಗೆ ಕೊಡಲಾಗಿದೆ) ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ ಆದಾಯ ತೆರಿಗೆ ಸೆಕ್ಷನ್ 80 ಜಿ ಅನ್ವಯ ಶೇ 50 ರಷ್ಟು ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ
'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ ದೇಣಿಗೆ ನೀಡುವವರು ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಕೊಡುಗೆ' ಎಂದು ನಮೂದಿಸಲು ಮನವಿ.

ವಿಳಾಸ ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2021ರ ಎಸ್ಎಸ್ಎಲ್‌ಸಿಯಲ್ಲಿ ಅಧಿಕ ಅಂಕ ಗಳಿಸಿದ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮಾತ್ರ ಈ ನೆರವು ಕೋರಿ ಅರ್ಜಿ ಸಲ್ಲಿಸಬಹುದು. ಅರ್ಜಿಯಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತಿತರ ವಿವರಗಳಿರಬೇಕು. ಲಕೋಟೆ ಮೇಲೆ 'ಶೈಕ್ಷಣಿಕ ನೆರವಿಗೆ ಅರ್ಜಿ' ಎಂದು ಬರೆಯಬೇಕು. ಅರ್ಜಿಯ ಜೊತೆ ಖಾತೆ ಸಂಖ್ಯೆ, ಐಎಫ್ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು.

ವಿದ್ಯಾರ್ಥಿಗಳ ಅನಿಸಿಕೆ



'ಕಷ್ಟಕಾಲದಲ್ಲಿ ನೆರವು'

'ಪ್ರಜಾವಾಣಿ' ನೀಡಿದ ವಿದ್ಯಾರ್ಥಿವೇತನದಿಂದ ಪುಸ್ತಕ ಖರೀದಿಸಲು, ಟ್ಯೂಷನ್ ಶುಲ್ಕ ಪಾವತಿಸಲು ಸಾಧ್ಯವಾಯಿತು. ಕಷ್ಟ ಕಾಲದಲ್ಲಿ ಹಣಕಾಸಿನ ನೆರವು ಸಿಕ್ಕಿದರೆ ಯಾವುದೇ ಒತ್ತಡವಿಲ್ಲದೇ ವ್ಯಾಸಂಗ ಮುಂದುವರಿಸಬಹುದು.


ಜೆ.ಪ್ರಜ್ವಲ್, ದ್ವಿತೀಯ ಪಿಯುಸಿ, ಸದ್ವಿದ್ಯಾ ಕಾಲೇಜು, ಮೈಸೂರು

ಕಾಲೇಜು ಶುಲ್ಕ ಪಾವತಿಸಿದೆ



ಎಸ್ಸೆಸ್ಸೆಲ್ಸಿ ನಂತರ ವಿಜ್ಞಾನ ವಿಷಯದಲ್ಲಿ ಪದವಿ ಪೂರ್ವ ಶಿಕ್ಷಣ ಮುಂದುವರಿಸಿದ್ದೇನೆ. ಶೈಕ್ಷಣಿಕ ನೆರವಿನ ಹಣದಿಂದ ಕಾಲೇಜು ಶುಲ್ಕ ಪಾವತಿಸಿದೆ. ಕೋವಿಡ್‌ನಂತಹ ಬಿಕ್ಕಟ್ಟಿನ ಪರಿಸ್ಥಿತಿಯಲ್ಲೂ ವಿದ್ಯಾರ್ಥಿಗಳಿಗೆ ಆರ್ಥಿಕವಾಗಿ ಸಹಾಯ ಮಾಡುತ್ತಿರುವುದು ಶ್ಲಾಘನೀಯ. ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಇದೇ ರೀತಿ ನಿಮ್ಮ ಸಹಾಯ ಮುಂದುವರಿಯಲಿ.

ಆರ್.ಚಂದನ್, ಅಂಚೆಪಾಳ್ಯ, ಬೆಂಗಳೂರು







ಅಫ್ಘಾನಿಸ್ತಾನ ಸ್ವಾತಂತ್ರ್ಯದ ಅವಸಾನ

ವಿರೋಧಿಗಳಿಗಾಗಿ ಮನೆ ಮನೆ ಶೋಧ ನಡೆಸುತ್ತಿರುವ ಸೈನಿಕರು: ವಿಶ್ವ ಸಂಸ್ಥೆಯ ಗುಪ್ತಚರ ವರದಿಯ ಮಾಹಿತಿ

ತಾಲಿಬಾನ್ ಸೇಡಿನ ಭೀತಿಯಲ್ಲಿ ಅಫ್ಗನ್



ಅಫ್ಗಾನಿಸ್ತಾನ ಕಡೆಯಿಂದ ಗಾಲಿಕುರ್ಚಿಯಲ್ಲಿ ಬಂದ ವೃದ್ಧ ಮತ್ತು ಆತನೊಂದಿಗೆ ಇದ್ದ ವ್ಯಕ್ತಿಯು ಚಮನ್ ಗಡಿಯ ಮೂಲಕ ಪಾಕಿಸ್ತಾನಕ್ಕೆ ಶುಕ್ರವಾರ ಪ್ರವೇಶಿಸಿದರು —ಎಪಿ/ಪಿಟಿಐ ಚಿತ್ರ

ಕಾಬೂಲ್ (ಎಎಫ್‌ಪಿ): ತಾಲಿಬಾನ್ ಸೈನಿಕರು ಮನೆ ಮನೆಗೆ ಹೋಗಿ ತಮ್ಮ ವಿರೋಧಿಗಳು ಮತ್ತು ಅವರ ಕುಟುಂಬದ ಸದಸ್ಯರಿಗಾಗಿ ಹುಡುಕಾಟ ನಡೆಸುತ್ತಿದ್ದಾರೆ ಎಂದು ವಿಶ್ವ ಸಂಸ್ಥೆಯ ಗುಪ್ತಚರ ವರದಿಯೊಂದು ಹೇಳಿದೆ. ತಾಲಿಬಾನ್‌ನ ಈ ಶೋಧವು ಅಫ್ಗಾನಿಸ್ತಾನದ ಜನರಲ್ಲಿ ಸೇಡಿನ ಭೀತಿ ಹುಟ್ಟಿಸಿದೆ. ವಿರೋಧಿಗಳಿಗೆ ಕ್ಷಮಾದಾನದ ಘೋಷಣೆಯು ಹುಸಿ ಎಂಬ ಭಾವ ಜನರಲ್ಲಿ ಮೂಡಿದೆ.

ಕ್ಷಮಾದಾನ, ಮಹಿಳೆಯರ ಹಕ್ಕುಗಳ ರಕ್ಷಣೆ ಮುಂತಾದ ಘೋಷಣೆಗಳ ಮೂಲಕ ತಾನು ಬದಲಾಗಿದ್ದೇನೆ ಎಂದು ಮನದಟ್ಟು ಮಾಡುವ ಪ್ರಯತ್ನವನ್ನು ತಾಲಿಬಾನ್ ಮಾಡಿದೆ. ಇದು ಸಾರ್ವಜನಿಕ ಸಂಪರ್ಕದ ಕಾರ್ಯತಂತ್ರ ಮಾತ್ರ ಎಂಬುದನ್ನು ಮನೆ ಮನೆ ಶೋಧವು ತೋರಿಸಿಕೊಟ್ಟಿದೆ. ಜತೆಗೆ, ಸಾವಿರಾರು ಜನರು ದೇಶ ತೊರೆಯಲು ಹಾತೊರೆಯುತ್ತಿರುವುದು ಇದಕ್ಕೆ ಪುಷ್ಟಿ ಕೊಟ್ಟಿದೆ.

ಅಮೆರಿಕ ಮತ್ತು ನ್ಯಾಟೊ ಪಡೆಗಳ ಜತೆಗೆ ಕೆಲಸ ಮಾಡಿರುವ ವ್ಯಕ್ತಿಗಳ ಮನೆಗಳಿಗೆ ತಾಲಿಬಾನ್ ಸೈನಿಕರು ಭೇಟಿ ನೀಡಿದ್ದಾರೆ. ಕಾಬೂಲ್ ವಿಮಾನ ನಿಲ್ದಾಣಕ್ಕೆ ಹೋಗುತ್ತಿರುವ ಜನರನ್ನು ಕೂಡ ಶೋಧಕ್ಕೆ ಒಳಪಡಿಸಲಾಗುತ್ತಿದೆ ಎಂದು ನಾರ್ವೆ ಸೆಂಟರ್ ಫಾರ್ ಗ್ಲೋಬಲ್ ಅನಾಲಿಸಿಸ್ ಸಿದ್ಧಪಡಿಸಿರುವ ವರದಿಯು ಹೇಳಿದೆ.

ಮಾಹಿತಿ ಹಂಚಿಕೊಳ್ಳಲು ನಿರಾಕರಿಸುವ ಕುಟುಂಬಗಳನ್ನು ತನಿಖೆಗೆ ಒಳಪಡಿಸಲಾಗುತ್ತಿದೆ, ಚಿತ್ರಹಿಂಸೆಗೆ ಒಳಪಡಿಸಿ ಹತ್ಯೆ ಮಾಡಲಾಗುತ್ತಿದೆ ಎಂದು ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಕ್ರಿಶ್ಚಿಯನ್ ನೆಲ್ಮನ್ ಹೇಳಿದ್ದಾರೆ.

ಇಂತಹ ಆರೋಪಗಳನ್ನು ತಾಲಿಬಾನ್ ನಿರಾಕರಿಸಿದೆ. ಮನೆಗಳಿಗೆ ಪ್ರವೇಶಿಸದಂತೆ ಸೈನಿಕರಿಗೆ ಹಲವು ಬಾರಿ ಸೂಚನೆ ನೀಡಲಾಗಿದೆ ಎಂದು ತಾಲಿಬಾನ್ ಹೇಳಿದೆ.

ಆದರೆ, ವಾಸ್ತವ ಪರಿಸ್ಥಿತಿ ತಾಲಿಬಾನ್ ಹೇಳಿಕೊಂಡ ರೀತಿಯಲ್ಲಿ ಇಲ್ಲ. 'ನಮ್ಮ ಜೀವಕ್ಕೆ ಅಪಾಯ ಇದೆ' ಎಂದು ಸರ್ಕಾರಿ ಸ್ವಾಮ್ಯದ ಸುದ್ದಿ ವಾಹಿನಿ ಆರ್‌ಟಿಎಯ ನಿರೂಪಕಿ ಶಬ್ನಂ ದಾವ್ರನ್ ಅವರು ಇತ್ತೀಚೆಗೆ ಬಿಡುಗಡೆ ಮಾಡಿರುವ ವಿಡಿಯೊದಲ್ಲಿ ಹೇಳಿದ್ದಾರೆ.

'ಗುರುತು ಚೀಟಿ ಹೊಂದಿರುವ ಪುರುಷ ಸಿಬ್ಬಂದಿಗೆ ಕಚೇರಿ ಪ್ರವೇಶಿಸಲು ಅವಕಾಶ ನೀಡಲಾಗಿದೆ. ಆದರೆ, ನಾನು ಹೋದಾಗ, ವ್ಯವಸ್ಥೆ ಬದಲಾಗಿದ್ದು ನೀವು ಕೆಲಸ ಮುಂದುವರಿಸುವಂತಿಲ್ಲ ಎಂದು ಹೇಳಲಾಗಿದೆ' ಎದು ಶಬ್ನಂ ಅವರು ವಿಡಿಯೊದಲ್ಲಿ ಹೇಳಿದ್ದಾರೆ.

ಅಂತರರಾಷ್ಟ್ರೀಯ ಸಮುದಾಯವು ಅಫ್ಗಾನಿಸ್ತಾನದತ್ತ ಗಮನ ಹರಿಸಬೇಕು. ಕಳೆದ 20 ವರ್ಷಗಳ ಸಾಧನೆಯು ವ್ಯರ್ಥವಾಗದಂತೆ ನೋಡಿಕೊಳ್ಳಬೇಕು ಎಂದು ಅವರು ವಿನಂತಿ ಮಾಡಿದ್ದಾರೆ.

'ಅಸು ನೀಗುತ್ತಿವೆ ಮಕ್ಕಳು'

ಶಸ್ತ್ರಸಜ್ಜಿತ ತಾಲಿಬಾನಿಗಳ ಪಹರೆಯನ್ನು ಲೆಕ್ಕಿಸದೇ, ಕಾಬೂಲ್ ತೊರೆಯುವುದಕ್ಕಾಗಿ ಸಾವಿರಾರು ಜನರು ವಿಮಾನ ನಿಲ್ದಾಣದಲ್ಲಿ ಜಮಾಯಿಸುತ್ತಿದ್ದಾರೆ.

ಮೊಹಮ್ಮದ್ ನಯೀಂ ಎಂಬುವವರು, ತಮ್ಮನ್ನು ಕರೆದೊಯ್ಯುವ ವಿಮಾನದ ನಿರೀಕ್ಷೆಯಲ್ಲಿ ನಾಲ್ಕು ದಿನಗಳಿಂದ ತಮ್ಮ ಮಕ್ಕಳೊಂದಿಗೆ ನಿಲ್ದಾಣದಲ್ಲಿ ಕಾಯುತ್ತ ನಿಂತಿದ್ದಾರೆ. ಮೊದಲ ದಿನದಂದು ಸಾವಿರಾರು ಸಂಖ್ಯೆಯಲ್ಲಿದ್ದ ಜನರ ಕಾಲ್ತುಳಿತದಿಂದ ಮಕ್ಕಳನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಕಾರಿನ ಮೇಲೆ ಮಕ್ಕಳನ್ನು ಕೂರಿಸಿದ್ದಾಗಿ ಅವರು ಹೇಳಿದರು. ತಮ್ಮ ಕಣ್ಣಮುಂದೆಯೇ ಹಲವಾರು ಮಕ್ಕಳು ಅಸು ನೀಗಿದವು ಎಂದೂ ವಿಷಾದಿಸಿದರು.

ತಮ್ಮನ್ನು ಅಮೆರಿಕ ಪಡೆಯ ದುಭಾಷಿ ಎಂದು ಹೇಳಿಕೊಂಡ ನಯೀಂ, ಸದ್ಯಕ್ಕೆ ಯಾರೂ ವಿಮಾನ ನಿಲ್ದಾಣದ ಬಳಿ ಬರುವುದು ಬೇಡ ಎಂದು ಮನವಿ ಮಾಡಿದರು.



ಅಮೆರಿಕ ಪ್ರಜೆಗಳ ತೆರವು ಕಾರ್ಯಕ್ಕೆ ನೆರವಾಗುವ ಸಂಬಂಧ ಕಾಬೂಲ್‌ನ ಹಮೀದ್ ಕರ್ಜೈ ಅಂತರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ನಿಯೋಜನೆಗೊಂಡಿದ್ದ ಅಮೆರಿಕದ ನೌಕಾಪಡೆಯ ಯೋಧ ನಿರಾಶ್ರಿತ ಬಾಲಕನೊಬ್ಬನಿಗೆ ಪ್ರತಿಕ್ರಿಯಿಸಿದ್ದು ಹೀಗೆ —ರಾಯಿಟರ್ಸ್ ಚಿತ್ರ

18 ಸಾವಿರ ಜನ ತೆರವು

ಅಫ್ಗಾನಿಸ್ತಾನದ ಮೇಲೆ ತಾಲಿಬಾನ್ ನಿಯಂತ್ರಣ ಸಾಧಿಸಿದ ಭಾನುವಾರದಿಂದ ನಂತರದ ದಿನಗಳಲ್ಲಿ 18 ಸಾವಿರಕ್ಕೂ ಹೆಚ್ಚು ಜನರನ್ನು ಕಾಬೂಲ್ ವಿಮಾನ ನಿಲ್ದಾಣದ ಮೂಲಕ ತೆರವು ಮಾಡಲಾಗಿದೆ ಎಂದು ನ್ಯಾಟೊ ಅಧಿಕಾರಿಗಳು ತಿಳಿಸಿದ್ದಾರೆ.

ವಿಮಾನ ನಿಲ್ದಾಣದ ಹೊರಗೆ ಜನರು ಜಮಾಯಿಸುತ್ತಿರುವುದು ಶುಕ್ರವಾರವೂ ಮುಂದುವರಿದಿದೆ. ಅವರೆಲ್ಲರೂ ದೇಶ ತೊರೆಯುವ ಧಾವಂತದಲ್ಲಿದ್ದಾರೆ ಎಂದು ಅಧಿಕಾರಿ ಹೇಳಿದ್ದಾರೆ.

31ರವರೆಗೆ ಯಾವುದೇ ನಿರ್ಧಾರ ಇಲ್ಲ

ಹೊಸ ಸರ್ಕಾರಕ್ಕೆ ಸಂಬಂಧಿಸಿದ ಯಾವುದೇ ನಿರ್ಧಾರ ಅಥವಾ ಘೋಷಣೆಗಳನ್ನು ತಾಲಿಬಾನ್ ಇದೇ 31ರವರೆಗೆ ಪ್ರಕಟಿಸುವ ಸಾಧ್ಯತೆ ಇಲ್ಲ ಎಂದು ಅಫ್ಗಾನಿಸ್ತಾನದ ಅಧಿಕಾರಿಯೊಬ್ಬರು ಹೇಳಿದ್ದಾರೆ. ಅಮೆರಿಕದ ಸೇನೆ ಮತ್ತು ನಾಗರಿಕರ ತೆರವಿಗೆ 31 ಕೊನೆಯ ದಿನವಾಗಿದೆ.

ಗಡುವಿನ ದಿನದ ವರೆಗೆ ಏನನ್ನೂ ಮಾಡುವುದಿಲ್ಲ ಎಂಬ ಭರವಸೆಯನ್ನು ಅಮೆರಿಕಕ್ಕೆ ತಾಲಿಬಾನ್‌ನ ಸಂಧಾನಕಾರ ಅನಸ್ ಹಖ್ಖಾನಿ ನೀಡಿದ್ದಾನೆ ಎಂದು ತಿಳಿದು ಬಂದಿದೆ. 31ರ ಬಳಿಕ ತಾಲಿಬಾನ್ ಯಾವೆಲ್ಲ ಬದಲಾವಣೆ ತರಬಹುದು ಎಂಬ ಬಗೆಗಿನ ಕಳವಳ ಇದರಿಂದಾಗಿ ಸೃಷ್ಟಿಯಾಗಿದೆ. ತಾಲಿಬಾನ್‌ನಿಂದ ಹೊರಗಿನ ವ್ಯಕ್ತಿಗಳು ಅಧಿಕಾರಿಗಳಾಗಿ ಉಳಿಯಲಿದ್ದಾರೆಯೇ ಎಂಬ ಪ್ರಶ್ನೆಯೂ ಮೂಡಿದೆ.

ಗಡಿಪಾರಾದ ವ್ಯಕ್ತಿ ತಾಲಿಬಾನ್ ಜತೆಗೆ

ಈ ವರ್ಷ ಜೂನ್‌ನಲ್ಲಿ ನಾಗಪುರದಿಂದ ಗಡಿಪಾರು ಮಾಡಲಾದ ಅಫ್ಗಾನಿಸ್ತಾನದ ಪ್ರಜೆಯು ತಾಲಿಬಾನ್ ಜತೆ ಇರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಕಂಡು ಬಂದಿದೆ. ವಿಡಿಯೊದಲ್ಲಿ ಆತ ಬಂದೂಕು ಹಿಡಿದುಕೊಂಡಿದ್ದಾನೆ ಎಂದು ನಾಗಪುರದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ. ನೂರ್ ಮೊಹಮ್ಮದ್ ಅಜೀಜ್ ಮೊಹಮ್ಮದ್ ಎಂಬ ವ್ಯಕ್ತಿಯು 10 ವರ್ಷಗಳಿಂದ ನಾಗಪುರದಲ್ಲಿ ಅನಧಿಕೃತವಾಗಿ ನೆಲೆಸಿರುವುದು ಪತ್ತೆಯಾಗಿತ್ತು. ಆತನನ್ನು ಬಂಧಿಸಿ ಬಳಿಕ ಗಡಿಪಾರು ಮಾಡಲಾಗಿತ್ತು.

1.4 ಕೋಟಿ ಜನರು ಹಸಿವಿನ ದವಡೆಗೆ

ಯುದ್ಧ ಮತ್ತು ಬರಗಾಲದಿಂದಾಗಿ ಅಫ್ಗಾನಿಸ್ತಾನದ 1.4 ಕೋಟಿಗೂ ಹೆಚ್ಚು ಜನರು ಹಸಿವಿನಿಂದ ಬಳಲಬೇಕಾದ ಪರಿಸ್ಥಿತಿ ನಿರ್ಮಾಣ ಆಗಲಿದೆ ಎಂದು ವಿಶ್ವ ಸಂಸ್ಥೆಯು ಆಹಾರ ಕಾರ್ಯಕ್ರಮದ ವರದಿಯು ಹೇಳಿದೆ.

ದೇಶವು ಮೂರು ವರ್ಷಗಳಲ್ಲಿ ಎರಡನೇ ಬರಗಾಲವನ್ನು ಕಂಡಿದೆ. ಜತೆಗೆ, ಯುದ್ಧ ಮತ್ತು ಜನರ ಸ್ಥಳಾಂತರದ ಸಮಸ್ಯೆಯೂ ಇದೆ. 30 ವರ್ಷಗಳಲ್ಲಿಯೇ ಅತ್ಯಂತ ಭೀಕರ ಬರಗಾಲದಿಂದಾಗಿ ಗೋಧಿ ಬೆಳೆಯು ಶೇ 40ರಷ್ಟು ಕುಸಿದಿದೆ. ಇದು ಜನರು ಮತ್ತು ಜಾನುವಾರುಗಳ ಆಹಾರ ಲಭ್ಯತೆ ಮೇಲೆ ಗಂಭೀರ ಪರಿಣಾಮ ಬೀರಲಿದೆ.

'ತಾಲಿಬಾನಿಗಳಿಂದ ಅಲ್ಪಸಂಖ್ಯಾತ ಸಮುದಾಯದ 9 ಮಂದಿ ಕಗ್ಗೊಲೆ'

ಬರ್ಲಿನ್ (ಎಪಿ): ಅಫ್ಗಾನಿಸ್ತಾನದಲ್ಲಿ, ಕಳೆದ ತಿಂಗಳು 'ಹಜರಾ' ಅಲ್ಪಸಂಖ್ಯಾತ ಸಮುದಾಯದ ಒಂಬತ್ತು ಜನರನ್ನು ತಾಲಿಬಾನಿಗಳು ಚಿತ್ರಹಿಂಸೆ ನೀಡಿ ಹತ್ಯೆ ಮಾಡಿದ್ದಾಗಿ ಆಮ್ನೆಸ್ಟಿ ಇಂಟರ್‌ನ್ಯಾಷನಲ್ ಹೇಳಿದ್ದು, ಇದು ಅಲ್ಲಿನ ಭಯಾನಕ ಆಡಳಿತದ ಮುನ್ಸೂಚನೆ ಎಂದು ಕಳವಳ ವ್ಯಕ್ತಪಡಿಸಿದೆ.

ಆಮ್ನೆಸ್ಟಿ ಇಂಟರ್‌ನ್ಯಾಷನಲ್‌ನ ಸಂಶೋಧಕರು, ಅಫ್ಗಾನಿಸ್ತಾನದ ಘಜನಿ ಪ್ರಾಂತ್ಯದಲ್ಲಿನ ಪ್ರತ್ಯಕ್ಷದರ್ಶಿಗಳೊಂದಿಗೆ ಮಾತನಾಡಿದ್ದಾರೆ. ಜುಲೈನಲ್ಲಿ, ತಾಲಿಬಾನಿಗಳು ಮುಂಡಾರಖಾ ಗ್ರಾಮವನ್ನು ಅತಿಕ್ರಮಣ ಮಾಡಿದ ಸಂದರ್ಭದಲ್ಲಿ ಆರು ಜನರನ್ನು ಗುಂಡಿಕ್ಕಿ ಹಾಗೂ ಮೂವರನ್ನು ಚಿತ್ರಹಿಂಸೆ ನೀಡಿ ಕೊಂದಿರುವುದಾಗಿ ಪ್ರತ್ಯಕ್ಷದರ್ಶಿಗಳು ವಿವರಿಸಿದ್ದಾರೆ ಎಂದು ತಿಳಿಸಿದೆ.

ಸಂಸ್ಥೆಯ ಮುಖ್ಯಸ್ಥೆ ಆಗ್ನೆಸ್ ಕಾಲ್‌ಮಾರ್ಡ್, 'ನಿರ್ದಯ ಹಾಗೂ ಕ್ರೌರ್ಯದ ಈ ಕೃತ್ಯವು ತಾಲಿಬಾನ್‌ನ ಹಳೆಯ ದಿನಗಳನ್ನೇ ನೆನಪಿಸುತ್ತದೆ. ಮುಂಬರುವ ದಿನಗಳಲ್ಲಿ ಅಫ್ಗಾನಿಸ್ತಾನದ ಆಡಳಿತ ಎಷ್ಟು ಭೀಬತ್ಸವಾಗಿರಲಿದೆ ಎಂಬುದರ ಸೂಚನೆಯೂ ಇದಾಗಿದೆ' ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

'ಅಲ್ಲಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಹತ್ಯೆಗಳು ನಡೆಯುತ್ತಿರಬಹುದು. ಆದರೆ, ಅವುಗಳು ವರದಿಯಾಗುತ್ತಿಲ್ಲ. ಏಕೆಂದರೆ, ತಾಲಿಬಾನಿಗಳು ಅಲ್ಲಿನ ಬಹುತೇಕ ಪ್ರದೇಶಗಳಲ್ಲಿ ಮೊಬೈಲ್ ಫೋನ್ ಸೇವೆಯನ್ನು ಸ್ಥಗಿತಗೊಳಿಸಿದ್ದಾರೆ. ತಮ್ಮ ಕೃತ್ಯಗಳನ್ನು ಸೆರೆಹಿಡಿದ ಚಿತ್ರಗಳು ಪ್ರಸಾರ ಆಗದಂತೆ ನೋಡಿಕೊಳ್ಳುತ್ತಿದ್ದಾರೆ' ಎಂದಿದ್ದಾರೆ.

ಸ್ವಾತಂತ್ರ್ಯ ದಿನಾಚರಣೆ ನೆವದಲ್ಲಿ ಆರಂಭವಾದ ಪ್ರತಿಭಟನೆಗೆ ಬಿರುಸು

ಯುವಕ ಯುವತಿಯರ ಪ್ರತಿರೋಧ



ಕಾಬೂಲ್‌ನಲ್ಲಿ ತಾಲಿಬಾನ್ ವಿರುದ್ಧ ನಡೆಸಿದ ಪ್ರತಿಭಟನೆ ವೇಳೆ ಅಫ್ಗಾನಿಸ್ತಾನದ ರಾಷ್ಟ್ರೀಯ ಧ್ವಜ ಪ್ರದರ್ಶಿಸಿದ ನಾಗರಿಕರು —ರಾಯಿಟರ್ಸ್ ಚಿತ್ರ

ಕಾಬೂಲ್ (ಎಎಫ್‌ಪಿ/ಎಪಿ): ಅಫ್ಗಾನಿಸ್ತಾನವು ತಾಲಿಬಾನ್‌ನ ಕೈವಶವಾದ ನಂತರ ಲಕ್ಷಾಂತರ ಅಫ್ಗನ್ನರು ದೇಶ ತೊರೆಯುತ್ತಿದ್ದಾರೆ. ಇದರ ಮಧ್ಯೆಯೇ ತಾಲಿಬಾನ್ ಸ್ವಾತಂತ್ರ್ಯವನ್ನು ಘೋಷಿಸಿದೆ. ಆದರೆ, ತಾಲಿಬಾನ್‌ಗೆ ದೇಶದ ಹಲವೆಡೆ ಪ್ರತಿರೋಧವೂ ವ್ಯಕ್ತವಾಗುತ್ತಿದೆ. ಬ್ರಿಟಿಷರಿಂದ ಅಫ್ಗಾನಿಸ್ತಾನ ಸ್ವಾತಂತ್ರ್ಯ ಪಡೆದು ಇದೇ ಗುರುವಾರಕ್ಕೆ 102 ವರ್ಷ ಕಳೆದಿದೆ. 102ನೇ ಸ್ವಾತಂತ್ರ್ಯೋತ್ಸವಕ್ಕೆ ತಾಲಿಬಾನಿಗಳು ತಮ್ಮ ಧ್ವಜವನ್ನು ಹಾರಿಸಿದ್ದಾರೆ. ಆದರೆ ಅಫ್ಗನ್ ಪ್ರಜೆಗಳು ತಾಲಿಬಾನ್ ಧ್ವಜವನ್ನು ಕೆಳಗಿಳಿಸಿ, ಅಫ್ಗಾನಿಸ್ತಾನದ ಅಧಿಕೃತ ಧ್ವಜವನ್ನು ಹಾರಿಸಿದ್ದಾರೆ.

ತಾಲಿಬಾನ್ ಸಂಭ್ರಮಾಚರಣೆಯ ವಿರುದ್ಧ ದೇಶದ ಹಲವು ನಗರಗಳಲ್ಲಿ ನಾಗರಿಕರು ಪ್ರತಿಭಟನೆ, ಮೆರವಣಿಗೆ ನಡೆಸಿದ್ದಾರೆ. ಈ ಪ್ರತಿಭಟನೆಗಳನ್ನು ಹತ್ತಿಕ್ಕಲು ತಾಲಿಬಾನ್ ಶಸ್ತ್ರ ಪ್ರಯೋಗಿಸಿದೆ. ಆ ದಾಳಿಯಲ್ಲಿ ಹಲವರು ಮೃತಪಟ್ಟಿದ್ದಾರೆ. ಬುಧವಾರದಿಂದ ಆರಂಭವಾದ ಈ ಪ್ರತಿಭಟನೆ ಈಗ ಮೂರನೇ ದಿನಕ್ಕೆ ಕಾಲಿರಿಸಿದೆ.

ಈ ಪ್ರತಿಭಟನೆಯಲ್ಲಿ ಭಾಗಿಯಾದವರಲ್ಲಿ ವಿದ್ಯಾರ್ಥಿಗಳು ಮತ್ತು ಯುವತಿಯರ ಸಂಖ್ಯೆ ದೊಡ್ಡದಿದೆ. 2001ರಲ್ಲಿ ತಾಲಿಬಾನ್ ಪತನದ ನಂತರದ ತಲೆಮಾರಿನ ಯುವಕ-ಯುವತಿಯರು ಈಗ ತಾಲಿಬಾನ್‌ನ ಆಕ್ರಮಣವನ್ನು ಒಪ್ಪುತ್ತಿಲ್ಲ. ಬದಲಿಗೆ ಪ್ರತಿರೋಧ ಒಡ್ಡುತ್ತಿದ್ದಾರೆ.

'ತಾಲಿಬಾನ್‌ನ ಪತನದ ನಂತರ ಜನಿಸಿದವರು ಸ್ವತಂತ್ರ ಅಫ್ಗಾನಿಸ್ತಾನದ ಒಳ್ಳೆಯ ದಿನಗಳನ್ನು ನೋಡಿದ್ದಾರೆ. ಸ್ವಾತಂತ್ರ್ಯ, ವ್ಯಕ್ತಿ ಸ್ವಾತಂತ್ರ್ಯ ಏನು ಎಂಬುದನ್ನು ಈ ತಲೆಮಾರು ಅನುಭವಿಸಿ ನೋಡಿದೆ. ಹೀಗಾಗಿ ಈ ತಲೆಮಾರು ತಾಲಿಬಾನ್‌ನ ಅತಿಕ್ರಮಣವನ್ನು ಸುಲಭವಾಗಿ ಒಪ್ಪುತ್ತಿಲ್ಲ. ಈ ಹೊಸ ತಲೆಮಾರಿನ ಯುವಜನರೇ ದೇಶದ ಹಲವೆಡೆ ತಾಲಿಬಾನ್ ವಿರುದ್ಧ ಪ್ರತಿರೋಧ ಹುಟ್ಟು ಹಾಕುತ್ತಿದ್ದಾರೆ. ತಾಲಿಬಾನ್ ಈ ಪ್ರತಿರೋಧವನ್ನು ಹತ್ತಿಕ್ಕಲು ಪ್ರಯತ್ನಿಸಿದಷ್ಟೂ, ಪ್ರತಿರೋಧ ಹೆಚ್ಚಾಗುತ್ತಿದೆ' ಎಂದು ಕಾಬೂಲ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸ್ವಯಂಸೇವಾ ಸಂಸ್ಥೆಯೊಂದರ ಸಿಬ್ಬಂದಿ ವಿವರಿಸಿದ್ದಾರೆ.

'ತಾಲಿಬಾನ್ ಆಡಳಿತದಲ್ಲಿ ನಲುಗಿದ್ದ ಅಫ್ಗಾನಿಸ್ತಾನದ ಮರುನಿರ್ಮಾಣಕ್ಕೆ ಇಡೀ ವಿಶ್ವವೇ 20 ವರ್ಷ ಶ್ರಮಿಸಿದೆ. ಆ 20 ವರ್ಷದ ಶ್ರಮವು ವ್ಯರ್ಥವಾಗಲು ಅಂತರರಾಷ್ಟ್ರೀಯ ಸಮುದಾಯ ಅವಕಾಶ ಮಾಡಿಕೊಡಬಾರದು. ಆ ಶ್ರಮ ವ್ಯರ್ಥವಾಗಲು ನಾವಂತೂ ಬಿಡುವುದಿಲ್ಲ' ಎಂದು ಕುನಾರ್ ನಗರದ ವಿದ್ಯಾರ್ಥಿಯೊಬ್ಬ ಹೇಳಿದ್ದಾನೆ.

ತಾಲಿಬಾನ್ ವಿರುದ್ಧ ಮೊದಲ ಪ್ರತಿಭಟನೆ ವರದಿಯಾದದ್ದು ಅಸಾದಾಬಾದ್‌ನಲ್ಲಿ. ಬುಧವಾರವೇ ಅಲ್ಲಿ ವಿದ್ಯಾರ್ಥಿಗಳು, ಯುವತಿಯರು ಮತ್ತು ಮಹಿಳೆಯರು ತಾಲಿಬಾನ್ ವಿರುದ್ಧ ಪ್ರತಿಭಟನಾ ಮೆರವಣಿಗೆ ನಡೆಸಿದ್ದರು. ಅದನ್ನು ಹತ್ತಿಕ್ಕಲು ತಾಲಿಬಾನ್‌ಗಳು ಶಸ್ತ್ರ ಪ್ರಯೋಗಿಸಿದರು. ಆ ದಾಳಿಯಲ್ಲಿ ಹಲವು ಜನರು ಮೃತಪಟ್ಟಿದ್ದಾರೆ ಎಂದು ಹಲವು ಮಾಧ್ಯಮಗಳು ವರದಿ ಮಾಡಿವೆ.

ಗುರುವಾರ ಮತ್ತು ಶುಕ್ರವಾರ ಈ ಪ್ರತಿಭಟನೆಯು ದೇಶದ ಇತರ ನಗರಗಳಿಗೂ ವ್ಯಾಪಿಸಿದೆ. ಗುರುವಾರ ಅಸಾದಾಬಾದ್, ಕಾಬೂಲ್, ಖೋಸ್ಟ್ ನಗರಗಳಲ್ಲಿ ಪ್ರತಿಭಟನೆ ನಡೆಸಿದೆ. ತಾಲಿಬಾನ್ ಜನ್ಮಸ್ಥಳವಾದ ಕಂದಹಾರ್‌ನಲ್ಲಿ ಶುಕ್ರವಾರ ಪ್ರತಿಭಟನೆ ನಡೆದಿದೆ.

ಯಾವುದೇ ಸರ್ಕಾರ, ವ್ಯವಸ್ಥೆ ಅಥವಾ ಗುಂಪು ನಮ್ಮ ರಾಷ್ಟ್ರ ಧ್ವಜವನ್ನು ಬದಲಿಸಲು ಅವಕಾಶ ಮಾಡಿಕೊಡುವುದಿಲ್ಲ.
ನೂರಾಯೆಲ್ ಕಾಲಿವಾಲ್
ಕಂದಹಾರ್‌ನ ಮಾನವ ಹಕ್ಕುಗಳ ಹೋರಾಟಗಾರ

ದೇಶದ ಬಾವುಟ ಮತ್ತು ದೇಶದ ಘನತೆಯ ಪರವಾಗಿ ನಿಂತ ಎಲ್ಲರನ್ನೂ ನಾನು ಅಭಿನಂದಿಸುತ್ತೇನೆ, ಗೌರವ ಸಲ್ಲಿಸುತ್ತೇವೆ. ಈ ಹೋರಾಟ ಮುಂದುವರಿಯಲಿದೆ
ಅಮರುಲ್ಲಾ ಸಾಲಿಹ್, ಪತನವಾದ ಸರ್ಕಾರದ ಉಪಾಧ್ಯಕ್ಷ

ಮುಖ್ಯಾಂಶಗಳು
- ದೇಶದ ಹಲವೆಡೆ ತಾಲಿಬಾನ್ ವಿರುದ್ಧ ತೀವ್ರಗೊಂಡ ಪ್ರತಿರೋಧ
- ರಾಷ್ಟ್ರಧ್ವಜ ಬದಲಿಸಿದ್ದಕ್ಕೆ ನಾಗರಿಕರು, ರಾಜಕೀಯ ನಾಯಕರ ಆಕ್ಷೇಪ
- ಹೊಸತಲೆಮಾರಿನ ಜನರಿಂದಲೇ ತಾಲಿಬಾನ್ ಅತಿಕ್ರಮಣಕ್ಕೆ ಪ್ರತಿರೋಧ

ಸಶಸ್ತ್ರ ಹೋರಾಟಕ್ಕೆ ಸಿದ್ಧತೆ

ತಾಲಿಬಾನ್ ಅತಿಕ್ರಮಣದ ವಿರುದ್ಧ ಸಶಸ್ತ್ರ ಹೋರಾಟ ನಡೆಸಲು ಈಶಾನ್ಯ ಅಫ್ಗಾನಿಸ್ತಾನದ ಪಂಜ್‌ಶಿರ್ ಕಣಿವೆಯಲ್ಲಿ ಸಿದ್ಧತೆ ನಡೆದಿದೆ. ಪಂಜ್‌ಶಿರ್ ಕಣಿವೆ ಪ್ರಾಂತವು ಇನ್ನೂ ತಾಲಿಬಾನಿಗಳ ಕೈವಶವಾಗಿಲ್ಲ. ಹೀಗಾಗಿ ತಾಲಿಬಾನ್ ಅತಿಕ್ರಮಣವನ್ನು ವಿರೋಧಿಸಿದ ರಾಜಕೀಯ ಗುಂಪುಗಳ ನಾಯಕರು ಈ ಕಣಿವೆ ಪ್ರಾಂತದಲ್ಲಿ ಒಟ್ಟಾಗಿದ್ದಾರೆ.

ಪತನವಾದ ಸರ್ಕಾರದಲ್ಲಿ ಉಪಾಧ್ಯಕ್ಷರಾಗಿದ್ದ ಅಮರುಲ್ಲಾ ಸಾಲಿಹ್ ಅವರು ತಮ್ಮನ್ನು ತಾವು ಪ್ರಭಾರಿ ಅಧ್ಯಕ್ಷ ಎಂದು ಘೋಷಿಸಿಕೊಂಡಿದ್ದಾರೆ. ತಾಲಿಬಾನಿಗಳ ವಿರುದ್ಧ ಸಶಸ್ತ್ರ ಹೋರಾಟ ನಡೆಸಲು ತಾಲಿಬಾನ್ ವಿರೋಧಿಗಳನ್ನು ಒಗ್ಗೂಡಿಸುತ್ತಿದ್ದಾರೆ.

90ರ ದಶಕದಲ್ಲಿ ತಾಲಿಬಾನ್ ವಿರೋಧಿ ಹೋರಾಟಗಾರರ ಕೇಂದ್ರವಾಗಿದ್ದ ಪಂಜ್‌ಶಿರ್ ಕಣಿವೆ ಪ್ರಾಂತದಲ್ಲಿ ಹೋರಾಟಕ್ಕೆ ಸಿದ್ಧತೆ ನಡೆದಿದೆ. ಅಂದು ತಾಲಿಬಾನ್ ವಿರುದ್ಧ ನಾಗರಿಕರನ್ನು ಸಂಘಟಿಸಿದ್ದ ಅಹ್ಮದ್ ಶಾ ಮಸೂದ್ ಅವರ ಪುತ್ರ, ಅಹ್ಮದ್ ಮಸೂದ್ ಈಗ ತಾಲಿಬಾನಿಗಳ ವಿರುದ್ಧ ಹೋರಾಟ ಸಂಘಟಿಸುತ್ತಿದ್ದಾರೆ.

'ನನ್ನ ಅಪ್ಪನ ಹೋರಾಟದ ಹಾದಿಯಲ್ಲೇ ನಾನೂ ನಡೆಯುತ್ತೇನೆ. ಆದರೆ ಈ ಹೋರಾಟಕ್ಕೆ ನಮಗೆ ಹೆಚ್ಚಿನ ಶಸ್ತ್ರಗಳು ಮತ್ತು ಮದ್ದುಗುಂಡುಗಳ ಅವಶ್ಯಕತೆ ಇದೆ' ಎಂದು ಅಹ್ಮದ್ ಹೇಳಿದ್ದಾರೆ. ಶಸ್ತ್ರಾಸ್ತ್ರ ಪೂರೈಸುವಂತೆ ಅಂತರರಾಷ್ಟ್ರೀಯ ಸಮುದಾಯಕ್ಕೆ ಅವರು ಮನವಿ ಮಾಡಿದ್ದಾರೆ.

'ಸಚಿವರು ಸರ್ಕಾರದ ಪ್ರತಿನಿಧಿಯಂತೆ ವರ್ತಿಸಲಿ'

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಸದಾಶಿವ ಆಯೋಗದ ವರದಿಯ ಬಗ್ಗೆ ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಅವರೊಂದಿಗೆ ತಾರ್ಕಿಕ ಅಂತ್ಯ ಕಾಣುವ ಚರ್ಚೆ ನಡೆದಿಲ್ಲ. ಸಚಿವರು ಸರ್ಕಾರವನ್ನು ಪ್ರತಿನಿಧಿಸಬೇಕೆ ಹೊರತು ಸಮುದಾಯದ ವ್ಯಕ್ತಿಯಂತೆ ವರ್ತಿಸಬಾರದು ಎಂದು ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಸಲಹೆ ನೀಡಿದರು.

ಒಳಮೀಸಲಾತಿಗೆ ಸಂಬಂಧಿಸಿ ಜನಾಶೀರ್ವಾದ ಯಾತ್ರೆಯಲ್ಲಿ ಸಚಿವ ನಾರಾಯಣಸ್ವಾಮಿ ನೀಡಿದ ಹೇಳಿಕೆಗೆ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಸ್ವಾಮೀಜಿ, 'ಭೋವಿ ಹಾಗೂ ಲಂಬಾಣಿ ಸಮುದಾಯದ ಶಾಸಕರು ಹಾಗೂ ಮಠಾಧೀಶರೊಂದಿಗೆ ಒಳಮೀಸಲಾತಿ ಕುರಿತು ಚರ್ಚೆ ನಡೆಸಲಾಗಿದೆ' ಎಂಬ ಸಚಿವರ ಹೇಳಿಕೆಯನ್ನು ಅಲ್ಲಗಳೆದರು.

'ಆಯೋಗದ ವರದಿ ಪರಿಶಿಷ್ಟ ಜಾತಿಯ 99 ಜಾತಿಗಳಿಗೆ ಮರಣ ಶಾಸನ. ಇದು ಅವೈಜ್ಞಾನಿಕ ವರದಿ. ಈ ವರದಿಯ ಸಾರ್ವಜನಿಕ ಚರ್ಚೆಗೆ ಅವಕಾಶ ಕಲ್ಪಿಸಬೇಕು. ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಜಾತಿಯ ಕಾನೂನು ತಜ್ಞರೊಂದಿಗೆ ಚರ್ಚೆ ನಡೆಸಿ ತೀರ್ಮಾನ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'ಸರ್ಕಾರಕ್ಕೆ ಸಲ್ಲಿಕೆಯಾದ ವರದಿ ಸೋರಿಕೆಯಾಗಿದೆ. ಭೋವಿ, ಲಂಬಾಣಿ, ಕೊರಮ, ಕೊರಚ ಸೇರಿ ಹಲವು ಜಾತಿಗಳನ್ನು ಪಟ್ಟಿಯಿಂದ ಕೈಬಿಡುವ ಯತ್ನ ನಡೆಯುತ್ತಿದೆ. ಸಮುದಾಯದ ಒಗ್ಗಟ್ಟು ಮುರಿಯಲು ಅವಕಾಶ ನೀಡಬಾರದು' ಎಂದರು.

'ಆದಿ ಕರ್ನಾಟಕ, ಆದಿ ದ್ರಾವಿಡ, ಭೋವಿ, ಕೊರಮ, ಲಂಬಾಣಿ ಹಾಗೂ ಕೊರಚ ಸಮುದಾಯಕ್ಕೆ ಮಾತ್ರ ಕರ್ನಾಟಕದಲ್ಲಿ ಪರಿಶಿಷ್ಟ ಜಾತಿ ಸೌಲಭ್ಯ ಸಂವಿಧಾನಬದ್ಧವಾಗಿ ಸಿಕ್ಕಿದೆ. ಕೆಲ ಉಪಜಾತಿಗಳನ್ನು ಬಳಿಕ ಸೇರಿಸಲಾಗಿದೆ. ಸ್ಪೃಶ್ಯ ಮತ್ತು ಅಸ್ಪೃಶ್ಯ ಎಂಬ ಅಸಾಂವಿಧಾನಿಕ ಪದಗಳನ್ನು ಬಳಸಿ ಮೀಸಲಾತಿ ವಂಚಿಸಲು ಸಾಧ್ಯವಿಲ್ಲ' ಎಂದರು.

ಅನಗತ್ಯ ಗೊಂದಲ ಸೃಷ್ಟಿ: ಸಚಿವ

ಭೋವಿ, ಲಂಬಾಣಿ ಸಮುದಾಯಗಳನ್ನು ಪರಿಶಿಷ್ಟ ಜಾತಿ ಪಟ್ಟಿಯಿಂದ ಕೈಬಿಡುವ ಪ್ರಯತ್ನ ನಡೆಯುತ್ತಿಲ್ಲ. ಈ ಬಗ್ಗೆ ಅನಗತ್ಯ ಗೊಂದಲ ಸೃಷ್ಟಿಯಾಗಿವೆ ಎಂದು ಸಚಿವ ಎ.ನಾರಾಯಣಸ್ವಾಮಿ ಅಭಿಪ್ರಾಯಪಟ್ಟರು.

ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, 'ಮೀಸಲಾತಿಯಿಂದ ಕೈಬಿಡುವ ಬಗ್ಗೆ ಆಯೋಗದ ವರದಿಯಲ್ಲಿ ಉಲ್ಲೇಖವಿಲ್ಲ. ಈ ಬಗ್ಗೆ ಚರ್ಚೆಗಳು ನಡೆಯುತ್ತಿವೆ' ಎಂದು ಪುನರುಚ್ಚರಿಸಿದರು.



ಆಯೋಗದ ವರದಿಗೆ ಬಹುಸಂಖ್ಯಾತರ ವಿರೋಧ ಇದೆ. ಸರ್ಕಾರದ ನಿಲುವು ಆಧರಿಸಿ ಹೋರಾಟದ ರೂಪುರೇಷೆ ಸಿದ್ಧವಾಗಲಿದೆ.
ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ
ಭೋವಿ ಗುರುಪೀಠ, ಚಿತ್ರದುರ್ಗ

'ಜಾತಿ ಗಣತಿ ವರದಿ ಸ್ವೀಕಾರಕ್ಕೆ ಏಕೆ ಹಿಂದೇಟು?'

ಬೆಂಗಳೂರು: ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಸಮಗ್ರ ಅಧ್ಯಯನ ನಡೆಸಿ ಸಿದ್ಧಪಡಿಸಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಗಣತಿ (ಜಾತಿ ಗಣತಿ) ವರದಿ ಸ್ವೀಕರಿಸಲು ರಾಜ್ಯ ಸರ್ಕಾರ ಏಕೆ ಹಿಂದೇಟು ಹಾಕುತ್ತಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

ಇಲ್ಲಿನ ಕಾಂಗ್ರೆಸ್ ಭವನದಲ್ಲಿ ಕೆಪಿಸಿಸಿ ಶುಕ್ರವಾರ ಆಯೋಜಿಸಿದ್ದ ಮಾಜಿ ಪ್ರಧಾನಿ ರಾಜೀವ್ ಗಾಂಧಿ ಮತ್ತು ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರ ಜನ್ಮದಿನಾಚರಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ಹಿಂದುಳಿದ ವರ್ಗಗಳ ಆಯೋಗ ಸಲ್ಲಿಸಿರುವ ವರದಿಯನ್ನು ಸರ್ಕಾರಿ ಶಾಲಾ ಶಿಕ್ಷಕರ ಮೂಲಕ ಸಿದ್ಧಪಡಿಸಲಾಗಿದೆ. ಅದು ಖಾಸಗಿ ವರದಿಯಲ್ಲ. ವರದಿಯಲ್ಲಿ ಒಂದು ಜಾತಿಯ ಪರ ಏನಾದರೂ ಶಿಫಾರಸು ಮಾಡಲಾಗಿದೆಯೆ? ಎಲ್ಲ ಜಾತಿಗಳ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿ ಕುರಿತು ಸಮೀಕ್ಷೆ ನಡೆಸಲಾಗಿದೆ. ದೇಶದ ಸಂಪತ್ತು, ಅಧಿಕಾರ ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗಬೇಕು. ಅದಕ್ಕೆ ಪೂರಕವಾಗಿ ಜಾತಿ ಗಣತಿ ವರದಿಯನ್ನು ಸ್ವೀಕರಿಸಬೇಕು' ಎಂದು ಹೇಳಿದರು.

ಸಂವಿಧಾನದ ತತ್ವದಲ್ಲಿ ನಂಬಿಕೆಯುಳ್ಳ ಸರ್ಕಾರ ರಚನೆಯೇ ಗುರಿ: ಸೋನಿಯಾ

ನವದೆಹಲಿ (ಪಿಟಿಐ): '2024ರಲ್ಲಿ ನಡೆಯುವ ಲೋಕಸಭಾ ಚುನಾವಣೆಗಾಗಿ ವ್ಯವಸ್ಥಿತವಾಗಿ ಸಿದ್ಧತೆ ಆರಂಭಿಸಬೇಕು. ಸಂವಿಧಾನದ ಆಶಯ–ತತ್ವಗಳಲ್ಲಿ ನಂಬಿಕೆ ಹೊಂದಿರುವಂತಹ ಸರ್ಕಾರ ರಚನೆಯೇ ನಮ್ಮ ಗುರಿಯಾಗಿರಬೇಕು' ಎಂದು ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಶುಕ್ರವಾರ ಹೇಳಿದರು.

ಅವರು 19 ವಿರೋಧ ಪಕ್ಷಗಳ ಮುಖಂಡರೊಂದಿಗೆ ಶುಕ್ರವಾರ ನಡೆಸಿದ ವರ್ಚುವಲ್ ಸಭೆಯಲ್ಲಿ ಮಾತನಾಡಿದರು. ಕೆಲವು ರಾಜ್ಯಗಳಲ್ಲಿ ಮುಂದಿನ ವರ್ಷ ನಡೆಯಲಿರುವ ವಿಧಾನಸಭೆ ಚುನಾವಣೆಗೆ ಕಾರ್ಯತಂತ್ರ ರೂಪಿಸುವುದು ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಕೈಗೊಳ್ಳಬೇಕಾದ ಹೋರಾಟಕ್ಕೆ ಸಂಬಂಧಿಸಿ ವಿರೋಧ ಪಕ್ಷಗಳಲ್ಲಿ ಒಮ್ಮತ ಮೂಡಿಸುವುದು ಸಹ ಸಭೆಯ ಉದ್ದೇಶವಾಗಿತ್ತು ಎಂದು ಮೂಲಗಳು ಹೇಳಿವೆ.

ಭಯೋತ್ಪಾದನೆಯಿಂದ ಸ್ಥಾಪಿಸಿದ ಸಾಮ್ರಾಜ್ಯ ಶಾಶ್ವತವಲ್ಲ: ಮೋದಿ

ನವದೆಹಲಿ: 'ವಿನಾಶಕಾರಿ ಮತ್ತು ಭಯೋತ್ಪಾದನೆ ಪಡೆಗಳು ಕೆಲ ಕಾಲ ಮಾತ್ರ ಪ್ರಾಬಲ್ಯ ಸಾಧಿಸಬಹುದು. ಆದರೆ, ಎಂದಿಗೂ ಶಾಶ್ವತವಲ್ಲ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಗುಜರಾತ್‌ನ ಪ್ರಸಿದ್ಧ ಸೋಮನಾಥ ದೇವಸ್ಥಾನದ ವಿವಿಧ ಯೋಜನೆಗಳಿಗೆ ವರ್ಚುವಲ್ ಕಾರ್ಯಕ್ರಮದಲ್ಲಿ ಚಾಲನೆ ನೀಡಿ ಮಾತನಾಡಿದ ಅವರು, 'ವಿನಾಶಕಾರಿ ಪಡೆಗಳಿಂದ ಮತ್ತು ಭಯೋತ್ಪಾದನೆ ಸಿದ್ಧಾಂತದಿಂದ ಮಾನವೀಯತೆಯನ್ನು ಎಂದಿಗೂ ಹತ್ತಿಕ್ಕಲು ಸಾಧ್ಯವಿಲ್ಲ. ಅದೇ ರೀತಿ, ಭಯೋತ್ಪಾದನೆ ಆಧಾರದ ಮೇಲೆ ಸ್ಥಾಪಿಸಿದ ಸಾಮ್ರಾಜ್ಯಗಳೂ ಶಾಶ್ವತವಾಗಿ ಉಳಿಯಲು ಸಾಧ್ಯವೇ ಇಲ್ಲ' ಎಂದು ಪ್ರತಿಪಾದಿಸಿದ್ದಾರೆ.

'ಸೋಮನಾಥ ದೇವಾಲಯವನ್ನು ಹಲವು ಬಾರಿ ನಾಶಗೊಳಿಸಲಾಗಿತ್ತು. ಇಲ್ಲಿನ ವಿಗ್ರಹಗಳನ್ನು ವಿರೂಪಗೊಳಿಸಲಾಗಿತ್ತು. ಆದರೆ, ದೇವಾಲಯ ಮತ್ತೆ ತನ್ನ ವೈಭವ ಪಡೆದುಕೊಂಡಿದೆ. ಇದು ನಮ್ಮಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಿದೆ' ಎಂದು ಹೇಳಿದ್ದಾರೆ.

ಅಫ್ಗಾನಿಸ್ತಾನವನ್ನು ತಾಲಿಬಾನ್ ವಶಪಡಿಸಿಕೊಂಡ ಹಿನ್ನೆಲೆಯಲ್ಲಿ ಪ್ರಧಾನಿ ಅವರು ಈ ಹೇಳಿಕೆ ನೀಡಿದ್ದಾರೆ.

ವಿಶ್ವ ಟೇಬಲ್ ಟೆನಿಸ್ ಟೂರ್ನಿ: ಮಿಶ್ರ ಡಬಲ್ಸ್‌ನಲ್ಲಿ ಗೆದ್ದ ಭಾರತದ ಜೋಡಿ

ಮಣಿಕಾ–ಸತ್ಯನ್‌ಗೆ ಪ್ರಶಸ್ತಿ ಗರಿ

ಬುಡಾಪೆಸ್ಟ್ (ಪಿಟಿಐ): ಅಮೋಘ ಆಟವಾಡಿದ ಭಾರತದ ಮಣಿಕಾ ಬಾತ್ರಾ ಹಾಗೂ ಜಿ.ಸತ್ಯನ್ ಅವರು ವಿಶ್ವ ಟೇಬಲ್ ಟೂರ್ನಿಯ ಮಿಶ್ರ ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿಗೆ ಮುತ್ತಿಕ್ಕಿದ್ದಾರೆ. ಇಲ್ಲಿ ನಡೆದ ಫೈನಲ್ ಹಣಾಹಣಿಯಲ್ಲಿ ಅವರು ಹಂಗರಿಯ ಜೋಡಿಯನ್ನು ಮಣಿಸುವ ಮೂಲಕ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅನುಭವಿಸಿದ್ದ ನಿರಾಸೆಯನ್ನು ಮರೆತರು.

ಶುಕ್ರವಾರ ನಡೆದ ಪಂದ್ಯದಲ್ಲಿ ಭಾರತದ ಜೋಡಿಯು 11-9, 9-11, 12-10, 11-6ರಿಂದ ಹಂಗರಿಯ ಡೋರಾ ಮ್ಯಾಡರಾಸ್ ಹಾಗೂ ನ್ಯಾಂಡೊರ್ ಎಸೆಕಿ ಜೋಡಿಯನ್ನು ಪರಾಭವಗೊಳಿಸಿತು.

ಮಣಿಕಾ ಹಾಗೂ ಸತ್ಯನ್‌ಗೆ ಇದು ಸ್ಮರಣೀಯ ಗೆಲುವಾಗಿದೆ. ಏಕೆಂದರೆ ಈ ಜೋಡಿ ಮಿಶ್ರ ಡಬಲ್ಸ್ ವಿಭಾಗದಲ್ಲಿ ಜೊತೆಯಾಗಿ ಹೆಚ್ಚು ಪಂದ್ಯಗಳನ್ನು ಆಡಿಲ್ಲ.



ಪ್ರಶಸ್ತಿಯೊಂದಿಗೆ ಮಣಿಕಾ ಬಾತ್ರಾ– ಜಿ.ಸತ್ಯನ್– ಟ್ವಿಟರ್ ಚಿತ್ರ

ಈ ಫಲಿತಾಂಶದಿಂದ ಖುಷಿಯಾಗಿರುವ ಸತ್ಯನ್ ಮತ್ತು ಮಣಿಕಾ 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲೂ ಜೊತೆಯಾಗಿ ಕಣಕ್ಕಿಳಿಯಲು ಚಿಂತನೆ ನಡೆಸಿದ್ದಾರೆ.

ಮಣಿಕಾ ಅವರು ಶರತ್ ಕಮಲ್ ಜೊತೆಗೂಡಿ ಏಷ್ಯನ್ ಗೇಮ್ಸ್‌ನಲ್ಲಿ ಕಂಚು ಗೆದ್ದುಕೊಂಡಿದ್ದರು. ಟೋಕಿಯೊ ಒಲಿಂಪಿಕ್ಸ್‌ನಲ್ಲೂ ಕಣಕ್ಕಿಳಿದಿದ್ದರು

ಜೊತೆಗೂಡಿ ಕಣಕ್ಕಿಳಿಯಲು ಮಣಿಕಾ ನನ್ನನ್ನು ಕೇಳಿಕೊಂಡರು. ಒಂದಾಗಿ ಆಡಲು ಸೂಕ್ತ ಸಮಯ ಎಂದು ನಮಗಿಬ್ಬರಿಗೂ ಅನಿಸಿತು. ಅತ್ಯುತ್ತಮ ಸಾಮರ್ಥ್ಯ ಮೂಡಿಬಂದಿದೆ.

ಜಿ.ಸತ್ಯನ್, ಭಾರತದ ಆಟಗಾರ

ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಮಣಿಕಾ ಸೆಮಿಫೈನಲ್‌ಗೂ ತಲುಪಿದ್ದಾರೆ. ಗುರುವಾರ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ ಅವರು 7-11, 11-1, 8-11, 13-11, 11-6ರಿಂದ ಭಾರತದವರೇ ಆದ ಶ್ರೀಜಾ ಅಕುಲ್ ವಿರುದ್ಧ ಜಯಿಸಿದ್ದರು.

ಟೋಕಿಯೊ ಒಲಿಂಪಿಕ್ಸ್‌ನ ಸಿಂಗಲ್ಸ್ ವಿಭಾಗದಲ್ಲಿ ಸತ್ಯನ್ ಮೊದಲ ಸುತ್ತಿನಲ್ಲೇ ಹೊರಬಿದ್ದಿದ್ದರು.

ರಾಹುಲ್‌ಗೆ 8 ವಿಕೆಟ್

ಬೆಂಗಳೂರು: ರಾಹುಲ್ ಪ್ರಸನ್ನ (8 ವಿಕೆಟ್, 47 ರನ್) ಅವರ ಭರ್ಜರಿ ಆಲ್‌ರೌಂಡ್ ಆಟವು ವಲ್ಚರ್ಸ್ ಕ್ರಿಕೆಟ್ ಕ್ಲಬ್ ತಂಡಕ್ಕೆ ಜಯ ತಂದುಕೊಟ್ಟಿತು. ಇಲ್ಲಿ ನಡೆಯುತ್ತಿರುವ ಕೆಎಸ್‌ಸಿಎ ಅಂತರ ಕ್ಲಬ್ ಟೂರ್ನಿಯಲ್ಲಿ ಶುಕ್ರವಾರ ಆ ತಂಡವು 9 ವಿಕೆಟ್‌ಗಳಿಂದ ಜವಾಹರ್ ಸ್ಪೋರ್ಟ್ಸ್ ಕ್ಲಬ್ ತಂಡವನ್ನು ಮಣಿಸಿತು.

ಸಂಕ್ಷಿಪ್ತ ಸ್ಕೋರು: ಜವಾಹರ್ ಸ್ಪೋರ್ಟ್ಸ್ ಕ್ಲಬ್ (2): 33.5 ಓವರ್‌ಗಳಲ್ಲಿ 116 (ಪೃಥ್ವಿರಾಜ್ ಟಿ.ಎನ್. 39; ರಾಹುಲ್ ಪ್ರಸನ್ನ 14ಕ್ಕೆ8). ವಲ್ಚರ್ಸ್ ಕ್ರಿಕೆಟ್ ಕ್ಲಬ್: 16.2 ಓವರ್‌ಗಳಲ್ಲಿ 1 ವಿಕೆಟ್‌ಗೆ 120 (ರಾಹುಲ್ ಪ್ರಸನ್ನ 47, ಸಮಿತ್ ದ್ರಾವಿಡ್ ಔಟಾಗದೆ 63). ಫಲಿತಾಂಶ: ವಲ್ಚರ್ಸ್ ಸಿಸಿಗೆ 9 ವಿಕೆಟ್‌ಗಳ ಜಯ.

ಜುಪಿಟರ್ ಕ್ರಿಕೆಟರ್ಸ್: 47 ಓವರ್‌ಗಳಲ್ಲಿ 226 (ಗೌರವ್ ಶಾನ್‌ಭಾಗ್ 50, ಹೇಮಂಗ್ ಶ್ರೀನಿವಾಸನ್ 40; ಸಾಹಿಲ್ ಮಲಿಕ್ 42ಕ್ಕೆ2, ಅರವಿಂದ್ ಜೆ.ಪಿ. 35ಕ್ಕೆ 3, ಅಸ್ವಿನ್ ದಾಸ್ 45ಕ್ಕೆ 3). ಸೋಷಿಯಲ್ ಕ್ರಿಕೆಟರ್ಸ್: 32.5 ಓವರ್ ಗಳಲ್ಲಿ 4ಕ್ಕೆ 227 (ಹರ್ಷ ಪಿ. ಫೌಜ್‌ದಾರ್ ಔಟಾಗದೆ 72, ಅಜಿತೇಶ್ ಜಿ. ಔಟಾಗದೆ 88). ಫಲಿತಾಂಶ: ಸೋಷಿಯಲ್ ಕ್ರಿಕೆಟರ್ಸ್‌ಗೆ 6 ವಿಕೆಟ್ ಜಯ.

ಒಲಿಂಪಿಕ್ಸ್‌ಗೆ ರಾಜ್ಯದಿಂದ ಪ್ರತಿಭಾನ್ವೇಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ಒಲಿಂಪಿಕ್ಸ್‌ಗೆ ಕರ್ನಾಟಕದಿಂದ ಹೆಚ್ಚು ಕ್ರೀಡಾಪಟುಗಳು ಆಯ್ಕೆಯಾಗುವ ಉದ್ದೇಶದಿಂದ ಖೇಲೊ ಇಂಡಿಯಾ ಮಾದರಿಯಲ್ಲಿ ರಾಜ್ಯ ಸರ್ಕಾರ ಅಮೃತ ಕ್ರೀಡಾ ದತ್ತು ಯೋಜನೆ ಜಾರಿಗೆ ತಂದಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ನಾರಾಯಣಗೌಡ ಶುಕ್ರವಾರ ತಿಳಿಸಿದ್ದಾರೆ.

ಪದಕ ಗೆಲ್ಲುವ ಸಾಮರ್ಥ್ಯ ಇರುವ 75 ಅಥ್ಲೀಟ್‌ಗಳನ್ನು ಆಯ್ಕೆಮಾಡಿ ತರಬೇತಿ ನೀಡುವುದು ಯೋಜನೆಯ ಗುರಿಯಾಗಿದ್ದು ಇದಕ್ಕಾಗಿ ಉನ್ನತಾಧಿಕಾರ ಸಮಿತಿ ರಚಿಸಲಾಗಿದೆ. ಕ್ರೀಡಾ ಸಚಿವರು ಇದರ ಅಧ್ಯಕ್ಷರಾಗಿದ್ದು ರಾಜ್ಯ ಒಲಿಂಪಿಕ್ ಸಂಸ್ಥೆ ಅಧ್ಯಕ್ಷರು ಉಪಾಧ್ಯಕ್ಷರಾಗಿರುವರು. ಹಾಕಿ ಆಟಗಾರ ವಿ.ಆರ್.ರಘುನಾಥ್, ಈಜು ಕೋಚ್ ನಿಹಾರ್ ಅಮೀನ್ ಮತ್ತು ಬ್ಯಾಡ್ಮಿಂಟನ್ ಆಟಗಾರ ಅನೂಪ್ ಶ್ರೀಧರ್, ಕ್ರೀಡಾ ವಿಜ್ಞಾನ ಕೇಂದ್ರದ ತಜ್ಞರು ಸಮಿತಿಯ ಸದಸ್ಯರಾಗಿರುವರು.

ಸಮಿತಿ ಆಯ್ಕೆ ಮಾಡಿದ ಕ್ರೀಡಾಪಟುಗಳಿಗೆ ಖೇಲೊ ಇಂಡಿಯಾ ಯೋಜನೆಯ ಅಕಾಡೆಮಿಗಳಲ್ಲಿ ತರಬೇತಿ ನೀಡಲಾಗುವುದು. ಪ್ರತಿ ಕ್ರೀಡಾಪಟುವಿಗೆ ವಾರ್ಷಿಕ ಗರಿಷ್ಠ ₹ 5 ಲಕ್ಷದ ವರೆಗೆ ಪ್ರೋತ್ಸಾಹಧನ ಸಿಗಲಿದೆ. ವೈಜ್ಞಾನಿಕವಾಗಿ ಪ್ರತಿಭಾನ್ವೇಷಣೆ ನಡೆಯಲಿದೆ.

ರಾಜ್ಯಪಾಲರಿಂದ ತಲಾ ₹ 1 ಲಕ್ಷ

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡ ಕರ್ನಾಟಕದ ಕ್ರೀಡಾಪಟುಗಳಿಗೆ ರಾಜ್ಯಪಾಲರು ತಲಾ ₹ 1 ಲಕ್ಷ ನೀಡಲಿದ್ದಾರೆ. ಗಾಲ್ಫರ್ ಅದಿತಿ ಅಶೋಕ್, ಈಕ್ವೆಸ್ಟ್ರಿಯನ್ ಫವಾದ್ ಮಿರ್ಜಾ, ಈಜುಪಟು ಶ್ರೀಹರಿ ನಟರಾಜ್ ಅವರೊಂದಿಗೆ ಮಹಿಳಾ ಹಾಕಿ ತಂಡದ ಸಹಾಯಕ ಕೋಚ್ ಅಂಕಿತಾ ಸುರೇಶ್ ಅವರಿಗೂ ಗೌರವ ಸಲ್ಲಲಿದೆ. ರಾಜಭವನದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರು ಚೆಕ್ ಹಸ್ತಾಂತರಿಸಲಿದ್ದಾರೆ.

ಲಾಂಗ್ ಜಂಪ್: ಫೈನಲ್‌ಗೆ ಶೈಲಿ

ನೈರೋಬಿ (ಪಿಟಿಐ): ಭಾರತದ ಶೈಲಿ ಸಿಂಗ್ ಇಲ್ಲಿ ನಡೆಯುತ್ತಿರುವ 20 ವರ್ಷದೊಳಗಿನವರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಲಾಂಗ್‌ಜಂಪ್ ಸ್ಪರ್ಧೆಯ ಫೈನಲ್ ಪ್ರವೇಶಿಸಿದರು. ಶುಕ್ರವಾರ ನಡೆದ ಅರ್ಹತಾ ಸುತ್ತಿನಲ್ಲಿ ಅವರು 6.40 ಮೀಟರ್ ದೂರ ಜಿಗಿದು ಅಗ್ರ ಸ್ಥಾನ ಗಳಿಸಿದರು.

ಉತ್ತರಪ್ರದೇಶದ ಝಾನ್ಸಿಯ 17 ವರ್ಷದ ಶೈಲಿ ಬೆಂಗಳೂರಿನ ಅಂಜು ಬಾಬಿ ಜಾರ್ಜ್ ಅಕಾಡೆಮಿಯಲ್ಲಿ ಬಾಬಿ ಜಾರ್ಜ್ ಬಳಿ ತರಬೇತಿ ಪಡೆಯುತ್ತಿದ್ದಾರೆ. 'ಬಿ' ಗುಂಪಿನ ಅರ್ಹತಾ ಸುತ್ತಿನ ಮೂರನೇ ಪ್ರಯತ್ನದಲ್ಲಿ ಅವರು ಗರಿಷ್ಠ ಸಾಧನೆಯೊಂದಿಗೆ ಚಿನ್ನದ ಪದಕದ ಸುತ್ತು ಪ್ರವೇಶಿಸಿದರು.



ಶೈಲಿ ಸಿಂಗ್

ಭಾನುವಾರ ನಡೆಯಲಿರುವ ಫೈನಲ್ ಸ್ಪರ್ಧೆಯಲ್ಲಿ ಅವರು ಸ್ವೀಡನ್‌ನ ಮಾಜಾ ಅಸ್ಕಗ್ (6.39 ಮೀ), ಬ್ರೆಜಿಲ್‌ನ ಲಿಸಾಂಡ್ರ ಮೇಸಾ (6.36 ಮೀ), ಜಮೈಕಾದ ಶಾಂತೆ ಫೋರ್‌ಮನ್ (6.27 ಮೀ) ಮತ್ತು ಉಕ್ರೇನ್‌ನ ಮರಿಯಾ ಹರಿಲೋವ (6.24 ಮೀ) ಅವರ ಸವಾಲನ್ನು ಎದುರಿಸಬೇಕಾಗಿದೆ.

ಮಹಿಳೆಯರ 100 ಮೀ ಹರ್ಡಲ್ಸ್‌ನಲ್ಲಿ ನಂದಿನಿ ಅಗಸರ ಅವರು ಸೆಮಿಫೈನಲ್ ಪ್ರವೇಶಿಸಿದರು. ನಾಲ್ಕನೇ ಹೀಟ್ಸ್‌ನಲ್ಲಿ ನಾಲ್ಕನೆಯವರಾದ ಅವರು ಒಟ್ಟಾರೆ 21ನೇ ಸ್ಥಾನ ಗಳಿಸಿದರು. ಪುರುಷರ 110 ಮೀ ಹರ್ಡಲ್ಸ್‌ನಲ್ಲಿ ತೇಜಸ್ ಶಿರ್ಸೆ, ಮಹಿಳೆಯರ 1500 ಮೀ ಓಟದಲ್ಲಿ ಪೂಜಾ ಮತ್ತು ಪುರುಷರ 200 ಮೀ ಓಟದಲ್ಲಿ ಷಣ್ಮುಖ ಶ್ರೀನಿವಾಸ್ ನಿರಾಸೆ ಅನುಭವಿಸಿದರು.

ಪವನ್ ಉಳಿಸಿಕೊಂಡ ಬುಲ್ಸ್

ಮುಂಬೈ (ಪಿಟಿಐ): ಪ್ರೊ ಕಬಡ್ಡಿ ಲೀಗ್ (ಪಿಕೆಎಲ್) ಟೂರ್ನಿಯಲ್ಲಿ ಆಡುವ ಬೆಂಗಳೂರು ಬುಲ್ಸ್ ತಂಡವು ರೈಡರ್ ಪವನ್ ಕುಮಾರ್ ಶೆರಾವತ್ ಅವರನ್ನು ತನ್ನಲ್ಲೇ ಉಳಿಸಿಕೊಂಡಿದೆ. ಡಿಸೆಂಬರ್‌ನಲ್ಲಿ ನಡೆಯಲಿರುವ ಎಂಟನೇ ಆವೃತ್ತಿಗೆ ಒಟ್ಟು 59 ಆಟಗಾರರರು ತಮ್ಮ ತಂಡಗಳಲ್ಲೇ ಉಳಿದುಕೊಂಡಿದ್ದಾರೆ ಎಂದು ಲೀಗ್‌ನ ಆಯೋಜನಾ ಸಂಸ್ಥೆ ಮಶಾಲ್ ಸ್ಪೋರ್ಟ್ಸ್ ಶುಕ್ರವಾರ ತಿಳಿಸಿದೆ.

ತಂಡಗಳಿಂದ ಬಿಡುಗಡೆಗೊಂಡ ಆಟಗಾರರು ಇದೇ 29ರಿಂದ 31ರವರೆಗೆ ನಡೆಯುವ ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಬೆಂಗಾಲ್ ವಾರಿಯರ್ಸ್ ತಂಡವು ನಾಯಕ ಮಣಿಂದರ್ ಸಿಂಗ್ ಅವರನ್ನು ಉಳಿಸಿಕೊಂಡಿದೆ.



ಅಭ್ಯಾಸನಿರತ ಬಿಎಫ್‌ಸಿ ತಂಡದ ಕ್ಲೀಟನ್ ಸಿಲ್ವಾ (ಮಧ್ಯೆ)– ಟ್ವಿಟರ್ ಚಿತ್ರ

ಎಎಫ್‌ಸಿ ಕಪ್ ಫುಟ್‌ಬಾಲ್: ಬಿಎಫ್‌ಸಿಗೆ ಬಶುಂಧರಾ ಸವಾಲು

ಮಾಲೆ, ಮಾಲ್ಡಿವ್ಸ್ (ಪಿಟಿಐ): ಗೆಲುವಿನ ಹಳಿಗೆ ಮರಳುವ ತವಕದಲ್ಲಿರುವ ಬೆಂಗಳೂರು ಎಫ್‌ಸಿ (ಬಿಎಫ್‌ಸಿ) ತಂಡವು ಎಎಫ್‌ಸಿ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಶನಿವಾರ ಬಾಂಗ್ಲಾದೇಶದ ಬಶುಂಧರಾ ಕಿಂಗ್ಸ್ ಸವಾಲಿಗೆ ಸಜ್ಜಾಗಿದೆ.

'ಡಿ' ಗುಂಪಿನ ಈ ಹಿಂದಿನ ಪಂದ್ಯದಲ್ಲಿ ಎಟಿಕೆ ಮೋಹನ್ ಬಾಗನ್ ವಿರುದ್ಧ 0-2 ಅಂತರದಿಂದ ಸುನಿಲ್ ಚೆಟ್ರಿ ನಾಯಕತ್ವದ ಬಿಎಫ್‌ಸಿ ಸೋಲು ಕಂಡಿತ್ತು. ಆದರೆ ಈ ಸೋಲು ಬಾಂಗ್ಲಾದೇಶ ಪ್ರೀಮಿಯರ್ ಲೀಗ್ ಚಾಂಪಿಯನ್ ತಂಡವನ್ನು ಎದುರಿಸಲು ತಮ್ಮ ಮೇಲೆ ಯಾವುದೇ ಒತ್ತಡ ತಂದಿಲ್ಲ ಎಂದು ಮುಖ್ಯ ಕೋಚ್ ಮಾರ್ಕೊ ಪೆಜೌಲಿ ಹೇಳಿದ್ದಾರೆ.

ಗುಂಪು ಹಂತದ ಮೊದಲ ಹಣಾಹಣಿಯಲ್ಲಿ ಮಜಿಯಾ ಸ್ಪೋರ್ಟ್ಸ್ ಆ್ಯಂಡ್ ರಿಕ್ರಿಯೇಷನ್ಸ್ ಕ್ಲಬ್ ತಂಡದ ಎದುರು 2-0ಯಿಂದ ಜಯ ಸಾಧಿಸಿರುವ ಬಶುಂಧರಾ ಕಿಂಗ್ಸ್ ಕೂಡ ಆತ್ಮವಿಶ್ವಾಸದಲ್ಲಿದೆ. ಹೀಗಾಗಿ ಜಿದ್ದಾಜಿದ್ದಿ ಪೈಪೋಟಿಯನ್ನು ನಿರೀಕ್ಷಿಸಲಾಗಿದೆ.

ಪಂದ್ಯ ಆರಂಭ: ಸಂಜೆ 4.30

ಸಂಕ್ಷಿಪ್ತ ಸುದ್ದಿ

ಹಾಕಿ: ಮಿಜೋರಾಂಗೆ ಲಾಲ್‌ರೆಮ್ಸಿಯಾಮಿ ಕೋಚ್

ಐಜ್ವಾಲ್ (ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡ ಭಾರತ ಮಹಿಳಾ ಹಾಕಿ ತಂಡದ ಸದಸ್ಯೆ ಲಾಲ್‌ರೆಮ್ಸಿಯಾಮಿ ಅವರನ್ನು ಮಿಜೋರಾಂ ಸರ್ಕಾರವು ರಾಜ್ಯ ಹಾಕಿ ತಂಡದ ಮುಖ್ಯ ಕೋಚ್ ಆಗಿ ನೇಮಕ ಮಾಡಿದೆ.

ಒಲಿಂಪಿಕ್ಸ್‌ನಲ್ಲಿ ಭಾರತದ ಮಹಿಳೆಯರ ತಂಡದವರು ಸೆಮಿಫೈನಲ್ ಪ್ರವೇಶಿಸಿದ ಐತಿಹಾಸಿಕ ಸಾಧನೆ ಮಾಡಿದ್ದರು. ಕಂಚಿನ ಪದಕದ ಪಂದ್ಯದಲ್ಲಿ ಸೋತರೂ ತಂಡದ ಆಟಗಾರ್ತಿಯರ ಸಾಮರ್ಥ್ಯಕ್ಕೆ ದೇಶದೆಲ್ಲೆಡೆಯಿಂದ ಮೆಚ್ಚುಗೆಯ ನುಡಿಗಳು ಕೇಳಿಬಂದಿದ್ದವು. ಲಾಲ್‌ರೆಮ್ಸಿಯಾಮಿ, ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡ ಮಿಜೋರಾಂನ ಮೊದಲ ಮಹಿಳೆ ಆಗಿದ್ದಾರೆ.

ಜೂನಿಯರ್ ಕುಸ್ತಿ: ಬೆಳ್ಳಿ ಗೆದ್ದ ಸಂಜು, ಭತೇರಿ

ಯೂಫ, ರಷ್ಯಾ (ಪಿಟಿಐ): ಫೈನಲ್ ಬೌಟ್‌ನಲ್ಲಿ ನಿರಾಸೆ ಕಂಡ ಭಾರತದ ಸಂಜು ದೇವಿ ಮತ್ತು ಭತೇರಿ ಅವರು ವಿಶ್ವ ಜೂನಿಯರ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕಕ್ಕೆ ಸಮಾಧಾನಪಟ್ಟುಕೊಂಡರು.

ಶುಕ್ರವಾರ ನಡೆದ ಚಿನ್ನದ ಪದಕದ ಹಣಾಹಣಿಯ 65 ಕೆಜಿ ವಿಭಾಗದಲ್ಲಿ ಭತೇರಿ ಅವರು ಮಾಲ್ಡೋವದ ಇಟಿನಾ ರಿಂಗಾಸಿ ವಿರುದ್ಧ ಸೋಲೊಪ್ಪಿಕೊಂಡರು. 62 ಕೆಜಿ ವಿಭಾಗದಲ್ಲಿ ಸಂಜು ದೇವಿ ರಷ್ಯಾದ ಅಲಿನಾ ಕಾಸಬೀವ ಎದುರು ಸೋತರು.

76 ಕೆಜಿ ವಿಭಾಗದಲ್ಲಿ ಬಿಪಾಶ ಅವರು ಬೆಳ್ಳಿ ಪದಕ ಗೆದ್ದರೆ 50 ಕೆಜಿ ವಿಭಾಗದಲ್ಲಿ ಸಿಮ್ರಾನ್ ಮತ್ತು 55 ಕೆಜಿ ವಿಭಾಗದಲ್ಲಿ ಸಿತೊ ಕಂಚಿನ ಪದಕ ಗೆದ್ದರು. ಸನೇಹ 72 ಕೆಜಿ ವಿಭಾಗದ ಕಂಚಿನ ಪದಕದ ಬೌಟ್‌ನಲ್ಲಿ ಗಾಯಗೊಂಡು ಅರ್ಧದಲ್ಲೇ ವಾಪಸಾದರು.

ಕ್ರಿಕೆಟಿಗ ಕ್ರಿಸ್ ಕೇನ್ಸ್ ಚೇತರಿಕೆ




ಕ್ರಿಸ್ ಕೇನ್ಸ್

ಸಿಡ್ನಿ (ಪಿಟಿಐ): ಅನಾರೋಗ್ಯದಿಂದ ಬಳಲುತ್ತಿದ್ದ ನ್ಯೂಜಿಲೆಂಡ್‌ನ ಮಾಜಿ ಕ್ರಿಕೆಟಿಗ ಕ್ರಿಸ್ ಕೇನ್ಸ್ ಅವರು ಹೃದಯ ಶಸ್ತ್ರಚಿಕಿತ್ಸೆಯ ನಂತರ ಚೇತರಿಸಿಕೊಳ್ಳುತ್ತಿದ್ದು ಜೀವಸುರಕ್ಷಾ ಉಪಕರಣಗಳ ನೆರವು ಇಲ್ಲದೇ ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ಅಪಧಮನಿಯ ಒಳಭಾಗದಲ್ಲಿ ಗೀರು ಉಂಟಾಗುವ ಆ್ಯರೊಟಿಕ್ ಡಿಸೆಕ್ಷನ್ ಎಂಬ ತೊಂದರೆಯಿಂದ ಅವರು ಬಳಲುತ್ತಿದ್ದರು. ಈಗ ಅವರು ಗುಣಮುಖರಾಗುತ್ತಿದ್ದಾರೆ ಎಂದು ಅವರ ವಕೀಲ ಆ್ಯರನ್ ಲಾಯ್ಡ್ ಶುಕ್ರವಾರ ತಿಳಿಸಿದ್ದಾರೆ.

ಅಮೆರಿಕ ಓಪನ್‌ಗೆ ನಡಾಲ್ ಅಲಭ್ಯ

ಮ್ಯಾಡ್ರಿಡ್ (ಎಪಿ): ಸ್ಪೇನ್‌ನ ರಫೆಲ್ ನಡಾಲ್ ಅವರು ಈ ಬಾರಿ ಅಮೆರಿಕ ಓಪನ್ ಟೆನಿಸ್ ಟೂರ್ನಿಯಲ್ಲಿ ಪಾಲ್ಗೊಳ್ಳದೇ ಇರಲು ನಿರ್ಧರಿಸಿದ್ದಾರೆ.



ರಫೆಲ್ ನಡಾಲ್

ಪಾದದಲ್ಲಿ ಗಾಯ ಕಾಣಿಸಿಕೊಂಡಿರುವ ಕಾರಣ ಈ ವರ್ಷ ಯಾವ ಟೂರ್ನಿಯಲ್ಲೂ ಕಣಕ್ಕೆ ಇಳಿಯಲು ಸಾಧ್ಯವಿಲ್ಲ ಎಂದು ಅವರು ಶುಕ್ರವಾರ ತಿಳಿಸಿದ್ದಾರೆ.

ಬಳಲಿಕೆಯ ಕಾರಣದಿಂದ ವಿಂಬಲ್ಡನ್ ಟೂರ್ನಿ ಮತ್ತು ಒಲಿಂಪಿಕ್ಸ್‌ನಲ್ಲಿ ಅವರು ಆಡಿರಲಿಲ್ಲ. ಇದಕ್ಕೂ ಮೊದಲು ಫ್ರೆಂಚ್ ಓಪನ್‌ನ ಸೆಮಿಫೈನಲ್‌ನಲ್ಲಿ ಸರ್ಬಿಯಾದ ನೊವಾಕ್ ಜೊಕೊವಿಚ್ ಎದುರು ಸೋತಿದ್ದರು.